Mr. CHAIRMAN.—The question is :

"That the Mysore Appropriation Bill, 1968, be taken into consideration."

The motion was adopted.

CLAUSES

Mr. CHAIRMAN.—I will now put the clauses to vote. The question is:

"That Clauses 2 and 3 stand part of the Bill."

The motion was adopted

Clauses 2 and 3 were added to the Bill.

Mr. CHAIRMAN.—The question is :

"That the Schedule stand part of the Bill."

The motion was adpoted.

The schedule was added to the Bill.

Mr. CHAIRMAN.—The question is :

"That Clause 1, the Title and the Preamble stand part of the Bill."

The motion was adopted.

Clause 1, the Title and the Preamble were added to the Bill.

Motion to Pass

Sri RAMAKRISHNA HEGDE.—Sir, I beg to move :

"That the Mysore Appropriation Bill, 1968, be passed."

Mr. CHAIRMAN.—The question is :

"That the Mysore Appropriation Bill, 1968, be passed."

The motion was adopted.

BUDGET ESTIMATES FOR 1968-69—DEMANDS FOR GRANTS (DEMAND NOS. 6, 29, 30, 30A, 31, 32, 43, 45, 46, 47, 48 and 50.

(Debate Continued)

Mr. CHAIRMAN.—Now the Demands placed by the hon'ble Minister for Public Works will be under discussion. The hon'ble Leader of the

Opposition wants to finish his speech. So I call upon him to complete his speech.

†ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಅಧ್ಯಕ್ಷರೇ, ಲೋಕೋಪಯೋಗಿ ಇಲಾಖೆ ಬೇಡಿಕೆಯ ಮೇಲೆ ಒಂದೆರಡು ವಿಚಾರಗಳನ್ನು ಮಾತ್ರ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ದಿವಸ ಸುಮಾರು 92 ಕೋಟಿ ರೂಪಾಯಿಗಳಷ್ಟು ದೊಡ್ಡ ಬೇಡಿಕೆಯನ್ನು ನಮ್ಮ ಮುಂದಿಟ್ಟಿದ್ದಾರೆ. ಹೇಗೆ ಈ ಇಲಾಖೆಯಲ್ಲಿ ಖರ್ಚು ಮಾಡುತ್ತಿದ್ದಾರೆಂಬುದನ್ನು ಈ ಖಾತೆಯ ಜವಾಬ್ದಾರಿ ವಹಿಸಿಕೊಂಡಿರುವ ಸಚಿವರಿಗೆ ತಿಳಿಸಲು ಇಷ್ಟಪಡುತ್ತೇನೆ. ಮೊದಲನೆಯದು ಮೈಸೂರು ದೇಶದಲ್ಲಿ ನೀರಾವರಿ ಯೋಜನೆಗಳಿಗೆ ಖರ್ಚು ಮಾಡಿರುವುದಕ್ಕನುಗುಣವಾಗಿ ಎಷ್ಟು ನೀರಾವರಿ ಪ್ರದೇಶ ಹೆಚ್ಚಿದೆ ಎಂದು ವಿಮರ್ಶೆ ಮಾಡಬೇಕಾಗಿದೆ. ಇಡೀ ಭರತ ಖಂಡದಲ್ಲಿ ಮೈಸೂರು ದೇಶದಲ್ಲಿ ಕನಿಷ್ಠ ಪ್ರಮಾಣದ ನೀರಾವರಿ ಪ್ರದೇಶವಿದೆ. ಹಾಗಿದ್ದರೂ ಮೊದಲನೆ, ಎರಡನೆ ಮತ್ತು ಮೂರನೆಯ ಯೋಜನೆಗಳಲ್ಲಿ ಈ ದೇಶದಲ್ಲಿ ನೀರಾವರಿ ಪ್ರದೇಶವನ್ನು ಹೆಚ್ಚು ಮಾಡಬೇಕೆಂದು ಯೋಜನೆಗಳಲ್ಲಿ ಅಳವಡಿಸಿದ್ದರೂ ಹಣ ಖರ್ಚು ಮಾಡಿದರೂ ಫಲಿತಾಂಶ ನೋಡಿದರೆ ಆಶಾದಾಯಕವಾಗಿಲ್ಲ. ಇದಕ್ಕೆ ಕಾರಣ ಈ ಮೂರು ಯೋಜನೆಗಳಲ್ಲಿ ನೀರಾವರಿಗಾಗಿ ಎಷ್ಟು ಖರ್ಚಾಗಬೇಕಾಗಿತ್ತೊ ಅದರಲ್ಲಿ ಬಹು ಭಾಗವನ್ನು ಶರಾವತಿಯ ಕಡೆಗೆ ತಿರುಗಿಸಿದರು.

ಮೂರನೆಯ ಯೋಜನೆಯಲ್ಲಿ ನೀರಾವರಿ ಯೋಜನೆಗೆ ಬೇಕಾಗಿರತಕ್ಕ ಹಣವನ್ನು ಶರಾವತಿ ಅತಿ ಶೀಘ್ರವಾಗಿ ಆಗಬೇಕು, ವಿದ್ಯುಚ್ಛಕ್ತಿಯ ನೆರವು ಬೇಕೆಂಬ ಉದ್ದೇಶದಿಂದ ಅದಕ್ಕೆ ಬದಲಾಯಿಸಿಕೊಂಡಿದ್ದರಿಂದ ಈ ನೀರಾವರಿ ಯೋಜನೆಗಳು ದೇಶದಲ್ಲಿ ಕುಂಠಿತವಾಗಿ ಇವತ್ತು ನೀರಾವರಿ ಯೋಜನೆಯ ಅಭಾವ ಇರುವುದಕ್ಕೆ ಇದೂ ಒಂದು ಕಾರಣ ಎಂದು ವಿಷಾದದಿಂದ ಹೇಳಬೇಕಾಗಿದೆ. ಶರಾವತಿ ಯೋಜನೆ ಪೂರೈಕೆ ಆಗಬೇಕಾದ್ದು ನಿಜ. ಅದಕ್ಕೆ ಎಷ್ಟು ಹಣ ಪೂರೈಕೆ ಆಗಬೇಕಾಗಿತ್ತು, ನೀರಾವರಿ ಯೋಜನೆಗೆ ಎಷ್ಟು ಹಣ ಪೂರೈಕೆಯಾಗಬೇಕಾಗಿತ್ತು ಎಂಬ ಅಂಶವನ್ನು ಸರ್ಕಾರ ಪರಿಶೀಲಿಸದೆ ಬಹಳ ಆತುರ ಆತುರವಾಗಿ ಎಲ್ಲಾ ಹಣವನ್ನೂ ಶರಾವತಿಗೆ ತಿರುಗಿಸಿದ್ದರಿಂದ ಇವತ್ತು ಶರಾವತಿ ಪೂರೈಕೆಯಾಗಿದ್ದರೂ ಕೂಡ ಅದರಿಂದ ಉತ್ಪನ್ನವಾಗತಕ್ಕ ವಿದ್ಯುಚ್ಛಕ್ತಿಯನ್ನು ಅಳವಡಿಸಿಕೊಂಡು ಉಪಯೋಗಿಸಿಕೊಳ್ಳತಕ್ಕ ಶಕ್ತಿ ಸರ್ಕಾರಕ್ಕೆ ಇಲ್ಲ. ಅದೇ ನೀರಾವರಿ ಯೋಜನೆಯಾಗಿದ್ದರೆ ನೀರನ್ನು ಉಪಯೋಗಿಸಿಕೊಳ್ಳತಕ್ಕ ಶಕ್ತಿ ಸಂಪೂರ್ಣವಾಗಿ ಈ ದೇಶದ ಜನಕ್ಕೆ ಇತ್ತು. ನೀರು ಕೊಡಿ, ಭೂಮಿಯನ್ನು ಸಾಗುವಳಿ ಮಾಡುತ್ತೇವೆ, ಹೆಚ್ಚು ಆಹಾರ ಉತ್ಪಾದನೆ ಮಾಡುತ್ತೇವೆ ಎಂದು ಜನ ನೀರಿಗಾಗಿ ಕಾಯುತ್ತಾ ಇರುವಾಗ ಯಾವುದಕ್ಕೆ ಪ್ರಾಮುಖ್ಯತೆ ಕೊಡಬೇಕು ಎಂಬುದನ್ನು ಯೋಚನೆ ಮಾಡದೆ, ವಿವೇಚನೆ ಇಲ್ಲದೆ ಇರತಕ್ಕ ಈ ಒಂದು ನೀತಿಯಿಂದಾಗಿ ನೀರಾವರಿ ಯೋಜನೆಗಳು ಕುಂಠಿತವಾಗಿವೆ. ಇದರಿಂದಾಗಿ ಅನ್ನದ ಅಭಾವಕ್ಕೆ ಕಾರಣವಾಗಿದೆ. ಮತ್ತು ಈ ನೀರಾವರಿ ಯೋಜನೆಯ ವಿಚಾರದಲ್ಲಿ ಮತ್ತೊಂದು ದೊಡ್ಡ ಲೋಪ ಮಾಡಿರುವುದು ಎಂದರೆ, ನದಿಯ ನೀರಿನ ಹಂಚಿಕೆಯಲ್ಲಿ ನಮಗೆ ಆಗಿರತಕ್ಕ ಅಪವಾದವನ್ನು ಎದುರಿಸಲಿಕ್ಕೆ ಸಾಕಾದಷ್ಟು ಕೆಲಸ ಮಾಡಿಲ್ಲ ಎಂದು ಹೇಳಬೇಕಾಗಿದೆ. ಕೃಷ್ಣಾ ನದಿ ನೀರಿನ ಹಂಚಿಕೆಯಾಗಲಿ, ಕಾವೇರಿ ನದಿಯ ನೀರಿನ ಪೂರೈಕೆಯಾಗಲಿ ಎಲ್ಲದರಲ್ಲೂ ವಿಫಲರಾಗಿದ್ದೀರಿ. ಕೃಷ್ಣಾ ನದಿ ನೀರಿನ ವಿಚಾರದಲ್ಲಿ ಆಂಧ್ರ ಸರ್ಕಾರ ಮೈಸೂರು ಸರ್ಕಾರ ಮತ್ತು ಮಹಾರಾಷ್ಟ್ರ ಸರ್ಕಾರ ಈ ಮೂರು ಸರ್ಕಾರಗಳೂ ಕೂಡ ಒಂದು ತೀರ್ಮಾನಕ್ಕೆ ಬರಬೇಕೆಂದು ಈ ದೇಶದ ಪ್ರಧಾನಿಗಳು ಈ ಮೂರು ರಾಜ್ಯಗಳ ಮುಖ್ಯಮಂತ್ರಿಗಳಿಗೂ ಆಹ್ವಾನ ಮಾಡಿ ಎರಡು ಸಭೆಗಳನ್ನು ಮಾಡಿದ್ದಾರೆ. ಆದರೂ ಕೂಡ ಇವತ್ತಿನವರೆಗೂ ಈ ಕೃಷ್ಣಾ ನದಿ ನೀರಿನ ಹಂಚಿಕೆ ಯಾವ ಮಟ್ಟಕ್ಕೆ ಬಂದಿದೆ ಎಂಬುದನ್ನೂ ಇವತ್ತಿಗೂ ಈ ಸರ್ಕಾರ ಕಾಣದಾಗಿದೆ. ಇದಕ್ಕೆ ಕಾರಣ ಆಂಧ್ರ ಸರ್ಕಾರ ಈಗಾಗಲೇ ನಾಗಾರ್ಜುನ ಸಾಗರದಲ್ಲಿ ಯಾವ ಮಟ್ಟಕ್ಕೆ ಕಟ್ಟಬೇಕಾಗಿತ್ತೋ ಅದನ್ನು ಕಟ್ಟಿ ಪೂರೈಸಿ ನಿಂತಿದೆ. ಕ್ರೆಸ್ಟ್ ಗೇಟ್ ಹಾಕತಕ್ಕ ಕೆಲಸ ಒಂದನ್ನು ಬಿಟ್ಟು ಬಾಕಿ ಎಲ್ಲಾ ಕೆಲಸಗಳೂ ಪೂರ್ಣವಾಗಿವೆ. ಇಂದೋ ನಾಳೆಯೋ ಕ್ರೆಸ್ಟ್ ಗೇಟ್ ಹಾಕತಕ್ಕ ಕೆಲಸವನ್ನೂ ಪೂರೈಸುತ್ತೇವೆ ಎಂಬ ನಂಬಿಕೆ ಇದೆ ಎಂದು ಆಂಧ್ರದವರು ಹೇಳುತ್ತಾರೆ. ಮೈಸೂರು ಸರ್ಕಾರ ಕೇಂದ್ರದಲ್ಲಿ ಬೇಕಾದಷ್ಟು ಸಾರಿ ಮೊರೆ ಇಟ್ಟು ಅವನ್ನು ಸಂಧಾನ ರೂಪದಲ್ಲಿ ಪರಿಹಾರ ಮಾಡಬೇಕೆಂದು ಎಷ್ಟೇ ಕೇಳಿಕೊಂಡರೂ ಕೂಡ ಕೇಂದ್ರದಿಂದ ಎಳ್ಳಷ್ಟು ಸಹಾಯವಾಗಿಲ್ಲ. ಅದಕ್ಕೆ ಬದಲಾಗಿ ಆಂಧ್ರದವರು ಇವತ್ತು ಕೇಂದ್ರದ ನೆಪವನ್ನು ಒಡ್ಡಿ ಅವರ ಕೆಲಸವನ್ನು ಮುಂದುವರಿಸಿಕೊಂಡು ಹೋಗುತ್ತಾ ಇದ್ದಾರೆ. ನಮ್ಮ ಪರಿಸ್ಥಿತಿ ಏನಾಗಿದೆ ಇವತ್ತು ಎಂಬುದನ್ನು ಅಳತೆ ಮಾಡುವುದಕ್ಕೂ ಕೂಡ ನಿಮಗೆ ಗೊತ್ತಾಗಿಲ್ಲ. ಕೇಂದ್ರದ ನೀರಾವರಿ ಸಚಿವರು ಆಂಧ್ರದ ಪರವಾಗಿ ವಾದ ಮಾಡುತ್ತಾ ಇದ್ದಾರೆ, ಅದು ನಿಜವೊ ಅಲ್ಲವೊ ಅದು ಬೇರೆ ವಿಚಾರ. ಕೇಂದ್ರ ನೀರಾವರಿ ಸಚಿವರಾಗಿರತಕ್ಕವರು ಆಂಧ್ರ ಪ್ರದೇಶದವರು, ಅದ್ದರಿಂದ ಈ

(ಶ್ರೀ ಎಸ್. ಶಿವಪ್ಪ)

ರೀತಿ ನೀರಿನ ಹಂಚಿಕೆ ವಿಚಾರದಲ್ಲಿ ಮೈಸೂರಿಗೆ ಏನು ನ್ಯಾಯ ಸಿಕ್ಕಬೇಕೋ ಅದು ಸಿಕ್ಕುವುದಿಲ್ಲ ಎಂಬುದು ಇದುವರೆಗೂ ಆಗಿರತಕ್ಕ ವ್ಯವಹಾರಗಳಿಂದಲೇ ಗೊತ್ತಾಗುತ್ತದೆ. 3 ಜನ ಮುಖ್ಯಮಂತ್ರಿಗಳು ಪ್ರಧಾನಿಗಳ ಎದುರಿಗೆ ಕುಂತು ನಿಂತು ಮಾತನಾಡಿ ಏನೂ ಪ್ರಯೋಜನವಾಗಿಲ್ಲ ಎಂಬುದನ್ನು ಇವತ್ತು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗಿದೆ. ಮತ್ತೆ ಪುನಃ ಈ ಮೂರು ಮುಖ್ಯಮಂತ್ರಿಗಳ ಕಾನ್‌ಫರೆನ್ಸ್ ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ ಎಂಬುದನ್ನು ಸರ್ಕಾರಕ್ಕೆ ಸ್ಪಷ್ಟವಾಗಿ ಹೇಳಬೇಕಾಗಿದೆ. ತಾವು ಪ್ರಧಾನಿಗಳಿಗೆ ಹೇಳಬೇಕು, ಇವತ್ತು ನೀವು ಅನುಸರಿಸುತ್ತಾ ಇರುವ ನೀತಿಯಿಂದ ಇಷ್ಟು ದಿವಸವಾದರೂ ಏನೂ ಪ್ರಯೋಜನವಾಗಿಲ್ಲ, ಯಾವ ಒಂದು ನ್ಯಾಯಾಲಯಕ್ಕೆ ಮುಟ್ಟಿಸಬೇಕೋ ಆ ನ್ಯಾಯಾಲಯಕ್ಕೆ ಮುಟ್ಟಿಸಿ ನಮ್ಮ ಹಕ್ಕನ್ನು ಸಾಧನೆ ಮಾಡುತ್ತೇವೆ ಎಂದು ತಿಳಿಸಬೇಕು. ಅಕ್ಟೋಬರ್ 31ನೇ ತಾರೀಖಿನ ಹೊತ್ತಿಗೆ ಮಾಡದಿದ್ದರೆ ಮುಂದಿನ ಕ್ರಮ ಏನು ಮಾಡಬೇಕೆಂಬುದನ್ನು ಯೋಚನೆ ಮಾಡುತ್ತೇವೆ ಎಂದು ಲೋಕೋಪಯೋಗಿ ಸಚಿವರು ಈ ಸಭೆಗೆ ಹೇಳಿದ್ದರು. ಇತ್ತೀಚೆಗೂ ಕೂಡ ಸರ್ಕಾರ ಏನು ಮಾಡಬೇಕೆಂಬುದನ್ನು ತೀವ್ರವಾಗಿ ಯೋಚನೆ ಮಾಡುತ್ತಾ ಇದ್ದೇವೆ ಎಂದೂ ಹೇಳಿದ್ದಾರೆ. ಇದು ಒಂದೇ ಅಲ್ಲ, ಇವತ್ತು ನಾವು ಯಾವ ಮಟ್ಟಕ್ಕೆ ಮುಟ್ಟಿದ್ದೇವೆ ಎಂದರೆ ಇವತ್ತು ನಮ್ಮ ಹಕ್ಕುಬಾಧ್ಯತೆಗಳನ್ನು ಕಾಪಾಡಿಕೊಳ್ಳಬೇಕಾದರೆ ಕೇಂದ್ರದವರಿಗೆ ಕೊನೇ ಮಾತು ಹೇಳಿ ಇಷ್ಟನೇ ತಾರೀಖಿನ ಹೊತ್ತಿಗೆ ಇತ್ಯರ್ಥ ಮಾಡದಿದ್ದರೆ ನಮ್ಮ ದಾರಿ ನಮ್ಮದು ಅಂತ ಸ್ಪಷ್ಟವಾಗಿ ಹೇಳಿದಹೊರತು ಇದು ಇತ್ಯರ್ಥವಾಗುವುದಿಲ್ಲ ಎಂದು ನಾನಂತೂ ಪೂರ್ಣವಾದ ಎಚ್ಚರಿಕೆಯ ರೂಪದಲ್ಲಿ ಸರ್ಕಾರದವರಿಗೆ ಹೇಳುತ್ತಾ ಇದ್ದೇನೆ. ಇಷ್ಟೇ ಅಲ್ಲ ಮೊನ್ನೆ ಹೇಳಿದರು, ಕಾವೇರಿ ನದಿ ನೀರನ್ನು ಉಪಯೋಗಿಸಿಕೊಳ್ಳುವಾಗ ದೊಡ್ಡ ಕಾಂಗಾರಿಗಳನ್ನು ತೆಗೆದುಕೊಳ್ಳುವಾಗ ಹೇಮಾವತಿ, ಹಾರಂಗಿ ಈ ಎರಡು ದೊಡ್ಡ ಯೋಜನೆಗಳ ಬಗ್ಗೆ ಇದುವರೆಗೂ ಟೆಕ್ನಿಕಲ್ ಸ್ಯಾಂಕ್ಷನ್ ಬಂದಿಲ್ಲ ಎಂದರೆ ಈ ಕೇಂದ್ರದವರ ತಾತ್ಸಾರ ಮನೋಭಾವ ಅಥವಾ ಮಲತಾಯಿ ಮನೋಭಾವ ಎಷ್ಟುಮಟ್ಟಿಗೆ ಇದೆ ಎಂಬುದು ಗೊತ್ತಾಗುತ್ತದೆ. ನಮಗೆ ಕೊಡಬೇಕಾದ ನೀರಿನ ಹಕ್ಕು ನಮಗೆ ಕೊಡಿ ಎಂದರೆ ಅವರು ಇದಕ್ಕೆ ಮದರಾಸ್ ಸರ್ಕಾರದವರ ಒಪ್ಪಿಗೆ ಇದೆಯೇ ಎಂದರೆ ಇದು ಎಂತಹ ಕುಂಟು ನೆಪ ! ಈ ನೆಪವನ್ನು ಹಾಕಿಕೊಂಡು ಈ ವಿವಾದವನ್ನು ಹೀಗೆಯೇ ಮುಂದುವರಿಸಬೇಕೆಂದು ಆಲೋಚನೆ ಮಾಡುತ್ತಾ ಇದ್ದಾರೆಯೇ ಎಂಬುದನ್ನು ನಾವು ಇವತ್ತು ಯೋಚನೆ ಮಾಡಬೇಕಾಗಿದೆ. ಕಾವೇರಿ ನೀರಿನ ಬಗ್ಗೆ ಹಿಂದೆ ಆಗಿರತಕ್ಕ ಒಪ್ಪಂದದ ಪ್ರಕಾರ 74ನೇ ಇಸವಿಯವರೆಗೂ ನಮಗೆ ಒಂದು ಹಕ್ಕು ಇದೆ. ಅದರಲ್ಲಿ ಕೇಂದ್ರದವರಿಗಾಗಲಿ, ಮದರಾಸ್ ಸರ್ಕಾರದವರಿಗಾಗಲಿ ಏನೊಂದೂ ಹಕ್ಕು ಇಲ್ಲ ಎಂಬುದನ್ನು ಅವರಿಗೆ ಸ್ಪಷ್ಟವಾಗಿ ತಿಳಿಸಬೇಕು. ಮತ್ತು ಈ ರೀತಿಯಾಗಿ ಮದರಾಸು ಮತ್ತು ಆಂಧ್ರದಿಂದ ನಮ್ಮನ್ನು ಇಬ್ಭಾಗಿಸತಕ್ಕ ನೀತಿ ಏಸಿದೆ ಇದು ಮಲತಾಯಿ ಧೋರಣೆ ಎಂದು ಅವರಿಗೆ ಸ್ಪಷ್ಟವಾಗಿ ಹೇಳಬೇಕು. ಆಮೇಲೆ ಅವರು ಏನು ಮಾಡುತ್ತಾರೋ ನೋಡೋಣ. ಕೃಷ್ಣಾ ನದಿ ಮತ್ತು ಕಾವೇರಿ ನದಿ ಇವೆರಡರಲ್ಲೂ ಕೂಡ ಮೈಸೂರಿಗೆ ಏನೊಂದು ನ್ಯಾಯ ದೊರಕಬೇಕೋ ಅದನ್ನು ದೊರಕಿಸಿಕೊಡದೇ ಹಿಂದು ಮುಂದು ನೋಡುತ್ತಾ ಇರುವುದರಿಂದ ಕೇಂದ್ರ ಸರ್ಕಾರದವರಿಗೆ ಸ್ಪಷ್ಟವಾಗಿ ಅವರ ಮುಖಕ್ಕೇ ಹೇಳಬೇಕು. ಇವತ್ತು ನೀವು ನಮಗೆ ಅನ್ಯಾಯ ಮಾಡುತ್ತಾ ಇದ್ದೀರಿ, ನಿಜವಾಗಿಯೂ ಕೂಡ ಕೇಂದ್ರ ಸರ್ಕಾರದವರಿಗೆ ಇವತ್ತು ಒಂದು ಸಮತೋಲನ ನ್ಯಾಯವನ್ನು ಮಾಡತಕ್ಕ ಯೋಗ್ಯತೆ ಕೂಡ ಕಡಿಮೆಯಾಗಿದೆ ಎಂದು ಕೇಂದ್ರದ ಸಚಿವರ ಮುಖಕ್ಕೆ ಧೈರ್ಯವಾಗಿ ಹೇಳಬೇಕೆಂದು ಸರ್ಕಾರದವರಿಗೆ ಆಗ್ರಹಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತಾ ಇದ್ದೇನೆ.

ಇವತ್ತು ನೀರಾವರಿ ಮತ್ತು ಇತರ ಕಾಂಗಾರಿಗಳ ಬಗ್ಗೆ ಅಲ್ಲಿ ಅನೇಕ ಬಾಬುಗಳನ್ನು ನಿರ್ಮಾಣ ಮಾಡಿದ್ದೀರಿ ಎಂದು ಅನಿಸುತ್ತದೆ. 8—10 ಡಿಮ್ಯಾಂಡುಗಳಲ್ಲಿ ನೀರಾವರಿಗೆ ಸಂಬಂಧಪಟ್ಟ ವಿಚಾರ, ರಸ್ತೆಗಳಿಗೆ ಸಂಬಂಧಪಟ್ಟ ವಿಚಾರ, ಎಲೆಕ್ಟ್ರಿಸಿಟಿ ಇಲಾಖೆಗೆ ಸಂಬಂಧಪಟ್ಟ ವಿಚಾರ ಈ ರೀತಿ ಒಂದೊಂದು ಬಾಬಿನಲ್ಲಿ ಎರಡು ಮೂರು ಡಿಮ್ಯಾಂಡ್‌ಗಳನ್ನು ಸೇರಿಸಿದ್ದೀರಿ. ಇದರಲ್ಲಿ ಮತ್ತೆ ಕಮರ್ಷಿಯಲ್, ನಾನ್ ಕಮರ್ಷಿಯಲ್, ಕ್ಯಾಪಿಟಲ್ ಔಟ್‌ಲೇ, ನಾನ್ ಕ್ಯಾಪಿಟಲ್ ಔಟ್‌ಲೇ, ಈ ರೀತಿಯಾಗಿ ವಿಮರ್ಶೆಮಾಡತಕ್ಕವನಿಗೆ ಇದು ಒಂದು ವಿಧವಾದ ಗೊಂದಲವಾಗಿದೆ. ಅನೇಕ ಹೆಡ್‌ಗಳು ಇವೆ. ಇವತ್ತು ಪ್ಲಾನ್ ಅಂಡ್ ನಾನ್‌ಪ್ಲಾನ್ ಅಂತ ಅನ್ನುವುದರಲ್ಲಿ ಏನೂ ಅರ್ಥವಿಲ್ಲ. ಸ್ಥಳೀಯ ಪಂಚಾಯ್ತಿಯಿಂದ ಮೊದಲ್ಗೊಂಡು ಪಾರ್ಲಿಮೆಂಟಿನವರೆಗೂ ಎಲ್ಲ ಕಾರ್ಯಗಳೂ ಸಹ ಒಂದು ಇಂಟಿಗ್ರೇಟೆಡ್ ಪ್ಲಾನ್ ಆಗಿದೆ. ಯಾವ ಒಂದು ಕೆಲಸ ಮಾಡಿದರೂ ಕೂಡ ಈ ದೇಶದಲ್ಲಿ ಅದು ಒಂದಲ್ಲ ಒಂದು ರೀತಿಯಲ್ಲಿ ಪ್ರೊಡಕ್ಟೀವ್ ಆಗಿರುತ್ತದೆ. ಕಾಲೇಜು ಬಿಲ್ಡಿಂಗ್ ಕಟ್ಟಿದರೂ ಕೂಡ ಅದೂ ಕೂಡ ಪ್ರೊಡಕ್ಟೀವೇ. ಯಾವ ಅರ್ಥದಲ್ಲಿ ಎಂದರೆ, ಜ್ಞಾನದ ಒಂದು ಚಿಲುಮೆಯನ್ನೇ

ಅದು ಉತ್ಪಾದನೆ ಮಾಡತಕ್ಕ ಕಾರ್ಯವಾಗುತ್ತದೆ. ಆದ್ದರಿಂದ ತಾವು ಈ ರೀತಿ ಅನೇಕ ಹೆಡ್‌ಗಳನ್ನು ನಿರ್ಮಾಣಮಾಡಿರುವುದರಿಂದ ಇದು ಗೊಂದಲವಾಗುತ್ತಿದೆಯೇ ಹೊರತು ನಿಜವಾಗಿಯೂ ರಸ್ತೆಗಳಿಗೆ ಎಷ್ಟು ದುಡ್ಡು ಕೊಟ್ಟಿದ್ದೀರಿ, ನೀರಾವರಿಗೆ ಎಷ್ಟು ದುಡ್ಡು ಕೊಟ್ಟಿದ್ದೀರಿ ಎಂಬುದನ್ನು ತಕ್ಷಣ ತಿಳಿದುಕೊಳ್ಳುವುದು ದುಸ್ಸಾಧ್ಯವಾಗಿದೆ. ಈ ಒಂದು ದೊಡ್ಡ ಪುಸ್ತಕದಲ್ಲಿ 8-10 ಕಡೆ ಅದನ್ನು ಎಲ್ಲೆಲ್ಲೋ ಸೇರಿಸಿದ್ದೀರಿ, 28 ಕಡೆ ಇದೆ. ಇದು ಎಂಥವನಿಗೇ ಆದರೂ ಕೂಡ ಒಂದು ಕನ್‌ಫ್ಯೂಷನ್ ಕ್ರಿಯೇಟ್ ಮಾಡುತ್ತದೆ. ಗುರುತಿದ್ದವನಿಗೆ ಇಂತಹ ಹೆಡ್‌ನಲ್ಲಿ ದುಡ್ಡು ಕೊಡಿ ಎಂದು ಕೇಳುವುದಕ್ಕೆ ಅನುಕೂಲವಾಗುತ್ತದೆಯೇ ಹೊರತು ಈ ಶಾಸನ ಸಭೆಯಲ್ಲಿ ನಿರ್ದಿಷ್ಟವಾಗಿ ಇದರಲ್ಲಿ ಏನಿದೆ ಎಂಬುದನ್ನು ಹೇಳುವುದಕ್ಕೆ ಅರ್ಥವಾಗುವ ರೀತಿಯಲ್ಲಿ ಇಲ್ಲ, ಅರ್ಥವಾಗುವ ರೀತಿ ನಿಮ್ಮ ಹೆಡ್ಡಿಂಗ್‌ಗಳನ್ನು ವಿವರಣೆ ಮಾಡುವುದು ಬಹಳ ಒಳ್ಳೆಯದು ಎಂದು ಭಾವನೆ ಮಾಡಿದ್ದೇನೆ.

ಯೋಜನೆಗೆ ಖರ್ಚು ಮಾಡತಕ್ಕ ಹಣದಲ್ಲಿ ಮೇಜರ್ ಇರಿಗೇಷನ್ ಸ್ಕೀಂ ಮತ್ತು ಮೈನರ್ ಇರಿಗೇಷನ್ ಸ್ಕೀಂ ಎಂದು ಎರಡು ಭಾಗವಾಗಿ ಹಣವನ್ನು ಖರ್ಚು ಮಾಡುತ್ತಾ ಇದ್ದೀರಿ. ಮೈಸೂರು ದೇಶದಲ್ಲಿ ಈ ಎರಡು ಆಗಬೇಕಾದ ಕೆಲಸ, ಅಗತ್ಯ ಇದೆ ಎಂದು ಒಪ್ಪುತ್ತೇನೆ. ಮೈನರ್ ಇರಿಗೇಷನ್‌ಗೆ ಹೆಚ್ಚು ಹಣವನ್ನು ಖರ್ಚು ಮಾಡುವುದರಲ್ಲಿ ಕೆರೆ ರಿಪೇರಿ ಮಾಡುವುದಾಗಲಿ, ಲಿಫ್ಟ್ ಇರಿಗೇಷನ್ ಆಗಲಿ, ಪಿಕ್ ಅಪ್‌ಗಳನ್ನು ಮಾಡುವುದಾಗಲಿ ತ್ವರಿತವಾಗಿ ಮಾಡಬೇಕು. ಅದಷ್ಟು ಹೆಚ್ಚು ಹಣವನ್ನು ಅದಕ್ಕೆ ಕೊಟ್ಟರೆ ಅದು ದೇಶದಲ್ಲಿ ಒಳ್ಳೆಯ ಪರಿಣಾಮವನ್ನು ಕೊಡತಕ್ಕ ಕೆಲಸವಾಗುತ್ತದೆ. 1966-67ನೇ ಸಾಲಿನಲ್ಲಿ ಸುಮಾರು 3ಕೋಟಿ ರೂಪಾಯಿಗಳನ್ನು ಆ ಬಾಬಿಗೆ ಖರ್ಚು ಮಾಡಿದ್ದಾರೆ. ಆ ಬಾಬಿಗೆ ಹಣ ಹೆಚ್ಚು ಮಾಡಿದ್ದಾರೋ ಕಡಿಮೆ ಮಾಡಿದ್ದಾರೋ ನನಗಂತೂ ಅರ್ಥವಾಗುತ್ತಾ ಇಲ್ಲ. ಸರ್ಕಾರದವರು ಈ ಬಗ್ಗೆ ಯೋಚನೆ ಮಾಡಿ ಮೊದಲು ಹೆಚ್ಚಿನ ನಿಗಾ ಕೊಟ್ಟು ಸುಮಾರು ಮೂರುವರೆ ಕೋಟಿ ರೂಪಾಯಿಗಳನ್ನು 68—69ನೇ ಸಾಲಿಗೆ ಈ ಮೈನರ್ ಇರ್ರಿಗೇಷನ್ ಬಾಬಿಗೆ ಖರ್ಚು ಮಾಡಬೇಕು. ಮೈನರ್ ಇರ್ರಿಗೇಷನ್ನಿಗೆ ಎಷ್ಟು ಮೊಬಲಗನ್ನು ಖರ್ಚು ಮಾಡುತ್ತಿರೋ ಅದರಿಂದ ಹೆಚ್ಚಿನ ಲಾಭ ಬರುತ್ತದೆ. ಈಗತಾನೇ ಮಾನ್ಯ ಶ್ರೀ ದೇವೇಗೌಡ ಅವರು ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಕೇಂದ್ರ ಸರ್ಕಾರದವರು ವಹಿಸಿಕೊಂಡು ಮಾಡುವುದಾದರೆ ನಮ್ಮ ಹಣಕಾಸಿನ ಮೇಲೆ ಭಾರ ತಪ್ಪುತ್ತದೆಂದು ಸಲಹೆ ಮಾಡಿದ್ದಾರೆ. ನಾನು ಮೊದಲೇ ಹೇಳಿದ ಹಾಗೆ ಕೇಂದ್ರ ಮತ್ತು ರಾಜ್ಯವೆಂಬ ಅರ್ಥ ಇಲ್ಲ ಬರಬಾರದು. ಇಂಡಿಯಾ ದೇಶದಲ್ಲಿ ಯಾವುದೇ ಪ್ರದೇಶದಲ್ಲಿ ಒಂದು ಯೋಜನೆ ಆದರೆ ಅದು ಭಾರತಕ್ಕೇ ಸೇರಿದ್ದು. ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರದ ಪ್ರಾಜೆಕ್ಟ್‌ಗಳನ್ನು ನೇರವಾಗಿ ತೆಗೆದುಕೊಂಡಿಲ್ಲ. ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಕ್ಕೆ ಎಷ್ಟು ನೆರವನ್ನು ಕೊಡಬೇಕೋ ಅಷ್ಟನ್ನು ಕೊಡಲೇಬೇಕು. ಏಕೆಂದರೆ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಕ್ಕೆ ಬಂದು ಯಾವ ಪ್ರಾಜೆಕ್ಟ್‌ನ್ನು ಮಾಡುವುದಕ್ಕಾಗುವುದಿಲ್ಲ. ರಾಜ್ಯಕ್ಕೆ ಸಂಬಂಧಪಟ್ಟ ಯೋಜನೆಗಳನ್ನು ನಾವೇ ಮಾಡಬೇಕು. ಕೃಷ್ಣಾ ಮತ್ತು ಕಾಳೀ ನದಿ ಯೋಜನೆಗಳನ್ನು ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಕ್ಕೆ ಎಷ್ಟು ಹಣ ಕೊಡಬೇಕೋ ಅಷ್ಟನ್ನು ಕೊಟ್ಟು ಮಾಡಿಸಬೇಕು. ಇದರ ಜವಾಬ್ದಾರಿ ಕೇಂದ್ರ ಸರ್ಕಾರದ್ದು ಬಹಳ ಇದೆ. ರಾಜ್ಯ ಸರ್ಕಾರಕ್ಕೂ ಆ ತರಹ ಜವಾಬ್ದಾರಿ ಇರಬೇಕು. ನೆರೆ ರಾಜ್ಯಗಳಿಗೆ ಕೇಂದ್ರ ಸರ್ಕಾರದವರು ಅಷ್ಟೊಂದು ಹಣ ಸಹಾಯವನ್ನು ಕೊಡುತ್ತಿರುವಾಗ ಮೈಸೂರು ರಾಜ್ಯಕ್ಕೆ ಆ ರೀತಿಯಾಗಿಯೇ ಕೊಡುವ ಬಗ್ಗೆ ಕೇಂದ್ರ ಸರ್ಕಾರದವರ ಪವಿತ್ರ ಜವಾಬ್ದಾರಿ ಇದೆ. ಅವರು ಏನಾದರೂ ಭೇದ ಭಾವವನ್ನು ಮಾಡಿದರೆ ಅವರ ಎದುರಿಗೆ ನಿಂತು ಅಂಕಿಅಂಶಗಳನ್ನು ಅವರ ಮುಂದೆ ಇಟ್ಟು ಹೋರಾಟ ಮಾಡಿ ಮಾಡುವುದು ನಿಮ್ಮ ಕೆಲಸವಾಗಿದೆ. ಮೈಸೂರು ದೇಶ ನೀರಾವರಿಯಲ್ಲಿ ಅಕ್ಕ ಪಕ್ಕದ ಇತರ ರಾಜ್ಯಗಳಿಗಿಂತ ಹಿಂದೆ ಇರುವುದರಿಂದ ಇದಕ್ಕೆ ಹೆಚ್ಚು ಹಣ ಸಹಾಯ ಅಗತ್ಯ. ಆದರೆ ಅವರು ನಮಗೆ ಹಣ ಕೊಡುವುದಿಲ್ಲ. ಆ ರೀತಿಯಾಗಿ ಕೇಂದ್ರ ಸರ್ಕಾರದವರು ಕೊಡದೇ ಇರಲು ಕಾರಣವೇನು ? ರಾಜಾಸ್ಥಾನ ಬಿಟ್ಟರೆ ನೀರಾವರಿಯಲ್ಲಿ ಮೈಸೂರು ದೇಶ ಎರಡನೆಯದು. ಭಕ್ರಾನಂಗಲ್ ಯೋಜನೆಯನ್ನು ರಾಜಾಸ್ಥಾನದವರು ಕಾರ್ಯಗತಗೊಳಿಸಿ ನೀರಾವರಿ ಸೌಕರ್ಯವನ್ನು ಹೇರಳವಾಗಿ ಪಡೆದಿದ್ದಾರೆ. ಅದು ಒಂದು ಬಹಳ ದೊಡ್ಡ ಯೋಜನೆ. ಅದೇ ರೀತಿಯಲ್ಲಿ ಮೈಸೂರು ದೇಶದಲ್ಲಿ ನೀವು ತೆಗೆದುಕೊಂಡಿರುವ ಕೃಷ್ಣಾ ಮತ್ತು ಇತರ ದೊಡ್ಡ ದೊಡ್ಡ ಯೋಜನೆಗಳಿಗೆ ಕೇಂದ್ರದವರು ಹಣವನ್ನು ಒದಗಿಸದೇ ಹೋದರೆ, ಮೈಸೂರಿನ ನೀರಾವರಿ ಬಗ್ಗೆ ಇನ್ನು 20 ವರ್ಷಗಳವರೆಗೆ ಹೋರಾಟ ಮಾಡಿದರೂ ಏನೂ ಪ್ರಯೋಜನವಾಗುವುದಿಲ್ಲವೆಂದು ನಾನು ಮತ್ತೊಮ್ಮೆ ಹೇಳುತ್ತೇನೆ.

ಇನ್ನು ಲೋಕೋಪಯೋಗಿ ಇಲಾಖೆಯ ಬಗ್ಗೆ ಒಂದು ಆರೋಪಣೆ ಇದೆ. ಅಲ್ಲಿ ಒಂದು ತಲೆ ಶಿರೋಭಾರವಿದೆ. ಅಧಿಕಾರಿಗಳ ಸಂಖ್ಯೆ ಜಾಸ್ತಿ. ಅಧಿಕಾರಿಗಳ ಸಂಖ್ಯಾನುಗುಣವಾಗಿ ಕೆಲಸವಾಗುತ್ತಾ ಇಲ್ಲ. ಒಂದು ದೊಡ್ಡ ಆರೋಪಣೆ ಪಬ್ಲಿಕ್ ವರ್ಕ್ಸ್ ಇಲಾಖೆಯ ಮೇಲೆ ಇದೆ.

(ಶ್ರೀ ಎಸ್. ಶಿವಪ್ಪ)

ಈ ಆರೋಪಣೆಯನ್ನು ಎದುರಿಸುವುದಕ್ಕೋಸ್ಕರ ಏನೇನು ಕ್ರಮಗಳನ್ನು ಕೈಗೊಂಡಿದ್ದಾರೆಂಬುದನ್ನು ಉತ್ತರ ಕೊಡುವಾಗ ಅವರು ಹೇಳಬೇಕು. ಈಗ ಎಷ್ಟೊಂದು ಡಿವಿಜನ್‌ಗಳಲ್ಲಿ ಇಂಜನಿಯರುಗಳು ಇದ್ದಾರೋ ಅವರ ಕೈತುಂಬ ಕೆಲಸ ತೆಗೆಯಬೇಕು. ನಿಮಗೆ ಬೇಕಾದವರಿಗೆ ಕೆಲವು ಹುದ್ದೆಗಳನ್ನು ನಿರ್ಮಾಣ ಮಾಡುತ್ತಿದ್ದೀರಿ. ಯಾರಿಗೋ ಕೆಲವರಿಗೆ ಅನುಕೂಲ ಮಾಡುವುದಕ್ಕೋಸ್ಕರ ಹುದ್ದೆಗಳನ್ನು ನಿರ್ಮಾಣಮಾಡುವುದು ಸರಿಯೇ ? ಈಗ ಚೀಫ್ ಇಂಜನಿಯರುಗಳು ಎಷ್ಟೋ ಜನರು ಇದ್ದಾರೆ. ಪ್ರತಿದಿನ ಅವರಿಗೆ ಪರ್‌ಕ್ಯಾಪಿಟಾ ವರ್ಕ್‌ಲೋಡ್ ಎಷ್ಟಿರಬೇಕೆಂಬುದನ್ನು ನಿಗದಿ ಮಾಡಿದ್ದೀರಾ ? ಅವರಿಂದ ಅಷ್ಟು ಕೆಲಸವನ್ನು ತೆಗೆದುಕೊಳ್ಳುವಂಥಾದ್ದು ಈ ಸರ್ಕಾರದ ಮೇಲಿನ ಜವಾಬ್ದಾರಿ ಎಂದು ನಾನು ತಮ್ಮಲ್ಲಿ ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಇಂತಹ ಹುದ್ದೆಗಳನ್ನು ಕಡಿಮೆ ಮಾಡುವುದು ಒಳ್ಳೆಯದು. ಇರತಕ್ಕ ಸಿಬ್ಬಂದಿಯಿಂದ ಕೆಲಸಗಳನ್ನು ಜಾಸ್ತಿ ಮಾಡಿಸಬೇಕು. ಈಗಿರತಕ್ಕ ತಲೆ ಶಿರೋಭಾರವನ್ನು ತಪ್ಪಿಸಬೇಕಾದರೆ ಈಗಿನ ಕೆಲಸಗಳಿಗೆ ತಕ್ಕಷ್ಟು ಹಣವನ್ನು ಕೊಡುವುದು ರಾಜ್ಯ ಸರ್ಕಾರದ ಮುಖ್ಯವಾದ ಹೊರೆ. ಇವತ್ತು ವಿದ್ಯುಚ್ಛಕ್ತಿ ಯೋಜನೆಗಳಿಗಾಗಿ ಹೇರಳವಾಗಿ ಹಣವನ್ನು ಖರ್ಚುಮಾಡುತ್ತಿದ್ದೇವೆ. ಇದನ್ನು ತಾವೇ ವಹಿಸಿಕೊಂಡಿದ್ದೀರಿ. ಇದು ನನಗೆ ಅರ್ಥವಾಗುತ್ತಾ ಇಲ್ಲ. ವಿದ್ಯುಚ್ಛಕ್ತಿ ನಿರ್ಮಾಣಮಾಡುವ ಪ್ರಾಜೆಕ್ಟ್‌ಗಳು ಬೇಕಾದಷ್ಟು ಇವೆ. ಅವುಗಳ ಬಗ್ಗೆ ಹೆಚ್ಚಿನ ಗಮನ ಕೊಡಬೇಕು. ವಿದ್ಯುಚ್ಛಕ್ತಿ ತಯಾರು ಆದಮೇಲೆ ಅದರ ಹಂಚುವಿಕೆ, ಮಾರಾಟಮಾಡುವುದು ಎಲೆಕ್ಟ್ರಿಸಿಟಿ ಬೋರ್ಡಿಗೆ ಸೇರುತ್ತೆ. ಇವತ್ತು ನಿಮ್ಮ ಮತ್ತು ಅವರ ಕೆಲಸ ಒಂದಾಗಿ ಓವರ್‌ಲ್ಯಾಪ್ ಆಗಿದೆ. ಈ ಕೆಲಸವನ್ನು ಈಗ ವಿದ್ಯುಚ್ಛಕ್ತಿ ಮಂಡಲಿಗೆ ಕೊಡುತ್ತೀರಿ. ಅವರು ಮ್ಯಾನೇಜ್‌ಮಾಡುತ್ತೇವೆಂದು ಹೇಳುತ್ತಾರೆ. ವಿದ್ಯುಚ್ಛಕ್ತಿ ಮಂಡಲ ಏನೇನು ಪ್ರಾಜೆಕ್ಟ್‌ಗಳನ್ನು ನಿರ್ಮಾಣ ಮಾಡುತ್ತದೋ ಅವನ್ನು ಅವರಿಗೇ ಕೊಟ್ಟು ಅವನ್ನು ಅವರೇ ಮ್ಯಾನೇಜ್ ಮಾಡಿ ಅದರ ಮೇಲೆ ಬರತಕ್ಕ ಲಾಭವನ್ನು ಸರ್ಕಾರಕ್ಕೆ ಕೊಡಬೇಕು ಎಂಬುದಾಗಿ ಅವರಿಗೆ ಹೇಳಬೇಕು. ಆ ಒಂದು ಅಧಿಕಾರ ಅವರಿಗೆ ಕೊಡಬೇಕು. ಅದಕ್ಕೆ ನೀವು ಕೋಟ್ಯಾಂತರ ರೂಪಾಯಿಗಳ ಸಾಲವನ್ನು ಕೊಡಿಸುತ್ತೀರಿ. ಎರಡು ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚುಮಾಡುವ ಕೆಲಸಕಾರ್ಯಗಳ ಬಗ್ಗೆ ಯಾರ್ಯಾರ ಜವಾಬ್ದಾರಿ ಎಷ್ಟೆಷ್ಟು ಇದೆಯೆಂಬುದನ್ನು ಅಳತೆಮಾಡುವುದು ಕಷ್ಟವಾಗುತ್ತದೆ. ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟ್, ಮತ್ತು ಎಲೆಕ್ಟ್ರಿಸಿಟಿ ಬೋರ್ಡ್ ಈ ಎರಡೂ ಕೋಆರ್ಡಿನೇಟ್ ಮಾಡತಕ್ಕ ಕೆಲಸವನ್ನು ಮಾಡದೇ ಹೋದರೆ ವಿದ್ಯುಚ್ಛಕ್ತಿ ಆಡಳಿತದಲ್ಲಿ ಯಾರು ಜವಾಬ್ದಾರಿ, ಎಷ್ಟು ಹಣ ಖರ್ಚಾಯಿತು ಎಂಬುದನ್ನು ವಿಂಗಡಣೆ ಮಾಡುವುದು ಕಷ್ಟವಾಗುತ್ತದೆ. ಆ ಕೆಲಸವನ್ನು ಮಾಡಿದರೆ ನಮಗೆ ಕರಾರುವಾಕ್ಕಾಗಿ ಈ ವಿದ್ಯುಚ್ಛಕ್ತಿ ಇಲಾಖೆಯಿಂದ ಎಷ್ಟು ಹಣ ಖರ್ಚಾಗಿದೆ, ಎಷ್ಟು ಆದಾಯವಾಗಿದೆ ಎಂಬುದನ್ನು ಕಾಣಲು ಅವಕಾಶವಿದೆಯೆಂದು ತಮ್ಮ ಮುಂದೆ ಹೇಳುತ್ತಿದ್ದೇನೆ.

ಇನ್ನು ನೀರಾವರಿ ಕಾಮಗಾರಿಗಳ ಬಗ್ಗೆ ಹಾಗೂ ರಸ್ತೆಗಳ ನಿರ್ಮಾಣದ ಬಗ್ಗೆ ಆಗಿಂದಾಗ್ಗೆ ಈ ಸರ್ಕಾರದಲ್ಲಿ ಒಂದು ಆರೋಪಣೆ ಬರುತ್ತಾ ಇದೆ. ಈ ಕೆಲಸಗಳನ್ನು ಹಂಚುವ ನೀತಿಯಲ್ಲಿ ಒಂದು ಕ್ಷೇತ್ರದಿಂದ ಇನ್ನೊಂದು ಕ್ಷೇತ್ರಕ್ಕೆ ಭೇದಭಾವ ಬೇಡ ಎಂಬುದಾಗಿ ಇತ್ತಕಡೆಯ ಸದಸ್ಯರು ಮತ್ತು ಅತ್ತಕಡೆಯ ಸದಸ್ಯರು ಹೇಳುತ್ತಿದ್ದಾರೆ. ಕ್ಷೇತ್ರದಿಂದ ಕ್ಷೇತ್ರಕ್ಕೆ ವ್ಯತ್ಯಾಸಮಾಡದೆ ನೀರಾವರಿ ಸೌಕರ್ಯಗಳನ್ನು ಕೊಡುವುದರಲ್ಲಾಗಲೀ, ರಸ್ತೆಗಳನ್ನು ನಿರ್ಮಾಣಮಾಡುವುದರಲ್ಲಾಗಲೀ, ಕಟ್ಟಡಗಳನ್ನು ಕಟ್ಟುವ ಕೆಲಸಗಳಲ್ಲಾಗಲೀ ಸರ್ಕಾರದವರು ನಿರ್ದಾಕ್ಷಿಣ್ಯವಾಗಿ ಹಾಗೂ ನಿರ್ದಿಷ್ಟವಾಗಿ ಅವಶ್ಯಕತೆ ಎಲ್ಲೆಲ್ಲಿ ಇದೆಯೋ ಅಲ್ಲಲ್ಲಿ ಮಾಡಬೇಕು. ಈ ವಿಚಾರವಾಗಿ ಈ ಸಭೆಯಲ್ಲಿ ಆಗಿಂದಾಗ್ಗೆ ಟೀಕೆ ಬರುತ್ತಾ ಇದೆ. ನಾನು ಸಚಿವರಿಗೆ ಹೇಳುವುದೇನೆಂದರೆ, ಮುಖ್ಯವಾಗಿ ನೀವು ಗೊಂದಲಕ್ಕೆ ಕಾರಣರಾಗಬಾರದು. ಕೆರೆ ಪಿಕಪ್ ಆಗಬೇಕು, ರಸ್ತೆಗಳು ಆಗಬೇಕು ಅಂದರೆ, ಅದರ ಬಗ್ಗೆ ಯಾವುದಾದರೂ ಒಂದು ಯೋಜನೆ ತಯಾರುಮಾಡಿದರೆ, ಅದು ಜಿಲ್ಲಾ ಮಟ್ಟದಲ್ಲೋ ಅಥವಾ ಚೀಫ್ ಇಂಜನಿಯರ್ ಮಟ್ಟದಲ್ಲೋ ವಿತರಣೆಯಾಗಬೇಕು ಎಂಬುದಾಗಿ ಅಧಿಕಾರ ಕೊಟ್ಟಿದ್ದೀರಿ. ಅಸಿಸ್ಟೆಂಟ್ ಇಂಜನಿಯರ್ ಅವರಿಗೆ 10ರಿಂದ 20ಸಾವಿರ ರೂಪಾಯಿಗಳ ಕೆಲಸ ಎಗ್ಸಿಕ್ಯುಟಿವ್ ಇಂಜನಿಯರುಗಳಿಗೆ 50ಸಾವಿರ ರೂಪಾಯಿಗಳವರೆಗೆ ಇರತಕ್ಕ ಕೆಲಸ ಹೀಗೆ ವಿತರಣೆ ಮಾಡುವ ಕೆಲಸ ಆಗಬೇಕು. ಆಯಾಯ ಹಂತದಲ್ಲಿಯೂ ಕೂಡ ಸ್ಥಳೀಯ ಅವಶ್ಯಕತೆಯನ್ನು ನೋಡಿ ಕೆಲಸಗಳನ್ನು ವಿತರಣೆಮಾಡುವ ಅಧಿಕಾರವನ್ನು ಅಲ್ಲಿನ ಅಧಿಕಾರಿಗಳಿಗೆ ಕೊಟ್ಟರೆ, ಅದರಿಂದ ಬಹಳಮಟ್ಟಿಗೆ ಪ್ರಯೋಜನವಾಗುತ್ತದೆಂದು ನಾನು ನಂಬಿದ್ದೇನೆ. ಇವತ್ತು ಆ ರೀತಿಯಲ್ಲಿಲ್ಲ. 50 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಒಂದು ಕೆರೆ ಆಗಬೇಕಾದರೆ ನೇರವಾಗಿ ಸರ್ಕಾರಕ್ಕೆ ಬಂದು ರೈತ ನೋಡಬೇಕಾದರೆ ಬಹಳ ಕಷ್ಟವಾಗುತ್ತದೆ. ಇವತ್ತು ಆ ಅಧಿಕಾರವನ್ನು ತಾವು

ಇಟ್ಟುಕೊಂಡಿದ್ದೀರಿ. ಸರ್ಕಾರದಲ್ಲಿ ಎಷ್ಟೋ ಸಾರಿ ಇದರ ಬಗ್ಗೆ ಮನವಿಗಳು ಬಂದರೂ ಇನ್ನೂ ಸಾವಿರಾರು ಬಾವಿಗಳು ಆಗಬೇಕಾಗಿವೆ. ಹತ್ತಾರು ಸಾವಿರ ಮೈಲಿ ರಸ್ತೆಗಳು ಆಗಬೇಕಾಗಿವೆ. ಈ ಒಂದು ವಿತರಣೆಯ ಕಾರ್ಯವನ್ನು ಆದಷ್ಟು ಅಧಿಕಾರಿಗಳಿಗೆ ಹಂಚಿಕೊಡಿ. ಅದನ್ನು ನೀವು ಬೇರೆಯವರಿಂದ ಮಾಡಿಸುವುದಕ್ಕೆ ಸಾಧ್ಯವಾಗುತ್ತದೆ ಅವನ್ನು ಜಬರ್‌ದಸ್ತಾಗಿ ಮಾಡುವುದಕ್ಕೂ ಸಾಧ್ಯವಾಗುತ್ತದೆ. ಎಲ್ಲವನ್ನೂ ನಿಮ್ಮ ತಲೆಯಮೇಲೆ ಇಟ್ಟುಕೊಂಡರೆ, ಈ ಕೆಲಸಗಳು ವಿಳಂಬವಾಗುವುದಕ್ಕೆ ಕಾರಣವಾಗಿ ಅದರ ಬಗ್ಗೆ ಆರೋಪಣೆ ಯಾವಾಗಲೂ ಸರ್ಕಾರದ ಮೇಲೆ ಬರುತ್ತಲೇ ಇರುತ್ತದೆ. ಸರ್ಕಾರದವರು ಹೀಗೆ ಅಧಿಕಾರ ವಿಕೇಂದ್ರೀಕರಣ ಮಾಡುವುದರಿಂದ ಅವರ ಜವಾಬ್ದಾರಿಯನ್ನು ಕಡಮೆ ಮಾಡಿಕೊಳ್ಳುವುದೂ ಅಲ್ಲದೆ ಸ್ಥಳೀಯ ಅವಶ್ಯಕತೆಗಳನ್ನು ನೋಡಿ ಸ್ಥಳೀಯ ಅಧಿಕಾರಿಗಳು ಆ ಕೆಲಸಗಳನ್ನು ಮಾಡುವುದಕ್ಕೆ ತಕ್ಕ ಅವಕಾಶವನ್ನು ಮಾಡಿಕೊಟ್ಟಂತಾಗುತ್ತದೆ. ಈ ರೀತಿ ಮಾಡಲೆಂದು ಹೇಳುತ್ತೇನೆ.

ಮತ್ತೊಂದು ವಿಚಾರ. ಈ ಇಲಾಖೆ ವಿಚಾರದಲ್ಲಿರುವ ಆಪಾದನೆ ಏನು ಅಂದರೆ, ಇವತ್ತು ಯಾವುದೇ ಯೋಜನೆಯಾಗಲೀ ಆ ಯೋಜನೆಯ ಪ್ರಾರಂಭದಲ್ಲಿ ಯಾವ ಒಂದು ಅಂದಾಜು ತಯಾರಾಗುತ್ತದೆಯೋ ಆ ಯೋಜನೆಯು ಕಾರ್ಯ ಮುಗಿಯುವವರೆಗೆ 2—3—4 ಸಾರಿ ಅಂದಾಜು ಪರಿವರ್ತನೆಯಾಗಿ, ಪುನರ್ವಿಮರ್ಶೆಯಾಗಿ ಕೊನೆಗೆ ಆ ಯೋಜನೆ ಯಾವ ಮಟ್ಟಕ್ಕೆ ಹೋಗುತ್ತದೋ ಗೊತ್ತಿಲ್ಲ.

ಇದರಿಂದಾಗಿ ನಿಮ್ಮ ಇಲಾಖೆಯುಲ್ಲಾಗತಕ್ಕ ಖರ್ಚನ್ನು ನಿಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ದಿವಸ ಒಂದು ಸಾಮಾನ್ಯವಾದ ನೀರಾವರಿ ಯೋಜನೆಗೆ ಪ್ರಾರಂಭದಲ್ಲಿ ಅದಕ್ಕೆ 2 ಕೋಟಿ ರೂಪಾಯಿಗಳು ಅಂದಾಜಾದರೆ ಅದು ಮುಗಿಯುವ ವೇಳೆಗೆ ಅದು 5 ಕೋಟಿಗೆ ಹೋಗುತ್ತದೆ. ಹೀಗಾಗಿ ಈ ದಿವಸ ನಮ್ಮ ಹಣಕಾಸಿನ ಪರಿಸ್ಥಿತಿ ತಲೆಕೆಳಗಾಗಿದೆ. ಅದಕ್ಕೆ ನಾನು ಈಗ ಹೇಳುತ್ತಿರುವುದೇ ಕಾರಣ. ಹೀಗೆ ಲೋಕೋಪಯೋಗಿ ಶಾಖೆಯವರು ತಾವು ಖರ್ಚು ಮಾಡತಕ್ಕ ಹಣದ ಮೇಲೆ ಒಂದು ಸರಿಯಾದ ಹಿಡಿತವನ್ನು ಇಟ್ಟುಕೊಳ್ಳದೆ ಹೋದರೆ ನಾಳೆ ನಾವು ಎಲ್ಲಿಗೆ ನಿಲ್ಲುತ್ತೇವೆಂಬುದನ್ನು ಹೇಳುವುದಕ್ಕಾಗುವುದಿಲ್ಲ. ಹಣದ ಪೂರೈಕೆಗೆ ಎಷ್ಟು ಕೆಲಸಗಳಾಗಬೇಕೋ ಅಷ್ಟು ಕೆಲಸಗಳಾಗಿಲ್ಲ. ಆದರೆ ಇಲ್ಲಿ ಕೋಟ್ಯಾಂತರ ರೂಪಾಯಿಗಳು ಮಾತ್ರ ಖರ್ಚಾಗಿದೆ.

Mr. CHAIRMAN.—The House will now adjourn for recess.

The House rose at Three of the Clock to re-assembled at Thirty Minutes past Three of the Clock.

The House re-assembled at Thirty Minutes past Three of the Clock.

[MR. DEPUTY CHAIRMAN in the Chair]

ಶ್ರೀ ಎಸ್. ಶಿವಪ್ಪ.—ಅಧ್ಯಕ್ಷರೇ, ನಾನು ಹಿಂದೆ ನಮ್ಮ ಲೋಕೋಪಯೋಗಿ ಶಾಖೆಯಲ್ಲಿ ಅಂದಾಜುಗಳನ್ನು ತಯಾರು ಮಾಡತಕ್ಕ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೆ. ನಮ್ಮ ಇಂಜಿನಿಯರಿಂಗ್ ಇಲಾಖೆಯಲ್ಲಿ ತಯಾರಾಗತಕ್ಕ ಯಾವ ಒಂದು ಯೋಜನೆಯೇ ಆಗಲಿ ಅದು ಪೂರೈಸುವ ಹೊತ್ತಿಗೆ ಏನೂ ಇಲ್ಲ ಎಂದರೆ 4-5 ಸಾರಿಯಾದರೂ ಅವು ರಿವೈಜಾಗದೆ ಇರುವುದಿಲ್ಲ. ಹೀಗೆ ಅವು ಪುನರ್ವಿಮರ್ಶೆಯಾಗುತ್ತಿರುವುದರಿಂದ ಹಣದ ವೆಚ್ಚ ಲಂಗೂ ಲಗಾಮು ಇಲ್ಲದಂತೆ ಏರುತ್ತಾ ಹೋಗುತ್ತಿರುತ್ತದೆ. ಹೀಗಾಗಿ ನಮ್ಮ ಲೋಕೋಪಯೋಗಿ ಶಾಖೆಯವರು ಯಾವ ಯಾವ ಯೋಜನೆಗೆ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದಾರೆಂಬುದನ್ನೇ ಹೇಳುವುದಕ್ಕಾಗುವುದಿಲ್ಲ. ಅಂಥ ಒಂದು ನಿರ್ದಿಷ್ಟವಾದ ಲೆಕ್ಕ ಇಲಾಖೆಯುಲ್ಲಾದರೂ ಇದೆಯೋ ಇಲ್ಲವೋ ನನಗೆ ತಿಳಿಯದು. ಹೀಗಾಗಿ ಈ ಇಲಾಖೆಯಿಂದ ಸಾರ್ವಜನಿಕ ಹಣಕ್ಕೆ ಒಂದು ದೊಡ್ಡ ಆಘಾತ ಉಂಟಾಗಿದೆ. ಆದುದರಿಂದ ನಾನು ನಮ್ಮ ಸಚಿವರಿಗೆ ಇಲ್ಲಿ ಇಷ್ಟನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

(ಶ್ರೀ ಎಸ್. ಶಿವಪ್ಪ)

ನಮ್ಮಲ್ಲಿ ಆ ಎಸ್ಟಿಮೇಟುಗಳನ್ನು ತಯಾರು ಮಾಡತಕ್ಕ ಒಂದು ಕಾರ್ಯರಂಗವೇನಿದೆ ಅದಕ್ಕೆ ಮಾನ್ಯ ಮಂತ್ರಿಗಳು ಒಂದು ಕಟ್ಟುನಿಟ್ಟಾದ ಹಾಗೂ ಶಾಸ್ತ್ರೀಯವಾದ ಎಸ್ಟಿಮೇಟುಗಳನ್ನು ತಯಾರಿಸಬೇಕೆಂದೂ ಮತ್ತು ಅವು ಯಾವುದೇ ಒಂದು ಕಾರಣದಿಂದ ಅಂದಾಜು ಮಾಡಿದ ವೆಚ್ಚಕ್ಕಿಂತ ಹೆಚ್ಚಿಗೆ ಹೋಗಬಾರದೆಂದೂ ಒಂದು ಆಜ್ಞೆಯನ್ನು ಕೊಡಬೇಕು ಎಂದು ಹೇಳುತ್ತೇನೆ. ಹಾಗೆ ಮಾಡವಿದ್ದರೆ, ಅಲ್ಲಲ್ಲೇ ಸ್ಥಳದಲ್ಲಿರತಕ್ಕ ಇಂಜಿನಿಯರುಗಳೂ ಮತ್ತು ಕಂಟ್ರಾಕ್ಟರುಗಳೂ ಒಂದಾಗಿ ನಮ್ಮ ಅಂದಾಜುಗಳು ತಲೆಕೆಳಕಾಗುವಂತೆ ಮಾಡುತ್ತಿದ್ದಾರೆ. ಅದರಿಂದ ಸಾರ್ವಜನಿಕರ ಹಣ ದುರುಪಯೋಗವಾಗುತ್ತದೆ. ಇದನ್ನು ಮಂತ್ರಿಗಳು ಪರಿಶೀಲನೆ ಮಾಡಬೇಕು. ಹೀಗೆ ಹಣ ದುರುಪಯೋಗವಾಗುವುದಕ್ಕೆ ಅವಕಾಶ ಕೊಟ್ಟರೆ ನಾವು ಏನೊಂದು ಫಲವನ್ನು ನಿರೀಕ್ಷಿಸುತ್ತೇವೋ ಅದು ಅವುಗಳಿಂದ ಬರುವುದಿಲ್ಲ. ಈ ವಿಚಾರವನ್ನು ಎಸ್ಟಿಮೇಟ್ಸ್ ಕಮಿಟಿ ಮತ್ತು ಪಬ್ಲಿಕ್ ಅಕೌಂಟ್ಸ್ ಕಮಿಟಿಗಳಲ್ಲಿ ವಿಪುಲವಾಗಿ ಚರ್ಚೆ ಮಾಡಲಾಗಿದೆ. ಅನೇಕ ಯೋಜನೆಗಳ ಕೆಲಸ ಮುಗಿದಿದ್ದರೂ ಅಲ್ಲಿನ್ನೂ ಸ್ಟಾಕ್‌ವೆರಿಫಿಕೇಷನ್ ಆಗುವುದಿಲ್ಲ. ಅಲ್ಲಿಗೆ ಕಬ್ಬಿಣ ಎಷ್ಟು ಬಂತು, ಎಷ್ಟು ಖರ್ಚಾಯಿತು, ಇನ್ನೆಷ್ಟು ಸ್ಟಾಕಿದೆ, ಸಿಮೆಂಟ್ ಎಷ್ಟು ಬಂತು, ಎಷ್ಟು ಖರ್ಚಾಯಿತು, ಇನ್ನೆಷ್ಟು ಉಳಿದಿದೆ ಅನ್ನುವ ವಿವರಗಳು ಒಂದೂ ಇಲ್ಲ. ಕೆಲಸ ಪೂರೈಸಿ 4–5 ವರ್ಷಗಳು ಕಳೆದಾಗ್ಯೂ ಆ ಲೆಕ್ಕಗಳು ಸಿಕ್ಕುವುದಿಲ್ಲ ಎಂದರೇನು ಅರ್ಥ ? ಇಂಜಿನಿಯರಿಂಗ್ ಇಲಾಖೆಯಲ್ಲಿ ಇಂಥ ಒಂದು ವ್ಯವಸ್ಥೆ ಇಲ್ಲ ಅನ್ನುವುದಾದರೆ ಇನ್ನು ನಮ್ಮ ಹಣಕ್ಕೆ ಹಿಡಿತವೆಲ್ಲಿದೆ ? ಅಷ್ಟು ಅಪಾರವಾದ ಹಣ ಎಲ್ಲಿ ಹೋಯಿತು ಎನ್ನುವುದೇ ಗೊತ್ತಾಗುವುದಿಲ್ಲ. ಹೀಗಾಗೇ ನಮ್ಮ ಪ್ರತಿಯೊಂದು ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳಲ್ಲಿ—ಆ ಶರಾವತಿ ಆಗಲಿ ತುಂಗಾ ಪ್ರಾಜೆಕ್ಟಾಗಲಿ ಅಥವಾ ಭದ್ರಾ ಪ್ರಾಜೆಕ್ಟಾಗಲಿ ಯಾವು ಯಾವುದಕ್ಕೆ ಎಷ್ಟೆಷ್ಟು ಹಣ ಖರ್ಚಾಯಿತು ಎಂಬುದಕ್ಕೆ ಲೆಕ್ಕಾಚಾರಗಳೇ ಇಲ್ಲದಿರುವುದರಿಂದ ಅಲ್ಲಿ ಬಹಳ ಹಣ ದುರುಪಯೋಗವಾಗಿದೆ ಅನ್ನುವುದು ಯಾರಿಗಾದರೂ ಕಾಣಲೇಬೇಕು. ಇಂಥಾ ಒಂದು ಶಂಕೆ ಬಂದುದರಿಂದಲೇ ನಾವು ಆ ಶರಾವತಿಯ ಬಗ್ಗೆ ವಿಚಾರಣೆ ಮಾಡಬೇಕೆಂದು ಒಂದು ದೂರನ್ನೂ ಸಹಾ ಕೊಟ್ಟೆವು. ಆದರೆ ನಾವು ಇಂಥಾ ದೂರುಗಳನ್ನು ಪದೇ ಪದೇ ಹೇಳುತ್ತಿದ್ದಾಗ್ಯೂ ನಮ್ಮ ಮುಖ್ಯಮಂತ್ರಿಗಳು ಆ ಶರಾವತಿ ಬಗ್ಗೆ ಕೊಡಲಾಗಿದ್ದ ದೂರಿನ ವಿಚಾರಣೆ ಮುಗಿಯಿತು ಎಂದು ಹೇಳುತ್ತಿದ್ದಾರೆ. ಅಂಥಾ ಒಂದು ಮನೋನಿರ್ಧಾರ ಅವರಿಗಿರುವುದಾದರೆ ಅವರು ಅಲ್ಲಿ ತಪ್ಪಿತಸ್ಥರನ್ನು ಹಿಡಿದು ಯಾವ ಯಾವ ಯೋಜನೆಗೆ ಎಷ್ಟೆಷ್ಟು ಹಣ ಖರ್ಚಾಗಿದೆ, ಎಷ್ಟು ಹಣ ದುರ್ವಿನಿಯೋಗ ಆಗಿದೆ ಎಂಬುದನ್ನು ಕಂಡು ಹಿಡಿದು ತಪ್ಪಿತಸ್ಥರಿಗೇಕೆ ಶಿಕ್ಷೆ ಮಾಡಬಾರದು ? ಅಥವಾ ಅಂಥ ಒಂದು ಅಧಿಕಾರ ಸರ್ಕಾರಕ್ಕಿಲ್ಲವೋ ? ಅಷ್ಟನ್ನು ಮಾಡದ ವಿನಾ ನಮ್ಮ ಯೋಜನೆಗಳಿಂದ ನಾವೇನು ಫಲವನ್ನು ನಿರೀಕ್ಷಣೆ ಮಾಡಿಕೊಂಡಿದ್ದೇವೋ ಆ ಫಲ ನಮಗೆ ಬರುವುದಿಲ್ಲ. ಇನ್ನಾದರೂ ಈ ಬಗೆಯ ದೂರುಗಳು ಕಂಟ್ರಾಕ್ಟರ ಮೇಲಾಗಲಿ ಅಥವಾ ಇಂಜಿನಿಯರುಗಳ ಮೇಲಾಗಲಿ ಬಂದರೆ ಅಂಥವರನ್ನು ವಿಚಾರಣೆ ಮಾಡಿ ಅವರನ್ನು ತಪ್ಪಿತಸ್ಥರೆಂದು ಕಂಡು ಬಂದಾಗ ಅವರನ್ನು ಕ್ರೂರ ಶಿಕ್ಷೆಗೆ ಒಳಗು ಮಾಡಬೇಕು. ಅಂಥ ಒಂದು ಭಯ ಅವರಲ್ಲಿ ಹುಟ್ಟದಿದ್ದರೆ ನಾವು ಖರ್ಚುಮಾಡತಕ್ಕ ಹಣಕ್ಕೆ ಸರಿಯಾದ ಪ್ರತಿಫಲ ಬರುವುದಿಲ್ಲ. ಈ ಇಂಜಿನಿಯರಿಂಗ್ ಇಲಾಖೆಯಲ್ಲಿ ಹಣ ದುರುಪಯೋಗವಾಗುವುದಕ್ಕೆ ಇರುವಷ್ಟು ಅವಕಾಶ ಇನ್ನು ಬೇರಾವ ಇಲಾಖೆಗೂ ಇರುವುದಿಲ್ಲ. ದೇಶಾಭಿವೃದ್ಧಿಯ ಹೆಸರಿನಲ್ಲಿ ದೇಶದ ಬಹುಪಾಲು ಹಣವನ್ನು ಖರ್ಚು ಮಾಡುವುದು ಈ ಇಲಾಖೆ. ಇದು ದೇಶದ ಸಂಪತ್ತನ್ನು ಸೃಷ್ಟಿಸುವ ಒಂದು ಇಲಾಖೆಯಾಗಿದೆ. ಇದು ಮನಸ್ಸು ಮಾಡಿದರೆ ದೇಶಕ್ಕೆ ಅತುಳವಾದ ಸಂಪತ್ತನ್ನಾದರೂ ತರಬಲ್ಲದು, ಇಲ್ಲವೇ ದೊಡ್ಡ ವಿಪತ್ತನ್ನಾದರೂ ತರಬಲ್ಲರು. ಆದುದರಿಂದ ಈ ಒಂದು ಇಲಾಖೆಗೆ ಹಣವನ್ನು ಪೋಲು ಮಾಡುವುದಕ್ಕೆ ವಿಶೇಷ ಅವಕಾಶವಿದೆ ಅಂತಲೇ ಇದನ್ನು ಕೆಲವರು ಪಬ್ಲಿಕ್ ಮನಿಯನ್ನು ವೇಸ್ಟ್ ಮಾಡತಕ್ಕ ಇಲಾಖೆ ಎಂದು ಹೇಳುತ್ತಿದ್ದರೆ, ಶ್ರೀಮಾನ್ ಚಕ್ರವರ್ತಿ ರಾಜಗೋಪಾಲಾಚಾರ್ ಅವರು ಇದನ್ನು ಪಬ್ಲಿಕ್ ಎನಿಮಿ ನಂಬರ್ ಒನ್ ಎಂಬುದಾಗಿ ಹೇಳಿದ್ದಾರೆ. ಈ ಲೋಕೋಪಯೋಗಿ ಶಾಖೆಯಲ್ಲಿ ಎಷ್ಟರಮಟ್ಟಿಗೆ ಹಣ ದುರುಪಯೋಗವಾಗುತ್ತಾ ಇವೆ ಎಂಬುದನ್ನು ಧೈರ್ಯವಾಗಿ ವಿಚಾರ ಮಾಡುವುದಾದರೆ, ಈ ದಿವಸ ನಿಮ್ಮ ಇಂಜಿನಿಯರುಗಳು ಯಾರ ಯಾರ ಹೆಸರಿನಲ್ಲಿ ಎಷ್ಟೆಷ್ಟು ಮನೆಗಳನ್ನು ಕಟ್ಟಿಸಿದ್ದಾರೆಂಬುದು ತಮಗೇ ವೇದ್ಯವಾಗುತ್ತದೆ. ಆದರೆ ನಾನಿಲ್ಲಿ ಇಷ್ಟೆಲ್ಲಾ ವಿಚಾರಗಳನ್ನು ಹೇಳುತ್ತಿದ್ದರೂ ಹೇಳಿಕೊಳ್ಳಲಿ ನಾನು ಏನೋ ಲೋಕಾಭಿರಾಮವಾಗಿ ಒಂದು ಉತ್ತರ ಹೇಳಿದರಾಯಿತು ಎಂದು ತಾವು ಭಾವಿಸಿರಬಹುದು. ಆದರೆ ಅಂಥಾ ಮನೋಭಾವನೆ ಸರಿಯಲ್ಲ. ನಾವೀದಿವಸ ಈ ಇಲಾಖೆಗೆ 91 ಕೋಟಿ ಕೋಟಿ ರೂಪಾಯಿಗಳ ಬೇಡಿಕೆಗಳನ್ನು ಮಂಜೂರು ಮಾಡಿ ಇಷ್ಟು ಅಪಾರ ಹಣವನ್ನು ಇವರ

ಕೈಗೆ ಕೊಡುತ್ತಿದ್ದೇವೆ. ಇಷ್ಟು ಹಣವನ್ನು ಖರ್ಚು ಮಾಡಲು ಇವರಿಗೆಷ್ಟು ದಕ್ಷತೆ ಇರಬೇಕು ? ಎಲ್ಲಾ ಇಂಜಿನಿಯರಿಂಗ್ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ಎಷ್ಟು ದಕ್ಷತೆಯಿಂದ ಸತ್ಯಸಂಧತೆಯಿಂದ, ನಿಷ್ಠಾವಂತರಾಗಿ ಕೆಲಸ ಮಾಡುತ್ತಿದ್ದರೂ ಅಲ್ಲಿ ಹಣವನ್ನು ದುರುಪಯೋಗ ಮಾಡುವುದಕ್ಕೆ ಅವಕಾಶವಿದ್ದೇ ಇದೆ. ಕಂಟ್ರಾಕ್ಟರ ಮೇಲೆ ಅನೇಕ ದೋಷಾರೋಪಣೆಗಳು ಬರುತ್ತಿವೆ. ಉದಾಹರಣೆಗೆ ನಾನೇ ಮೊನ್ನೆ ಆ ಹೇಮಾವತಿ ವಿಚಾರ ಹೇಳಿದ್ದೆ. ಕಂಟ್ರಾಕ್ಟ್‌ಗಳನ್ನು ಹಂಚತಕ್ಕ ವಿಚಾರದಲ್ಲಿ, ಮೆಷಿನರಿಗಳನ್ನು ಕೊಳ್ಳತಕ್ಕ ವಿಚಾರದಲ್ಲಿ ಹಾಗೂ ಟೆಂಡರುಗಳನ್ನು ಕರೆಯತಕ್ಕ ವಿಚಾರದಲ್ಲಿ ಅನೇಕ ನಿಯಮಾವಳಿಗಳಿವೆ...

ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಹೇಮಾವತಿಯ ಬಗ್ಗೆ ನಾವು ಟೆಂಡರುಗಳನ್ನು ಕರೆದಿದ್ದೆವು. ಆ ಟೆಂಡರುಗಳಲ್ಲಿ ಯಾರದು ಅತ್ಯಂತ ಕಡಮೆ ಟೆಂಡರ್ ಇತ್ತೋ ಅದನ್ನೇ ನಾವು ಈಗ ಅಂಗೀಕರಿಸಿದ್ದೇವೆ. ಹಾಗಲ್ಲದೆ ನಾವೇನಾದರೂ ಅಲ್ಲಿ ಮಾಡಿದ್ದರೆ ಇವರು ಇನ್ನೆಂಥಾ ಕಥೆಗಳನ್ನು ಕಟ್ಟುತ್ತಿದ್ದರೋ ತಿಳಿಯದು...

ಶ್ರೀ ಎಸ್. ಶಿವಪ್ಪ.—ನೀರಾವರಿ ಯೋಜನೆಗಳಲ್ಲಿ ಅನುಭವ ಇರತಕ್ಕವರು ಮಾತ್ರ ಇದಕ್ಕೆ ಅರ್ಜಿಯನ್ನು ಹಾಕಬೇಕು ಎಂದು ನಮೂದು ಮಾಡಿದ್ದಾರೆ. ಆ ಕಾನೂನನ್ನು ಎಲ್ಲಿ ಅನುಸರಣೆ ಮಾಡಿದ್ದೀರಿ? ನೀರಾವರಿ ಯೋಜನೆಗಳಲ್ಲಿ ಅನುಭವ ಇಲ್ಲದೇ ಇರತಕ್ಕವರಿಗೆ ಕಂಟ್ರಾಕ್ಟನ್ನು ಕೊಟ್ಟಿದ್ದೀರಿ. ಇದನ್ನು ಏತಕ್ಕೆ ಕಂಟ್ರಾಕ್ಟಿನ ರೂಲ್ಸಿನಲ್ಲಿ ನಮೂದು ಮಾಡಬೇಕಾಗಿತ್ತು? ನೀರಾವರಿ ಕೆಲಸಗಳಲ್ಲಿ ಅನುಭವ ಇರುವವರು ಬಹಳ ಜನ ಆ ಕೆಲಸಕ್ಕೆ ಅರ್ಜಿಗಳನ್ನು ಹಾಕಿದ್ದರು. ಆದರೂ ಸಹ ಅನುಭವ ಇಲ್ಲದೇ ಇರುವವರಿಗೆ ಆ ಕಂಟ್ರಾಕ್ಟನ್ನು ಕೊಟ್ಟಿದ್ದಾರೆ. ಆದ್ದರಿಂದ ಆ ವಿಚಾರದಲ್ಲಿ ಅನುಮಾನಾಸ್ಪದವಾಗಿದೆ. ಆ ವಿಷಯದಲ್ಲಿ ಸರ್ಕಾರ ತಪ್ಪು ಮಾಡಿದೆ ಎಂದು ನಾನು ತಮ್ಮಲ್ಲಿ ನಿರ್ದಿಷ್ಟವಾಗಿ ಹೇಳುತ್ತಿದ್ದೇನೆ. ಅವರಿಂದ ಸರ್ಕಾರಕ್ಕೆ ಹಣವನ್ನು ಉಳಿಸತಕ್ಕ ಕ್ರಮವನ್ನು ತೆಗೆದುಕೊಂಡರೆ ಅವರಿಗೆ ಷಹಭಾಷ್ ಗಿರಿಯನ್ನು ಕೊಡಬಹುದು. ಆದರೆ ಇವರು ಇದರಲ್ಲಿ ಅನುಮಾನ ಬರತಕ್ಕ ರೀತಿಯಲ್ಲಿ ಕೆಲಸಗಳನ್ನು ಮಾಡಬಾರದು. ಈ ಇಲಾಖೆಯಲ್ಲಿ ಒಬ್ಬರಿಗೆ ಒಂದು ರೀತಿ ಇನ್ನೊಬ್ಬರಿಗೆ ಇನ್ನೊಂದು ರೀತಿ ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ ಹಾಕುವ ವಿಧಾನ ನಡೆಯಬಾರದು. ಲೋಕೋಪಯೋಗಿ ಇಲಾಖೆ ದೇಶದಲ್ಲಿ ಹೆಚ್ಚು ಹಣವನ್ನು ಖರ್ಚು ಮಾಡತಕ್ಕ ದೊಡ್ಡ ಇಲಾಖೆ. ಆದ್ದರಿಂದ ನಾನು ಬಹಳ ಆಗ್ರಹಪೂರ್ವಕವಾಗಿ ಹೇಳುತ್ತೇನೆ. ಈ ಇಲಾಖೆಯಲ್ಲಿ ನಡೆಯತಕ್ಕ ಅನ್ಯಾಯವನ್ನು ತಡೆಗಟ್ಟದೇ ಹೋದರೆ ಇಲಾಖೆಯಲ್ಲಿ ಒಂದು ಸರಿಯಾದ ಆಡಳಿತವನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ತಪ್ಪು ಮಾಡಿದವರು ಯಾರೇ ಆಗಲೀ ಅವರ ಮೇಲೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಇನ್ನು ಕೊನೆಯದಾಗಿ ಮೈಸೂರಿನ ನೀರಾವರಿ ಸಂಪತ್ತು ಏನಿದೆ ಇದರಲ್ಲಿ ನದಿ ನೀರಿನ ಹಂಚಿಕೆಯ ವಿಷಯದಲ್ಲಿ ನಮ್ಮ ಸರ್ಕಾರದವರು ಒಂದು ನಿರ್ದಿಷ್ಟವಾದ, ಧೈರ್ಯವಾದ ನಿಲುವನ್ನು ತೆಗೆದುಕೊಂಡು ಇದನ್ನು ಬಗೆಹರಿಸಿಕೊಳ್ಳಬೇಕು. ಕೇಂದ್ರ ಸರ್ಕಾರದವರೊಡನೆ ಹೋರಾಟ ಮಾಡಿ ನಮ್ಮ ಹಕ್ಕನ್ನು ಪಡೆಯತಕ್ಕ ಪ್ರಯತ್ನವನ್ನು ಮಾಡಬೇಕು. ಈ ವಿಚಾರದಲ್ಲಿ ಸರ್ಕಾರದವರು ಅಲಕ್ಷ್ಯ ಮಾಡಬಾರದು. ಆ ರೀತಿ ಈ ನದಿ ನೀರಿನ ಹಂಚಿಕೆಯ ವಿಷಯದಲ್ಲಿ ಸರ್ಕಾರದವರು ಅಲಕ್ಷ್ಯ ಮಾಡುವುದಾದರೆ ನಮ್ಮ ದೇಶದ ಹಿತವನ್ನು ಮಾರಾಟ ಮಾಡಿದ ಹಾಗಾಗುತ್ತದೆ. ಈ ದೃಷ್ಟಿಯಿಂದ ಸರ್ಕಾರದವರು ಕೇಂದ್ರ ಸರ್ಕಾರದವರೊಡನೆ ಹೋರಾಟ ಮಾಡಿದರೆ ಈ ನದೀ ನೀರಿನಲ್ಲಿ ನಮ್ಮ ಹಕ್ಕನ್ನು ಪಡೆಯುವುದಕ್ಕೆ ಈ ಸಭೆ ಒಂದು ಶಕ್ತಿಯನ್ನು ಕೊಡುತ್ತದೆ. ಆದ್ದರಿಂದ ಆ ಕೆಲಸವನ್ನು ಮಾಡಿ ನದೀ ನೀರಿನಲ್ಲಿ ನಮಗೆ ಬರಬೇಕಾದ ನ್ಯಾಯವನ್ನು ದೊರಕಿಸಿಕೊಳ್ಳುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ಮತ್ತೊಮ್ಮೆ ನಾನು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸೊಲೂರು ಸಿದ್ದಪ್ಪ (ಕುದೂರ್).—ಸನ್ಮಾನ್ಯ ಸಭಾಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಸರ್ಕಾರದವರು ಮಂಡಿಸಿರತಕ್ಕ ಲೋಕೋಪಯೋಗಿ ಇಲಾಖೆಯ ಡಿಮ್ಯಾಂಡನ್ನು ನಾನು ಅನುಮೋದಿಸುತ್ತಾ ಕೆಲವು ಸಲಹೆಗಳನ್ನು ಕೊಡಲಿಕ್ಕೆ ತಮ್ಮ ಮುಂದೆ ನಿಂತಿದ್ದೇನೆ. ಈಗ ಮೈಸೂರು ಸಂಸ್ಥಾನದಲ್ಲಿ ಇದಕ್ಕೆ 93 ಕೋಟಿ ರೂಪಾಯಿಗಳ ಒಂದು ಡಿಮ್ಯಾಂಡ್ ಇದ್ದಾಗ್ಯೂ ಕೂಡ ಮೈನರ್ ಕೆರೆಗಳ ಜೀರ್ಣೋದ್ಧಾರಕ್ಕೋಸ್ಕರ ಸ್ವಲ್ಪ ಹೆಚ್ಚಿನ ಹಣವನ್ನು ಮೀಸಲಾಗಿಡಬೇಕಾಗಿತ್ತು ಎಂದು ನನ್ನ ಭಾವನೆ. ಸರ್ಕಾರದವರು ಈ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕು ಕಾರಣ ಇಷ್ಟೆ. ಮೈಸೂರು ಸಂಸ್ಥಾನದ ನಾನಾ ಭಾಗಗಳಲ್ಲಿ ದೊಡ್ಡ ದೊಡ್ಡ ಜಲಾಶಯಗಳನ್ನು ನಿರ್ಮಾಣ ಮಾಡುವುದಕ್ಕೆ ಸರ್ಕಾರದವರು ಹೆಚ್ಚಿನ ಮೊತ್ತವನ್ನು ನಿಗದಿ ಮಾಡಿದ್ದಾರೆ, ಸಂತೋಷ. ಆದರೆ ಮೈನರ್ ಕೆರೆಗಳ ಜೀರ್ಣೋದ್ಧಾರಕ್ಕೋಸ್ಕರ,

(ಶ್ರೀ ಸೋಲೂರು ಸಿದ್ದಪ್ಪ)

ಸಾವಿರಾರು ವರ್ಷಗಳಿಂದ ರಾಜಮಹಾರಾಜರುಗಳು ಕಟ್ಟಿಸಿ ಹೋಗಿರತಕ್ಕ ಕೆರೆಗಳ ಜೀರ್ಣೋದ್ಧಾರಕ್ಕೋಸ್ಕರ ಹೆಚ್ಚಿನ ಮಟ್ಟದಲ್ಲಿ ಹಣವನ್ನು ಮೀಸಲಾಗಿಡಬೇಕಾಗಿತ್ತು ಎಂದು ನನ್ನ ಭಾವನೆ. ಈಗಾಗಲೇ ಅನೇಕ ವರ್ಷಗಳಿಂದ ಸರ್ಕಾರದವರು ಮೈನರ್ ಕೆರೆಗಳ ಜೀರ್ಣೋದ್ಧಾರದ ಕಡೆಗೆ ತಮ್ಮ ಗಮನವನ್ನು ಹೆಚ್ಚು ಹರಿಸಿಲ್ಲ. ಎಲ್ಲಿಯವರೆಗೆ ಮೈನರ್ ಕೆರೆಗಳ ಜೀರ್ಣೋದ್ಧಾರವಾಗುವುದಿಲ್ಲ ಅಲ್ಲಿಯವರೆಗೆ ಗ್ರಾಮಾಂತರ ಪ್ರದೇಶದ ಜನಗಳಿಗೆ, ಅದನ್ನೇ ನಂಬಿಕೊಂಡಿರತಕ್ಕ ಕೃಷಿ ರೈತರಿಗೆ ತುಂಬಾ ಕಷ್ಟವಾಗುತ್ತದೆನ್ನತಕ್ಕಂಥಾದ್ದನ್ನು ಸರ್ಕಾರದವರು ಮನಗಾಣಬೇಕು. ಯಾವಾಗಲೂ ದೊಡ್ಡ ಜಲಾಶಯಗಳನ್ನು ನಿರ್ಮಾಣ ಮಾಡತಕ್ಕದ್ದರಲ್ಲಿ ಸರ್ಕಾರದವರಿಗೆ ಎಷ್ಟು ಆಸಕ್ತಿ ಇದೆಯೋ ಅದೇರೀತಿ ಹಿಂದಿನಿಂದಲೂ ಬಂದಿರತಕ್ಕ ಮೈನರ್ ಕೆರೆಗಳ ಬಗ್ಗೆ ಅಷ್ಟೇ ಆಸಕ್ತಿ ವಹಿಸಿ ಅವುಗಳನ್ನು ಜೀರ್ಣೋದ್ಧಾರ ಮಾಡಿ ರೈತರಿಗೆ ಸಹಾಯ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ದೊಡ್ಡ ದೊಡ್ಡ ಜಲಾಶಯಗಳಲ್ಲಿ ಜಮೀನುಗಳಿಗೆ ನೀರನ್ನು ಒದಗಿಸುವುದಕ್ಕೋಸ್ಕರ ತೋಟಿಗಳು ಇಲ್ಲ. ಹಿಂದೆ ಇದ್ದವರನ್ನೆಲ್ಲಾ ರದ್ದು ಮಾಡಿ ಅವರಿಗೆ ಇದ್ದಂತಹ ಜಮೀನನ್ನು ಅವರಿಗೇ ಕೊಟ್ಟಿದ್ದಾರೆ. 150 ಎಕರೆಗೆ ಮೇಲ್ಪಟ್ಟು ಇರತಕ್ಕಂಥ ಎಲ್ಲಾ ಕೆರೆಗಳ ಹಿಂಭಾಗಗಳಲ್ಲಿಯೂ ನೀರು ಪೋಲಾಗದಂತೆ ಸುರಕ್ಷಿತವಾಗಿ ಎಲ್ಲಾ ರೈತರಿಗೂ ನೀರನ್ನು ಒದಗಿಸುವಂತಹ ರೀತಿಯಲ್ಲಿ ವ್ಯವಸ್ಥೆ ಮಾಡುವುದಕ್ಕೆ ಒಂದು ಯೋಜನೆಯನ್ನು ತಯಾರು ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ. ಆದರೆ ಅದು ಕಾರ್ಯರೂಪಕ್ಕೆ ಬಂದಿಲ್ಲ. ಅದನ್ನು ಸರ್ಕಾರದವರು ಜಾಗ್ರತೆ ಕಾರ್ಯರೂಪಕ್ಕೆ ತಂದರೆ ಅದರಿಂದ ಎಲ್ಲಾ ರೈತರಿಗೂ ಸೌಲಭ್ಯ ದೊರೆಯುತ್ತದೆ. ಈಗ ಬಡ ಬಗ್ಗರಿಗೆ ಸರಿಯಾಗಿ ಜಮೀನುಗಳಿಗೆ ನೀರು ಸಿಕ್ಕದೆ ಬಡಬಗ್ಗರು ಕೆಳಮಟ್ಟಕ್ಕೆ ಹೋಗತಕ್ಕಂಥ ಪರಿಸ್ಥಿತಿ ಬಂದಿದೆ. ಈಗ ಒಂದು ವಿಷಯವನ್ನು ಹೇಳುತ್ತೇನೆ. ನನ್ನ ತಾಲ್ಲೂಕಾದ ಮಾಗಡಿ ತಾಲ್ಲೂಕಿನಲ್ಲಿ 225 ಮೈನರ್ ಮತ್ತು ಮೇಜರ್ ಕೆರೆಗಳು ಇವೆ. 150ಕ್ಕೆ ಮೇಲ್ಪಟ್ಟು ಮೈನರ್ ಕೆರೆಗಳ ಜೀರ್ಣೋದ್ಧಾರವಾಗಿಲ್ಲ. ಮೈನರ್ ಕೆರೆಗಳು ಎಲ್ಲಿಯವರೆಗೆ ಜೀರ್ಣೋದ್ಧಾರವಾಗುವುದಿಲ್ಲ ಅಲ್ಲಿಯವರೆಗೆ ಆಯಾ ಪ್ರಾಂತದ ಜನಗಳಿಗೆ ಅನ್ಯಾಯವಾಗುತ್ತದೆ ಎನ್ನತಕ್ಕಂಥಾದ್ದನ್ನು ಸರ್ಕಾರದವರು ಮನಗಂಡು ಅದರ ಬಗ್ಗೆ ಸರ್ಕಾರದವರು ಪೂರ್ಣವಾದ ಆಸಕ್ತಿಯನ್ನು ವಹಿಸಬೇಕು ಎಂದು ನಾನು ವಿನಂತಿಸಿಕೊಳ್ಳುತ್ತೇನೆ. ಮೈನರ್ ಇರಿಗೇಷನ್ನಿಗೆ ಸಂಬಂಧಪಟ್ಟಹಾಗೆ ಒಂದು ಯೋಜನೆಯನ್ನು ಸರ್ಕಾರದವರು ಮಾಡಿದ್ದು ಸಹಜ. ದೇಶಾದ್ಯಂತ ಅದಕ್ಕಾಗಿ ಇಲಾಖೆಯವರು ಕೆಲವರನ್ನು ನೇಮಕ ಪ್ರತಿ ತಾಲ್ಲೂಕಿನಲ್ಲಿಯೂ ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ರೆಕಾರ್ಡು ವ್ಯವಸ್ಥೆಯಾಗಿ ನಿಂತಿದೆ. ಆ ಕೆಲಸಗಳನ್ನು ಕೈಗೊಳ್ಳುವುದಕ್ಕೆ ಹಣದ ಅಭಾವದಿಂದಲೋ ಅಥವಾ ಮತ್ತೆಯಾವುಯೋ ಕಾರಣದಿಂದಲೋ ಮೈನರ್ ಇರಿಗೇಷನ್ ಯೋಜನೆ ಮುಂದುವರೆದಿಲ್ಲ. ಈಗ ಈ ಮೈನರ್ ಇರಿಗೇಷನ್ ಬಗ್ಗೆ ಸರ್ಕಾರದವರು ಏನು ಒಂದು ಆಫೀಸನ್ನು ಮಾಡಿದ್ದಾರೋ ಅದನ್ನು ರದ್ದು ಮಾಡಿ ಈಗ ಇರತಕ್ಕಂಥ ಇಂಜಿನಿಯರಿಂಗ್ ಇಲಾಖೆಯವರೇ ಆ ಕೆಲಸವನ್ನು ಮಾಡುವ ಹಾಗೆ ಸಹಾಯ ಮಾಡಬೇಕೆಂದು ನಾನಾದರೂ ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮೈನರ್ ಇರಿಗೇಷನ್ನಿಗೆ ಸಂಬಂಧಪಟ್ಟ ಹಾಗೆ ಕೆಲವು ರೆಕಾರ್ಡುಗಳನ್ನು ತಯಾರು ಮಾಡಿರುವುದು ಹಾಗೆಯೇ ನಿಂತಿದೆ. ಇದರ ಬಗ್ಗೆ ಸರ್ಕಾರದವರು ಹಣವನ್ನು ಒದಗಿಸಿ ಆ ಕಾರ್ಯಗಳನ್ನು ನೇರವೇರಿಸಿದ ಪಕ್ಷದಲ್ಲಿ ಅದರಿಂದ ಜನಗಳಿಗೆ ಹೆಚ್ಚಿನ ಲಾಭ ಆಗುತ್ತದೆ. ಅದರಿಂದ ಇನ್ನುಮೇಲೆ ಮೈನರ್ ಇರಿಗೇಷನ್ ಕೆಲಸಗಳನ್ನು ಮಾಡುವುದಕೋಸ್ಕರ ಓಪನ್ ಮಾಡಿದಂತಹ ಆಫೀಸುಗಳನ್ನು ರದ್ದು ಮಾಡಿ ಈಗ ಹಾಲಿ ಮೊದಲಿನಿಂದಲೂ ಇರತಕ್ಕ ಆ ಇಲಾಖೆಗಳವರಿಗೆ ಆ ಕೆಲಸವನ್ನು ಕೊಡತಕ್ಕದ್ದು ಸಹಜ. ಹಾಗೆ ಹೆಚ್ಚಾಗಿ ನೌಕರ ವರ್ಗಕ್ಕೆ ಪೋಲಾಗತಕ್ಕಂಥಾದ್ದಕ್ಕೆ ಅವಕಾಶವನ್ನು ಕೊಡಬಾರದು. ಈಗ ಮೈಸೂರು ಸಂಸ್ಥಾನದಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಂದೊಂದು ಆಸಿಸ್ಟೆಂಟ್ ಇಂಜಿನಿಯರುಗಳ ಆಫೀಸುಗಳು ಏನಿರುತ್ತವೆಯೋ ಆ ಮೈನರ್ ಇರಿಗೇಷನ್ ಬ್ರಾಂಚು ಇರಬೇಕಾದ ಅವಶ್ಯಕತೆ ನನ್ನ ದೃಷ್ಟಿಯಲ್ಲಿ ಕಂಡುಬರುವುದಿಲ್ಲ. ಆದ್ದರಿಂದ ಇದನ್ನು ರದ್ದುಗೊಳಿಸಬೇಕಾದ್ದು ಅವಶ್ಯಕ.

ಇನ್ನು ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಬಹಳ ಹೆಚ್ಚಿನ ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತದೆ. ಇದಕ್ಕೆ ಸರ್ಕಾರದವರೂ ಕೂಡ ಕೋಟ್ಯಾಂತರ ರೂಪಾಯಿನ್ನು ಖರ್ಚು ಮಾಡಿದ್ದಾರೆ. ಶರಾವತಿಯಿಂದ ಬಹು ಚೆನ್ನಾಗಿ ಲಾಭವಾಗಿದೆ. ಹೆಚ್ಚು ವಿದ್ಯುಚ್ಛಕ್ತಿ ಉತ್ಪಾದನೆಯಾದರೂ ಕೂಡ

ತಕ್ಷಣ ಇದರಲ್ಲಿ ರೈತರಿಗೆ ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದರಲ್ಲಿ ಕೆಲವು ತೊಂದರೆಗಳು ಇವೆ. ಕೆಲವು ಅಗತ್ಯವಾದ ಸಾಮಾನುಗಳು ತಕ್ಷಣ ಒದಗದೇ, ಕಂಬಗಳನ್ನು ಹಾಕುವುದು ನಿಧಾನವಾಗಿ ರೈತರು ತಮ್ಮ ಕೆಲಸಗಳನ್ನು ಮಾಡಿಕೊಳ್ಳುವುದಕ್ಕೆ ಕಷ್ಟವಾಗಿದೆ. ಈ ಸಂದರ್ಭದಲ್ಲಿ ನಾನು ಒಂದು ವಿಷಯವನ್ನು ಹೇಳಬೇಕಾಗಿದೆ. ಯಾವಾಗಲೂ ಮೊದಲು ನಮ್ಮ ಸಂಸಾರವನ್ನು ಭದ್ರಮಾಡಿಕೊಂಡು ಇತರ ವಿಷಯಗಳಿಗೆ ಗಮನ ಕೊಡಬೇಕಾದ್ದು ಸಹಜ ಇವೆ. ಅದ್ದರಿಂದ ವಿದ್ಯುಚ್ಛಕ್ತಿ ಇಲಾಖೆಯವರು ಮೊದಲು ನಮ್ಮ ದೇಶದ ಜನಗಳಿಗೆ, ಗ್ರಾಮಾಂತರ ಪ್ರದೇಶದ ಜನಗಳಿಗೆ, ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಗಮನ ಕೊಡಬೇಕೆಂದು ನಾನಾದರೂ ಸಲಹೆ ಮಾಡುತ್ತೇನೆ.

ಇನ್ನು ರಸ್ತೆ ಕಾಮಗಾರಿಗಳ ವಿಷಯದಲ್ಲಿ ಒಂದು ಸಲಹೆಯನ್ನು ಕೊಡಬೇಕಾಗಿದೆ. ಮೈಸೂರು ಸಂಸ್ಥಾನದ ಪಿ.ಡಬ್ಲ್ಯು. ಇಲಾಖೆಯವರು ದೊಡ್ಡ ಮನಸ್ಸು ಮಾಡಿ ತಾಲ್ಲೂಕು ಬೋರ್ಡಿನವರಿಗೆ ಇದ್ದಂತಹ ರಸ್ತೆಗಳನ್ನು ತಮ್ಮ ಇಲಾಖೆಗೆ ಸೇರಿಸಿಕೊಂಡಿದ್ದು ಬಹಳ ಸಂತೋಷ. ಸಾರಿಗೆ ವಿಚಾರದಲ್ಲಿ ಸರ್ಕಾರದವರು ಹೆಚ್ಚು ಆಸಕ್ತಿಯನ್ನು ವಹಿಸಿ ಕೆಲಸ ಮಾಡಿದ್ದಾರೆ. ಆದರೆ ರಸ್ತೆಗಳ ರಿಪೇರಿ ಮತ್ತು ಹೊಸ ರಸ್ತೆಗಳ ನಿರ್ಮಾಣದ ಬಗ್ಗೆ ಬಡ್ಜೆಟ್ಟಿನಲ್ಲಿ ಎಷ್ಟು ಹಣವನ್ನು ಒದಗಿಸಬೇಕಾಗಿತ್ತೋ ಅಷ್ಟು ಹಣವನ್ನು ಒದಗಿಸಿಲ್ಲ. ಈ ಇಲಾಖೆಯವರು ರಸ್ತೆಗಳನ್ನು ಚೆನ್ನಾಗಿ ಉತ್ತಮವಾದ ರಸ್ತೆಗಳನ್ನಾಗಿ ಮಾಡಿ ಜನಗಳಿಗೆ ಸಂಚಾರ ಮಾಡುವುದಕ್ಕೆ ಅನುಕೂಲ ಮಾಡಿ ಕೊಡಬೇಕು. ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯವರು ತಮ್ಮ ಸಾವಿರಾರು ಬಸ್ಸುಗಳನ್ನು ಎಲ್ಲಾ ಕಡೆಗೂ ಬಿಟ್ಟಿದ್ದಾರೆ. ಅದರೆ ಕೆಲವು ಕಡೆ ರಸ್ತೆಗಳು ಚೆನ್ನಾಗಿಲ್ಲದೆ ಇರುವುದರಿಂದ ಟೂರಿಸ್ಟುಗಳಿಗೆ ಮತ್ತು ಪ್ರಯಾಣಿಕರಿಗೆ ಅಪಾಯ ಉಂಟಾಗಿ ಹೆಚ್ಚಿನ ನಷ್ಟ ಸಂಭವಿಸುತ್ತಿರುವ ಸಂದರ್ಭ ಸರ್ಕಾರಕ್ಕೂ ಗೊತ್ತಿದೆ. ರಸ್ತೆಗಳನ್ನು ಉತ್ತಮಪಡಿಸಿ ಅದರಿಂದ ಹೆಚ್ಚಿನ ಜನರಿಗೆ ಅನುಕೂಲವಾಗುವಂತೆ ಮಾಡುವುದು ಒಳ್ಳೆಯದು. ಅನೇಕ ಹಳ್ಳಿಗಳಲ್ಲಿ ಸೇತುವೆಗಳನ್ನು ಕಟ್ಟುವ ಬಗ್ಗೆ ಎಸ್ಟಿಮೇಟ್ ಮತ್ತು ಪ್ಲಾನ್‌ಗಳು ತಯಾರಾಗಿದ್ದರೂ ಸಹ ಇನ್ನೂ ಕೆಲಸಗಳು ಕಾರ್ಯಗತವಾಗಿಲ್ಲ. ಕೆಲವು ಸಲ ಟೆಂಡರ್ ಕರೆಯುವ ಸ್ಥಿತಿಗೆ ಬಂದು ಏನೋ ಕಾರಣಗಳಿಂದ ಕೆಲಸ ನಿಂತು ಹೋಗಿದೆ. ಇಂತಹ ಕೆಲಸಗಳನ್ನು ಬಿಟ್ಟು ಬೇರೆ ಕಡೆ ಹೊಸ ಕೆಲಸಗಳನ್ನು ತೆಗೆದುಕೊಂಡಿರತಕ್ಕಂಥ ಸಂದರ್ಭಗಳು ಎಷ್ಟೋ ಇವೆ. ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ, ಸೂಪರಿಂಟೆಂಡಿಂಗ್ ಇಂಜನಿಯರ್ ಹತ್ತಿರ, ಎಕ್ಸಿಕ್ಯುಟಿವ್ ಇಂಜನಿಯರ್ ಹತ್ತಿರ ಮತ್ತು ಅಸಿಸ್ಟೆಂಟ್ ಇಂಜನಿಯರ್ ಹತ್ತಿರ ಪ್ಲಾನ್ ಮತ್ತು ಎಸ್ಟಿಮೇಟ್ ತಯಾರಾಗಿ ಕೆಲಸವಾಗದೇ ನಿಂತಿರುವ ಎಲ್ಲಾ ರೆಕಾರ್ಡ್‌ಗಳನ್ನೂ ತರಿಸಿಕೊಂಡು ಬಹಳ ಕಾಲದಿಂದ ನಿಂತುಹೋಗಿರುವ ಕೆಲಸಗಳನ್ನು ಜಾಗ್ರತೆ ಮಾಡಿಸಿ ಅದರಿಂದ ಜನರಿಗೆ ಸೌಲಭ್ಯ ಸಿಗುವಂತೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಮಾನ್ಯ ಸರ್ಕಾರದವರು ಕಳೆದ 20 ವರ್ಷಗಳಿಂದೀಚೆಗೆ ಮೈಸೂರು ಸಂಸ್ಥಾನದಾದ್ಯಂತ ಹೆಚ್ಚಿನ ರಸ್ತೆಗಳನ್ನು ಮಾಡಿಸಿ ಜನರಿಗೆ ಸಂಚಾರ ಸೌಲಭ್ಯವನ್ನು ಒದಗಿಸಿ ಕೊಟ್ಟಿದ್ದಾರೆ, ಅದಕ್ಕಾಗಿ ಸರ್ಕಾರದವರನ್ನು ನಾನು ವಂದಿಸುತ್ತೇನೆ. ಇದೇ ರೀತಿ ಇನ್ನೂ ಉಳಿದಿರುವ ರಸ್ತೆಗಳನ್ನು ಸಹ ಜಾಗ್ರತೆ ಮಾಡಿಕೊಡಬೇಕಾದುದು ಸರ್ಕಾರದವರ ಕರ್ತವ್ಯ.

ಇನ್ನು ವಿದ್ಯುಚ್ಛಕ್ತಿ ದರವನ್ನು ಈಗಿರುವುದಕ್ಕಿಂತ ಕಡಿಮೆ ಮಾಡಿ ರೈತರಿಗೆ ಅನುಕೂಲ ಮಾಡಿ ಕೊಡಬೇಕು. ರೈತರು ಕಷ್ಟಪಟ್ಟು ಬೆಳೆಯುತಕ್ಕಂಥ ಆಹಾರಧಾನ್ಯವನ್ನು ಕೂಲಿಗಾರರಿಗೆ, ಕೈಗಾರಿಕೆಗಳಲ್ಲಿ ಕೆಲಸ ಮಾಡತಕ್ಕಂಥವರಿಗೆ ಒದಗಿಸಬೇಕಾಗಿರುವುದರಿಂದ ಸರ್ಕಾರದವರು ರೈತರ ಬಗ್ಗೆ ಕನಿಕರ ತೋರಿಸಿ ಈಗಿರತಕ್ಕಂಥ ದರವನ್ನು ಕಡಿಮೆ ಮಾಡಿ ತನ್ಮೂಲಕ ರೈತರು ಹೆಚ್ಚು ಹೆಚ್ಚು ಆಹಾರ ಧಾನ್ಯವನ್ನು ಬೆಳೆಯುವದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿ ಕೊಳ್ಳುತ್ತೇನೆ.

ಇನ್ನು ಮೈನರ್ ಇರಿಗೇಷನ್ ವಿಚಾರದಲ್ಲಿ ನಾನು ಈಗಾಗಲೇ ಹೇಳಿದ್ದೇನೆ. ನಮ್ಮ ಭಾಗದಲ್ಲಿ ತಾಲ್ಲೂಕ್ ಬೋರ್ಡಿನವರಿಗೆ ಕೊಟ್ಟಿರತಕ್ಕಂಥ 16 ಸಾವಿರ ಎಕರೆ ಜಮೀನನ್ನು ಸರ್ಕಾರದವರು ವಾಪಸ್ ಪಡೆದುಕೊಂಡು ವ್ಯವಸಾಯ ಮಾಡಿಸುವುದು ಒಳ್ಳೆಯದೆಂದು ಹೇಳುತ್ತೇನೆ. ಏಕೆಂದರೆ, ತಾಲ್ಲೂಕ್ ಬೋರ್ಡಿನವರು ವ್ಯವಸಾಯ ಮಾಡಿಸಲು ಬೇಕಾದಂಥ ಸವಲತ್ತುಗಳನ್ನು ಸರ್ಕಾರದವರು ಒದಗಿಸಿಲ್ಲ. ಈಗ ತಾಲ್ಲೂಕ್ ಬೋರ್ಡಿನವರಿಗೆ ಮಾಡಿಸಲು ನಮ್ಮಲ್ಲಿ ಹಣವಿಲ್ಲ, ಸರ್ಕಾರದವರು ಸಹ ಹಣ ಒದಗಿಸುತ್ತಿಲ್ಲವೆಂದು ಹೇಳುತ್ತಾರೆ, ತಾಲ್ಲೂಕ್ ಬೋರ್ಡಿನ ವಶದಲ್ಲಿರುವುದರಿಂದ ನಾವೇನು ಮಾಡುವುದಕ್ಕಾಗುವುದಿಲ್ಲವೆಂದು ಸರ್ಕಾರ

(ಶ್ರೀ ಸೋಲೂರು ಸಿದ್ದಪ್ಪ)

ಹೇಳುತ್ತಾರೆ. ಈ ಕಾರಣಗಳಿಂದ ಆ ಭಾಗದ ವ್ಯವಸಾಯದ ಪ್ರಗತಿ ಕುಂಠಿತವಾಗಿದೆ. ಸರ್ಕಾರದವರ ಹತ್ತಿರ ಸಿಬ್ಬಂದಿ ಹೆಚ್ಚು ಇದ್ದು, ಉನ್ನತ ಅಧಿಕಾರಿಗಳಿರುವುದರಿಂದ ಆ ಜಮೀನನ್ನು ಸರ್ಕಾರದವರೇ ವಹಿಸಿಕೊಂಡು ನಡೆಸುವುದು ಅತ್ಯಾವಶ್ಯಕವೆಂದು ಹೇಳುತ್ತೇನೆ.

ಇನ್ನು ನಮ್ಮ ಕಡೆ ಸಣ್ಣ ಸಣ್ಣ ಕೆರೆಗಳಲ್ಲಿ ಹೂಳು ತುಂಬಿ ಹೆಚ್ಚು ನೀರು ನಿಲ್ಲುವುದಕ್ಕೆ ಅವಕಾಶ ವಾಗಿಲ್ಲ. ಆದ್ದರಿಂದ ಸರ್ಕಾರದವರು ಬುಲ್‌ಡೋಜರ್ ಮೂಲಕ ಮಣ್ಣನ್ನು ತೆಗೆಸಿ ಹೆಚ್ಚು ನೀರು ನಿಲ್ಲುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ವಿದ್ಯುಚ್ಛಕ್ತಿ ಠೇವಣಿ ಬಗ್ಗೆ ಹೇಳಬೇಕಾದರೆ, ಮಾನ್ಯ ಮಂತ್ರಿಗಳು ಒಂದು ಕಡೆ ಮಾತನಾಡುತ್ತಾ ಯಾರಿಗೆ ವಿದ್ಯುಚ್ಛಕ್ತಿಯ ಹೆಚ್ಚಿನ ಸೌಲಭ್ಯ ಬೇಕೋ ಅಂಥವರು ಒಂದು ಸಾವಿರ ರೂಪಾಯಿಗಳನ್ನು ಠೇವಣಿ ಮಾಡಿದರೆ ವಿದ್ಯುಚ್ಛಕ್ತಿ ಒದಗಿಸುವುದಕ್ಕೆ ಅನುಕೂಲವಾಗುತ್ತದೆಂದು, ಈಗ ಸರ್ಕಾರಕ್ಕೆ ಹೆಚ್ಚು ಹಣ ಬೇಕಾಗಿದೆಯೆಂದು ಹೇಳಿದ್ದಾರೆ. ಆದರೆ ಇವತ್ತಿನ ದಿವಸ ರೈತರು ಠೇವಣಿ ಕೊಟ್ಟು ವಿದ್ಯುಚ್ಛಕ್ತಿ ಪಡೆದು ತನ್ಮೂಲಕ ವ್ಯವಸಾಯವನ್ನು ವೃದ್ಧಿ ಮಾಡಿಕೊಳ್ಳುವುದಕ್ಕೆ ತಯಾರಾಗಿಲ್ಲ. ರೈತರಲ್ಲಿ ಅಷ್ಟೊಂದು ಹಣವಿಲ್ಲದಿರುವುದರಿಂದ ಸರ್ಕಾರದವರು ರೈತರ ಬಗ್ಗೆ ಕನಿಕರ ತೋರಿಸಿ ಠೇವಣಿಯನ್ನು ರದ್ದುಮಾಡಬೇಕು. ಈಗಾಗಲೆ ಮಾನ್ಯ ಮುಖ್ಯಮಂತ್ರಿಗಳಾದ ನಿಜಲಿಂಗಪ್ಪ ನವರು ಮೂರು ರೂಪಾಯಿ ಬಡ್ಡಿಯಂತೆ 10 ಕೋಟಿ ರೂಪಾಯಿಗಳನ್ನು ಡೆವಲಪ್‌ಮೆಂಟ್ ಬ್ಯಾಂಕ್ ಮೂಲಕ ಕೊಟ್ಟು ಉಪಕಾರ ಮಾಡಿದ್ದಾರೆ, ಇದು ಸ್ತುತ್ಯಾರ್ಹವಾದುದು. ನಾನೂ ಸಹ ಬ್ಯಾಂಕ್‌ನ ಛೇರ್‌ಮನ್ ಆಗಿದ್ದೇನೆ. ರೈತರ ಕಷ್ಟಸುಖ ಗೊತ್ತಿದೆ. ನಮ್ಮ ಮಾಗಡಿ ತಾಲ್ಲೂಕಿಗೆ ಹತ್ತು ಲಕ್ಷ ರೂಪಾಯಿಗಳನ್ನು ಬಾವಿ ತೋಡಿಸಲು ಸರ್ಕಾರದವರು ಕೊಟ್ಟು, ವ್ಯವಸಾಯದಲ್ಲಿ ರೈತರು ಒಂದು ಉತ್ತಮ ಸ್ಥಿತಿಗೆ ಬರುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಆದಕಾರಣ ಬಾವಿಗಳಿಗೆ ಸರ್ಕಾರದವರೇ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡಬೇಕಾದುದು ಅಗತ್ಯವೆಂದು ಹೇಳುತ್ತೇನೆ.

ಇನ್ನು ಮೈಸೂರು ಸಂಸ್ಥಾನದಲ್ಲಿ ಎಲೆಕ್ಟ್ರಿಕಲ್ ಮತ್ತು ಸಿವಿಲ್ ಸೂಪರ್‌ವೈಸರ್‌ಗಳು ಸುಮಾರು 4 ಸಾವಿರ ಜನ 1963ರಿಂದ ಇಂದಿನವರೆಗೆ ಕೆಲಸವಿಲ್ಲದೆ, ಇವರಿಗೆ ಸರ್ಕಾರದಿಂದ ಕೆಲಸ ಸಿಗದೆ, ಅವರ ತಂದೆತಾಯಿಗಳಿಗೆ ತೊಂದರೆಯಾಗುತ್ತಿದೆ. ಇದು ಸರ್ಕಾರಕ್ಕೂ ಸಹ ಗೊತ್ತಿದೆ. ಆದ್ದರಿಂದ ಇವರಿಗೆ ಕೊನೆಯ ಪಕ್ಷ ಮೇಸ್ತ್ರಿ ಕೆಲಸವನ್ನಾದರೂ ಒದಗಿಸಿ ಆ ಮೂಲಕ ಅವರಿಗೆ ಒಂದು ಆಶಾಮನೋಭಾವ ಉಂಟಾಗುವಂತೆ ಮಾಡಿ ಅವರ ಕುಟುಂಬಗಳು ಮುಂದುವರಿಯುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದೇ ರೀತಿ ಜೂನಿಯರ್ ಇಂಜನಿಯರ್‌ಗಳು ತಮ್ಮ ಸಂಬಳ ಹೆಚ್ಚು ಮಾಡಬೇಕೆಂದು ಮೊನ್ನೆ ಹಠಾತ್ತಾಗಿ ರಾಜೀನಾಮೆ ಕೊಟ್ಟು ತಮ್ಮ ನಿರ್ಧಾರವನ್ನು ಮುಖ್ಯಮಂತ್ರಿಗಳಿಗೆ ತಿಳಿಸಿದಾಗ, ಮುಖ್ಯಮಂತ್ರಿಗಳು ಆ ಬಗ್ಗೆ ಒಂದು ಭರವಸೆ ಕೊಟ್ಟಮೇಲೆ ತಮ್ಮ ಹುದ್ದೆಗಳಲ್ಲಿ ಮುಂದುವರೆದಿದ್ದಾರೆ. ಆದರೆ ಇದುವರೆಗೆ ಆ ಭರವಸೆಯನ್ನು ಸರ್ಕಾರದವರು ಈಡೇರಿಸಿಲ್ಲ. ಸರ್ಕಾರದವರು ಕೊಟ್ಟ ಭರವಸೆಯನ್ನು ಜಾಗ್ರತೆ ಮಾನ್ಯ ಮಾಡಿ ತಾತ್ಕಾಲಿಕವಾಗಿಯಾದರೂ ಅವರ ಮನಸ್ಸಿಗೆ ತೃಪ್ತಿ ಮಾಡಿ, ಆ ಮೂಲಕ ಅವರಿಂದ ರೈತರಿಗೆ ಅನುಕೂಲವಾಗುವಂತೆ ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಮುಖ್ಯಮಂತ್ರಿಗಳು ಮತ್ತು ಸಂಬಂಧಪಟ್ಟ ಮಂತ್ರಿಗಳು ಕ್ಯಾಬಿನೆಟ್‌ನಲ್ಲಿ ಕುಳಿತು ಈ ಬಗ್ಗೆ ಚರ್ಚೆ ಮಾಡಿ, ಅವರು ಕೇಳಿರತಕ್ಕಂಥ ಬೇಡಿಕೆಗಳನ್ನು ಈಡೇರಿಸಿಕೊಡುವುದು ಸರ್ಕಾರದವರ ಕರ್ತವ್ಯವೆಂದು ಹೇಳುತ್ತೇನೆ. ಹಿಂದೆ ನಾನೂ ಕೂಡ ಬಹುಕಾಲದವರೆಗೆ ಪ್ರಜಾಪ್ರತಿನಿಧಿ ಸಭೆಯ ಸದಸ್ಯನಾಗಿದ್ದೆ. ಆಗಿನ ಕಾಲಕ್ಕೆ ಮೈಸೂರು ಸಂಸ್ಥಾನದ ಒಟ್ಟು ಬಡ್ಜೆಟ್ 4 ಕೋಟಿ ರೂಪಾಯಿಗಳಿತ್ತು. ಈಗ ವಿದ್ಯುಚ್ಛಕ್ತಿ, ನೀರಾವರಿ ಯೋಜನೆ ಮತ್ತು ರಸ್ತೆಗಳು ಇವುಗಳಿಗಾಗಿಯೇ 98 ಕೋಟಿ ರೂಪಾಯಿಗಳ ಡಿಮ್ಯಾಂಡ್‌ನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಇಂತಹ ಒಂದು ಸೌಲಭ್ಯವನ್ನು ಪಡೆದಿರತಕ್ಕಂಥ ನಮ್ಮ ಮೈಸೂರು ಸಂಸ್ಥಾನದ ಜನರೇ ಪುಣ್ಯವಂತರು. ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಉನ್ನತ ಮಟ್ಟದಲ್ಲಿ ಕೆಲಸ ಮಾಡುತ್ತಿರುವುದೇ ಇದಕ್ಕೆ ಕಾರಣವೆಂದು ಹೇಳಬಹುದು. ಈ ಇಲಾಖೆಗೆ ಸಂಬಂಧಪಟ್ಟಂತೆ ಇರುವ ಅನುಕೂಲಗಳನ್ನು ಯಾವ ಭಾಗದ ಜನರಿಗೆ ಒದಗಿಸಿಲ್ಲ, ಅಂತಹ ಭಾಗಗಳಲ್ಲಿ ಒದಗಿಸಿ ಕೊಡಬೇಕಾದುದು ಸರ್ಕಾರದ ಕರ್ತವ್ಯ.

ಇನ್ನು ಮೈನರ್ ಇರಿಗೇಷನ್‌ಗಳನ್ನು ನಮ್ಮ ತಾಲ್ಲೂಕ್‌ನಲ್ಲಿ ಇದುವರೆಗೆ ಬಾಕಿಯಿರುವುದನ್ನು ಸೇರಿಸಿಕೊಂಡು ಹೆಚ್ಚು ಹೆಚ್ಚು ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಒಂದು ಕಡೆ ಕಣ್ವಾ ನದಿ ಮತ್ತೊಂದು ಕಡೆ ತಿಪ್ಪಗೊಂಡನಹಳ್ಳಿ ಜಲಾಶಯ, ಇವೆರಡರ ಮಧ್ಯೆ ನಮ್ಮ ಮಾಗಡಿ

ತಾಲ್ಲೂಕ್ ಇದೆ. ನಮ್ಮ ತಾಲ್ಲೂಕ್‌ನಲ್ಲಿ ಸುಮಾರು 2 ಲಕ್ಷ ಜನಸಂಖ್ಯೆಯಿದೆ. ಮೊದಲು ಸುಮಾರು 7 ಸಾವಿರ ಎಕರೆ ಜಮೀನು ಇದ್ದರೆ, ಈಗ ಮತ್ತೆ 6 ಸಾವಿರ ಎಕರೆ ವ್ಯವಸಾಯದ ಜಮೀನು ಜಾಸ್ತಿಯಾಗಿದೆ. ಅಂದರೆ ನಮ್ಮ ಭಾಗದಲ್ಲಿ 13 ಸಾವಿರ ಎಕರೆ ತರೀ ಜಮೀನು ಇದ್ದರೆ ಕೇವಲ ಒಂದು ಸಾವಿರ ಎಕರೆ ಮಾತ್ರ ಖುಷ್ಕಿ ಜಮೀನು ಇದೆ. ಎಲ್ಲೆಲ್ಲಿ ನೀರಿನ ಸೌಲಭ್ಯವನ್ನು ಒದಗಿಸಿ ಕೊಡುವುದಕ್ಕೆ ಸಾಧ್ಯವಿದೆಯೋ ಅಲ್ಲೆಲ್ಲಾ ಒದಗಿಸಿಕೊಟ್ಟರೆ ತನ್ಮೂಲಕ ರೈತರು ಹೆಚ್ಚು ಆಹಾರವನ್ನು ಬೆಳೆದು ಮಿಲ್‌ಗಳಲ್ಲಿ, ಕೈಗಾರಿಕೆಗಳಲ್ಲಿ ಕೆಲಸ ಮಾಡತಕ್ಕಂಥ ಜನರಿಗೆ ಒದಗಿಸಿಕೊಡುವುದಕ್ಕೆ ಅನುಕೂಲವಾಗುತ್ತದೆ.

ಕೊನೆಯದಾಗಿ ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಪ್ರತಿಯೊಂದು ಕೆಲಸವನ್ನೂ ತೆಗೆದುಕೊಳ್ಳುವಾಗ ಅದರಿಂದ ನಮ್ಮ ಭಾಗಕ್ಕೂ ಲಾಭವಾಗುವಂತೆ ಕೆಲಸಗಳನ್ನು ಮಾಡಿಸಿ ಆ ಒಂದು ದಿಶೆಯಲ್ಲಿ ಕಾರ್ಯೋನ್ಮುಖರಾಗಬೇಕೆಂದು ಕೇಳಿಕೊಂಡು, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

4-00 P.M.

† ಶ್ರೀ ಹೆಚ್. ಬಿ. ಜ್ವಾಲನಯ್ಯ (ಹಾಸನ).—ಸನ್ಮಾನ್ಯ ಅಧ್ಯಕ್ಷರೆ, ಈಗ ಸಭೆಯ ಮುಂದೆ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಮಂಡಿಸಿರುವಂತಹ ಬೇಡಿಕೆಗಳನ್ನು ಈ ಕೆಳಕಂಡ ಕಾರಣಗಳಿಗಾಗಿ ವಿರೋಧಿಸುತ್ತೇನೆ.

ಈ ಇಲಾಖೆಯು ನಮ್ಮ ಸಂಸ್ಥಾನದ ಉತ್ಪತ್ತಿಯ ಬಹುಭಾಗವನ್ನು ಖರ್ಚು ಮಾಡುವಂತಹ ಇಲಾಖೆ. ಇದರಲ್ಲಿ ಅನೇಕ ಅಧಿಕಾರಿಗಳ ಪರಂಪರೆ ಇದ್ದು, ಖರ್ಚು ಮಾಡುತ್ತಿರುವ ರೀತಿ, ಇವುಗಳೆರಡರಲ್ಲಿ ಸಾಮರಸ್ಯವನ್ನು ಕಾಣುತ್ತಾ ಇಲ್ಲ. ಒಂದು ಮಾತು ಹೇಳುವುದಾದರೆ, ಈಗಿರುವಂತೆ ಒಂದು ಶಾಖೆಯ ಚೀಫ್ ಇಂಜಿನಿಯರಿಗೂ, ಇನ್ನೊಂದು ಇಲಾಖೆಯ ಚೀಫ್ ಇಂಜಿನಿಯರಿಗೂ ಇರುವಂತಹ ಕೋಆರ್ಡಿನೇಷನನ್ನು ಪುನರ್‌ವಿಮರ್ಶೆ ಮಾಡಬೇಕಾಗುತ್ತದೆ. ಇರಿಗೇಶನ್, ಬಿಲ್ಡಿಂಗ್ಸ್, ರೋಡ್ಸ್, ಎಲೆಕ್ಟ್ರಿಕಲ್ ಪ್ರಾಜೆಕ್ಟ್ಸ್ ಏನಿವೆ, ಅವುಗಳ ಬಗ್ಗೆ ಬೇರೆ ಬೇರೆ ಇಲಾಖೆಗಳನ್ನು ಮಾಡಿ ಒಂದಕ್ಕೊಂದು ಸರಿಯಾದ ಸಂಪರ್ಕ ಬರುವ ರೀತಿಯಲ್ಲಿ ಕೋಆರ್ಡಿನೇಶನ್ ಕಾಣುತ್ತಾ ಇಲ್ಲ. ಚೀಫ್ ಇಂಜಿನಿಯರ್ಸ್ ಬೋರ್ಡು ಎಂದು ಸರ್ಕಾರ ಮಾಡಿ, ಅದರಲ್ಲಿ ಸೀನಿಯರ್ ಚೀಫ್ ಇಂಜಿನಿಯರನ್ನು ಆ ಸಭೆಯ ಅಧ್ಯಕ್ಷರನ್ನಾಗಿ ಮಾಡಿದ್ದಾರೆಂದು ತಿಳಿದುಬಂದಿದೆ. ಆದರೂ ಒಬ್ಬರು ಚೀಫ್ ಇಂಜಿನಿಯರಿಗೆ, ಮತ್ತು ಇನ್ನೊಬ್ಬರಿಗೆ ಹೊಂದಿಕೆಯನ್ನು ತರುವ ಸಾಧ್ಯತೆ ಇಲ್ಲ. ಯುನೈಟೆಡ್ ಪ್ರಾವಿನ್ಸ್‌ನಲ್ಲಿ ಕೂಡ ಚೀಫ್ ಇಂಜಿನಿಯರ್ಸ್ ಇದ್ದಾರೆ. ಅಲ್ಲಿ ಅದರ ಅಧ್ಯಕ್ಷತೆಯನ್ನು ಚೀಫ್ ಇಂಜಿನಿಯರ್ ಜನರಲ್ ವಹಿಸುತ್ತಿದ್ದಾರೆ. ಅದನ್ನು ಇಲ್ಲಿಯೂ ಕೂಡ ಮಾಡಿದರೆ ಒಂದು ಕೋಆರ್ಡಿನೇಶನ್ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ನನ್ನ ಭಾವನೆ. ಇದಕ್ಕೂ ಹೆಚ್ಚಾಗಿ ಹೇಳುವುದಾದರೆ, ಇಂಜಿನಿಯರಿಂಗ್ ಇಲಾಖೆಯಲ್ಲಿರತಕ್ಕ ಕೆಲಸಕಾರ್ಯಗಳನ್ನು ಇತರ ಇಲಾಖೆಗಳೊಡನೆ ಒಂದು ಸಂಪರ್ಕವನ್ನು ಇಟ್ಟುಕೊಂಡು ಕೆಲಸ ಮಾಡಬೇಕಾಗುತ್ತದೆ. ಉದಾಹರಣೆಗೆ ವಿದ್ಯುಚ್ಛಕ್ತಿ ಇದನ್ನು ಕೈಗಾರಿಕೆಯ ಇಲಾಖೆಯ ಜೊತೆಯಲ್ಲಿ ಸೇರಿಸಬೇಕು. ನೀರಾವರಿಯನ್ನು ವ್ಯವಸಾಯದ ಜೊತೆಯಲ್ಲಿ ಸೇರಿಸಬೇಕು. ಆಗ ಸಮರ್ಥನೀಯವಾದ ರೀತಿಯಲ್ಲಿ ಕೆಲಸ ಮಾಡುವುದಕ್ಕಾಗುತ್ತದೆ, ಇಲ್ಲದಿದ್ದರೆ ಆಗುವುದಿಲ್ಲ. ಅದನ್ನು ಕೆಲವು ಅಂಕಿಅಂಶಗಳ ಆಧಾರದಿಂದ ಇಲ್ಲಿ ತೋರಿಸುತ್ತೇನೆ.

1967 ರಲ್ಲಿ ಆಡಿಟ್ ರಿಪೋರ್ಟಿನಲ್ಲಿ ಲೋಕೋಪಯೋಗಿ ಇಲಾಖೆಯವರು ಮಾಡಿರುವಂತಹ ಕೆಲಸಗಳ ಬಗ್ಗೆ ಯಾವರೀತಿ ಪ್ರತಿಫಲ ಬಂದಿದೆ. ನಾವು ಖರ್ಚು ಮಾಡಿರುವಂತಹ ಹಣ ಎಷ್ಟು ಎಂಬುದನ್ನು ನಮ್ಮ ಮುಂದೆ ಇಟ್ಟಿದ್ದಾರೆ. ತುಂಗಭದ್ರಾ ಲಿಫ್ಟ್ ಇರಿಗೇಶನ್ ಪೊಟೆನ್‌ಷಿಯಲ್ ಎಂದು ಹೇಳಿ ಆಡಿಟ್ ರಿಪೋರ್ಟಿನಲ್ಲಿ ಪುಟ 217ರಲ್ಲಿ, ಪರಿಶಿಷ್ಟ 10ರಲ್ಲಿ ಇದರ ವಿವರಗಳನ್ನು ಕೊಟ್ಟಿದ್ದಾರೆ. ಮೇಜರ್ ಇರಿಗೇಶನ್‌ಗೋಸ್ಕರ ಸುಮಾರು 7180.85 ಲಕ್ಷ ರೂಪಾಯಿ ಖರ್ಚಾಗಿದೆ. ಇದರಲ್ಲಿ ಮೇಜರ್ ಇರಿಗೇಷನ್‌ನಲ್ಲಿ ವ್ಯವಸಾಯಕ್ಕೆ ಬರುವಂತಹ ಎಷ್ಟು ಎಕರೆ ಜಮೀನು ಅಬಾದು ಆಗತಕ್ಕ ಗುರಿ 12 ಲಕ್ಷದ 15 ಸಾವಿರದ 8 ಎಕರೆಗಳು. ಅದರಿಂದ, ಇವರ ಯೋಜನೆಯಿಂದ ಆದಂತಹ ಪೊಟೆನ್‌ಷಿಯಲ್ ಎಷ್ಟು ಎಂದರೆ, 6,14,437 ಎಕರೆಗಳು. ಅಂದರೆ ಗುರಿ ಇಟ್ಟುಕೊಂಡ ಅರ್ಧಕ್ಕಿಂತಲೂ ಕಡಿಮೆಯಾಯಿತು. 1966ನೇ ಇಸವಿಯಲ್ಲಿ ಇವರು ನೀರನ್ನು ಉಪಯೋಗಿಸಿಕೊಂಡು ಅಬಾದು ಮಾಡಿಕೊಂಡದ್ದು

(ಶ್ರೀ ಹೆಚ್. ಬಿ. ಜ್ವಾಲನಯ್ಯ)

4,00,124 ಎಕರೆಗಳು. ಇದರಲ್ಲಿ ಯೋಜನೆಯ ಗುರಿ ಎಷ್ಟು, ಹಣ ಖರ್ಚು ಮಾಡುವಂಥದ್ದು ಎಷ್ಟು, ಎಷ್ಟು ಎಕರೆಗೆ ನೀರನ್ನು ಒದಗಿಸಿ ಆಬಾದು ಮಾಡಬಹುದು, ಎಷ್ಟು ಕಡಿಮೆ ಬಂದಿದೆ ಎಂಬುದನ್ನು ನಾವು ಸ್ವಲ್ಪ ಯೋಜನೆ ಮಾಡಬೇಕು. ನಾವು ಕೆಮಿಕಲ್ಸ್ ಕೊಡುತ್ತಿದ್ದೇವೆ, ಬಾವಿಗಳನ್ನು ಕೊಡುತ್ತಿದ್ದೇವೆ, ದೊಡ್ಡ ಅಣೆಕಟ್ಟುಗಳನ್ನು ಕೊಡುತ್ತಿದ್ದೇವೆ, ಎಂದು ಮಂತ್ರಿಗಳು ಹೇಳಿದ್ದಾರೆ. ಆದರೆ ಇದರ ಪರಿಣಾಮ ಏನಾಗಿದೆ ಎಂಬುದನ್ನು ಮಾನ್ಯ ಮಂತ್ರಿಯವರಲ್ಲಿ ಕೇಳುತ್ತೇನೆ.

ಅದೇ ರೀತಿಯ ಮೀಡಿಯಂ ಇರಿಗೇಷನ್ನಿಗೆ ಸುಮಾರು 13 ಕೋಟಿ 12 ಲಕ್ಷ 90 ಸಾವಿರ ರೂಪಾಯಿಗಳನ್ನು ಖರ್ಚುಮಾಡಿದರು. ಇದರಿಂದ 56-65ರ ವರೆಗೆ ಎಷ್ಟು ಗುರಿ ಮುಟ್ಟಿದ್ದಾರೆ ಎಂದರೆ, 90,171 ಎಕರೆ ಗುರಿ ಇಟ್ಟುಕೊಂಡರೆ, ಸಾಧನೆ ಮಾಡಿದ್ದು 80 ಸಾವಿರದ 35 ಎಕರೆಗೆ ಮಾತ್ರ. ಆದರೆ 65-66ನೇ ಇಸವಿಗೆ ಹೋದಾಗ ಆಬಾದು ಮಾಡಿರತಕ್ಕದ್ದು ಕೇವಲ 67 ಸಾವಿರದ 770 ಎಕರೆ ಮಾತ್ರ. ಇದಕ್ಕೆ ಸರ್ಕಾರದವರು ಕೊಟ್ಟಿರತಕ್ಕ ಉತ್ತರ ಏನೆಂದರೆ, ರೈತರು ಯಾರೂ ಅಲ್ಲಿ ಮಾತನಾಡುತ್ತಾ ಇಲ್ಲ, ಹೊಸ ತಾಂತ್ರಿಕ ವಿಧಾನಗಳನ್ನು ಉಪಯೋಗಿಸುತ್ತಾ ಇಲ್ಲ ಎಂದು ಎಲ್ಲಾ ಕುಂಟು ಕಾರಣಗಳನ್ನು ಕೊಡುತ್ತಿದ್ದಾರೆ. ನಾನು ಹೇಳುವುದಾದರೆ, ಈ ಯೋಜನೆಗಳನ್ನು ಮಾಡುವಂತಹ ಸಂದರ್ಭದಲ್ಲಿ ಯೋಜನೆಯನ್ನು ಪೂರ್ತಿಯಾಗಿ ಉಪಯೋಗಿಸಿ ಕೊಳ್ಳುವಂತಹ ವಿಧಾನವನ್ನು ಸರ್ಕಾರ ಯೋಚನೆ ಮಾಡಿಲ್ಲ. ಅಣೆಕಟ್ಟುಗಳನ್ನು ಕಟ್ಟಿದರೂ, ಕಾಲುವೆಗಳನ್ನು ಮಾಡಿದರೂ, ಜಮೀನು ಆಬಾದು ಆಗುವ ಪುನರ್ ವ್ಯವಸ್ಥೆ ಮಾಡಿಲ್ಲ. ಕಾರಣವೇನೆಂದರೆ, ಪಿ.ಡಬ್ಲ್ಯು.ಡಿ. ಇಲಾಖೆಗೂ ಅಗ್ರಿಕಲ್ಚರಲ್ ಇಲಾಖೆಗೂ ಒಂದಕ್ಕೊಂದಕ್ಕೆ ಹೊಂದಾಣಿಕೆ ಬರುತ್ತಾ ಇಲ್ಲ. ಇವರೆಲ್ಲಾ ಸೇರಿ ಒಂದು ರೀತಿ ನೀತಿಯಿಂದ ಮಾಡುತ್ತಿದ್ದರೆ, ನಿಜವಾಗಿಯೂ ಇವತ್ತಿನ ದಿವಸ ಅನ್ನದ ತೊಂದರೆ ಬರುತ್ತಾ ಇರಲಿಲ್ಲ. ಅದೇ ರೀತಿ ಅಗ್ರಿಕಲ್ಚರಿಗೆ ಇರಿಗೇಷನ್ ಸೇರಿದ್ದೇ ಆದರೆ, ಇನ್ನೂ ಚೆನ್ನಾಗಿ ಕೆಲಸ ಮಾಡುತ್ತಿದ್ದರು ಎಂಬುದು ಸ್ಪಷ್ಟವಾದ ಅಭಿಪ್ರಾಯ. ಯೋಜನೆಯಿಂದ ಬಂದಂತಹ ಪ್ರತಿಫಲ ನೋಡೋಣ. 67 ರ ಆಡಿಟ್ ರಿಪೋರ್ಟಿನಲ್ಲಿ ಪುಟ 20 ರಲ್ಲಿ ಇರಿಗೇಶನ್ ಕೆಲಸಗಳ ಹಣಕಾಸಿನ ವಿವರಗಳನ್ನು ಕೊಟ್ಟಿದ್ದಾರೆ.

		In lakhs.
		Rs.
Total capital outlay	...	91,71.28
Revenue	...	65·68
Working Expenses	...	90.34
Net deficit before charging interest	...	24.66
Interest on capital	...	402.80
Net deficit after charging interest	...	4,27.46

The total arrears in the collection of water rates in respect of these projects amounted to Rs. 1,23.42 lakhs as at the end of 1964-65 ಎಂದು ಇವೆ. ಇದನ್ನು ಯಾರೋ ಹೇಳಿದರು, ಎಂದು ಮಾಡುತ್ತಿದ್ದಾರೆಂದು ಕಾಣುತ್ತದೆ; ಮತ್ತು ರಾಜಕೀಯ ಒತ್ತಡಕ್ಕೆ ಮಾಡುತ್ತಾರೆ. ಆದರೆ ತಕ್ಕ ಪ್ರತಿಫಲ ಸಿಗುತ್ತಾ ಇಲ್ಲ. ಈ ರೀತಿಯಿಂದ ಮಾಡುತ್ತಾ ಹೋದರೆ, ನಮ್ಮ ರಾಜ್ಯವು ದಿವಾಳಿಯಾಗುವುದರಲ್ಲಿ ಸಂದೇಹವಿಲ್ಲ. ಅದೇ ರೀತಿ ದೊಡ್ಡದೊಡ್ಡ ಯೋಜನೆಗಳನ್ನು ಮಾಡಿಕೊಂಡಿದ್ದಾರೆ. ಒಂದು ಸಲಹೆ ಮಾಡುತ್ತೇನೆ. ಇವತ್ತು ಈ ಯಾವ್ಯಾವ ಕೆಲಸಗಳನ್ನು ತೆಗೆದುಕೊಂಡಿದ್ದಾರೆ, ಅದನ್ನು ಪುನರ್ವಿಮರ್ಶೆ ಮಾಡುವುದು ಅತ್ಯಾವಶ್ಯಕ. ಅವುಗಳನ್ನೆಲ್ಲಾ ಕಸಿ ಮಾಡುವುದು ಅವಶ್ಯಕ, ಮತ್ತು ತಕ್ಷಣ ಅದರ ಪ್ರಯೋಜನ ಒದಗುವ ರೀತಿಯಲ್ಲಿ ಮಾಡಿದರೆ, ಬಹಳ ಒಳ್ಳೆಯದು ಎಂದು ನನಗನಿಸುತ್ತದೆ.

ಈಗ ವಿದ್ಯುತ್‌ಶಕ್ತಿ ಇಲಾಖೆ. ಶರಾವತಿ ಯೋಜನೆಯಲ್ಲಿ ಮೊದಲಿನ ಎಸ್ಟಿಮೇಟು ಪ್ರಕಾರ ಒಂದು ಕಿಲೋ ವ್ಯಾಟ್ ಉತ್ಪಾದನೆ ಮಾಡುವುದಕ್ಕೆ 650 ರೂಪಾಯಿ ಸಾಕು ಎಂದು ಇತ್ತು.

ಆದರೆ ಇಂದು ಒಂದು ಕಿಲೋ ವ್ಯಾಟ್ ವಿದ್ಯುತ್ ಶಕ್ತಿ ಉತ್ಪಾದನೆಗೆ 1,700 ರೂಪಾಯಿ ಖರ್ಚು ಬಂದಿದೆ. ಈ ಯೋಜನೆಯಲ್ಲಿ ಸರಿಯಾಗಿ ಕೆಲಸ ಮಾಡಿದ್ದರೆ ಒಂದು ಕಿಲೋ ವ್ಯಾಟಿಗೆ 800 ರೂಪಾಯಿ ಖರ್ಚು ಬರುತ್ತಿತ್ತು. ಈ ರೀತಿ ಮಾಡಿದ್ದರೆ ಅತ್ಯಂತ ಕಡಮೆ ವೆಚ್ಚದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಲು ಅವಕಾಶವಾಗುತ್ತಿತ್ತು. ನಮ್ಮ ಅರ್ಥ ಸಚಿವರು ಹೇಳಿದ್ದಾರೆ ಹೊಂಬೆಳಕಿನ ಭವಿಷ್ಯ ಮುಂದೆ ಕಾಣುತ್ತೇವೆ ಎಂದು ಹೇಳಿದ್ದಾರೆ. ಇಂದು ವಿದ್ಯುತ್‌ಶಕ್ತಿ ಉತ್ಪಾದನೆ ಮಾಡಿ ಮಹಾರಾಷ್ಟ್ರ, ಮದ್ರಾಸ್, ಆಂಧ್ರ ರಾಜ್ಯಗಳಿಗೆ ಮಾರಾಟ ಮಾಡುತ್ತೇವೆ ಆದರೆ ಇವರು ಮುಂದೆ ಸಹ ವಿದ್ಯುತ್ ಶಕ್ತಿಗೆ ಗಿರಾಕಿಗಳಾಗುತ್ತಾರೆಯೋ ಎನ್ನುವುದನ್ನು ವಿಚಾರ ಮಾಡಬೇಕಾದುದು ಅಗತ್ಯ. ಯಾಕೆಂದರೆ ಅವರೂ ಸಹ ದೊಡ್ಡದೊಡ್ಡ ಯೋಜನೆಗಳನ್ನು ಮಾಡುತ್ತಿದ್ದಾರೆ. ಅವರ ಯೋಜನೆಗಳಿಂದ ವಿದ್ಯುತ್‌ಶಕ್ತಿ ಉತ್ಪಾದನೆಯಾಗುವುದು ಪ್ರಾರಂಭವಾದ ಕೂಡಲೇ ನಮ್ಮಿಂದ ಅವರು ತೆಗೆದುಕೊಳ್ಳುವುದಿಲ್ಲ. ಐದು ಐದೂವರೆ ಪೈಸೆಗೆ ಒಂದು ಯೂನಿಟ್ ಕೊಡುತ್ತಿರುವುದನ್ನು ಎರಡು ಪೈಸೆಗೆ ಕೊಡಿ ಎಂದು ಕೇಳುತ್ತಾರೆ. ಆಗ್ಗೆ ನಾವು ವಿಧಿಯಿಲ್ಲದೆ ಮಾರಾಟ ಮಾಡುವುದಕ್ಕೆ ಹೋಗುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಆದುದರಿಂದ ನಮ್ಮಲ್ಲಿ ಉತ್ಪಾದಿಸುವ ವಿದ್ಯುತ್ ಶಕ್ತಿಯನ್ನು ನಮ್ಮ ಬಳಕೆದಾರರು ಉಪಯೋಗಿಸುವ ಹಾಗೆ ನಮ್ಮ ಮನೆಗಳಲ್ಲಿ ಬಳಸುವುದಕ್ಕೆ ಅನುಕೂಲ ಮಾಡಿಕೊಡಬೇಕು. ಅದು ಹೇಗೆ ಅಂದರೆ ಪ್ರತಿಯೊಂದು ಮನೆಯಲ್ಲಿ ವಿದ್ಯುತ್‌ಶಕ್ತಿ ಉಪಯೋಗಿಸಬೇಕು. ಹೀಟಿಂಗ್ ಸರ್ಕಿಟ್ ಹಾಕಿಕೊಳ್ಳಬೇಕು. ಹೋಟಲುಗಳಲ್ಲಿ ಹೀಟಿಂಗ್ ಸರ್ಕೀಟ್ ಹಾಕುವುದು ಕಂಪಲ್ಸರಿ ಮಾಡಬೇಕು ಮನೆಗಳಲ್ಲಿ ಹೀಟಿಂಗ್ ಸರ್ಕೀಟಿಗೆ ಲೈಟಿಂಗಿಗೆ 26 ಪೈಸೆ ತೆಗೆದುಕೊಳ್ಳದೆ ಮದ್ರಾಸಕ್ಕೆ ಕೊಡುವ ರೇಟಿನಲ್ಲಿ, ಅಂದರೆ, ನಾಲ್ಕು ನಾಲ್ಕೂವರೆ ಪೈಸೆ ರೇಟಿನಲ್ಲಿ ಕೊಡಬೇಕು. ಹಾಗಾದರೆ ಭವ್ಯ ಭವಿಷ್ಯ ಮುಂದೆ ನಮಗೆಲ್ಲರಿಗೂ ಇರುತ್ತದೆ. ಶರಾವತಿಯಲ್ಲಿ ಇನ್ನೂ ಆರು ಜನರೇಟರ್ ಪ್ರಾರಂಭ ಮಾಡಬೇಕಾಗಿದೆ. ದೊಡ್ಡದೊಡ್ಡ ಕಾರ್ಖಾನೆಗಳಿಗೆ ಕೆಮಿಕಲ್ ಫ್ಯಾಕ್ಟರಿಗಳಿಗೆ ಅಲ್ಯೂಮಿನಿಯಂ ಫ್ಯಾಕ್ಟರಿಗೆ ಕಡಿಮೆ ದರದಲ್ಲಿ ವಿದ್ಯುತ್‌ಶಕ್ತಿ ಕೊಟ್ಟರೆ ಅನುಕೂಲವಾಗುತ್ತದೆ. ಮುಂದೆ ಎಂಥ ಸಂದರ್ಭ ಬರುತ್ತದೋ ಏನೋ ? ನ್ಯಾಷನಲ್ ಗ್ರಿಡ್ ಮಾಡಿ ಪಂಜಾಬಕ್ಕೂ ಕೂಡ ವಿದ್ಯುತ್‌ಶಕ್ತಿ ಕೊಡಬೇಕಾದ ಸಂದರ್ಭ ಬರಬಹುದು. ಆದುದರಿಂದ ಸರಕಾರದವರು ಇದನ್ನು ತೀವ್ರವಾಗಿ ಆಲೋಚನೆ ಮಾಡಬೇಕಾದುದು ಅಗತ್ಯ.

ಹಳೇ ಮೈಸೂರಿನಲ್ಲಿ ಇರತಕ್ಕಂಥ ಒಂದೇ ಒಂದು ಯೋಜನೆ ಅಂದರೆ, ಹೇಮಾವತಿ ಯೋಜನೆ. ಇಷ್ಟು ದುಡ್ಡು ಕೊಟ್ಟಿದ್ದೀರಿ. ಆದರೆ ಇದರಿಂದ ಅಸಮಾಧಾನವಾಗುವುದಿಲ್ಲ. ಈ ಯೋಜನೆಯ ಕಾರ್ಯವನ್ನು ತ್ವರಿತಗೊಳಿಸಿ ಕಡಿಮೆ ಅವಧಿಯಲ್ಲಿ ಪೂರ್ತಿ ಮಾಡಿ ಬೇಗನೆ ಇದರಿಂದ ಪ್ರತಿಫಲ ಬರುವಂತೆ ಮಾಡಬೇಕು. ತಿರುಪತಿ ಚೌರ ಮಾಡಿದ ಹಾಗೆ ಅಲ್ಲೊಂದಿಷ್ಟು ಇಲ್ಲೊಂದಿಷ್ಟು ಮಾಡಬೇಡಿ. ಈ ಯೋಜನೆಯು ಕೆಲಸ ಆದಷ್ಟು ಕಡಿಮೆ ಕಾಲದಲ್ಲಿ ಪೂರ್ತಿಯಾಗುವ ಹಾಗೆ ಮಾಡಬೇಕು ಎಂದು ಹೇಳುತ್ತೇನೆ.

ಪೋರ್ಟ್ಸ್ ವಿಷಯ, ಮೈನರ್ ಪೋರ್ಟ್ಸ್ ಮತ್ತು ಮೇಜರ್ ಪೋರ್ಟ್ಸ್ ಕೆಲಸ ಮಾಡಬೇಕಾಗಿದೆ. ಮಂಗಳೂರು ಮೇಜರ್ ಪೋರ್ಟ್ ಆಗುತ್ತದೆ ಎಂದು ಕಮಿಟಿ ರಿಪೋರ್ಟ್ ಇದೆ. ಪ್ರಪಂಚದಲ್ಲಿಯೇ ಅತ್ಯಂತ ಭಾರವಾದ ದೊಡ್ಡ ಹಡಗುಗಳು ಬಂದು ನಿಲ್ಲುವಂಥ ದೊಡ್ಡ ಪೋರ್ಟ್ ಆಗುತ್ತದೆ. ಯಾಕೆಂದರೆ, 48 ಅಡಿ ಆಳದ ವರೆಗೆ ಕಲ್ಲು ಸಿಕ್ಕಿಲ್ಲ. ಇದೊಂದು ಉತ್ತಮ ಪೋರ್ಟ್ ಆಗುತ್ತದೆ. ಆದರೆ ಈ ಮಂಗಳೂರು ಪೋರ್ಟಿನಲ್ಲಿ ಸಣ್ಣ ಹಡಗು ಬರುವಂತೆ ಮಾಡುವುದನ್ನು ಕೇಂದ್ರ ಸರಕಾರ ಮಾಡಿದೆ. ಈ ಪೋರ್ಟ್ ಸ್ಯಾಂಕ್ಷನ್ ಮಾಡಿದ್ದಾರೆ ಎಂದು ಸಮಾಧಾನ ಪಡಕೂಡದು. ಯಾಕೆಂದರೆ ಇಪ್ಪತ್ತು ವರ್ಷಗಳ ನಂತರ ಈ ಪೋರ್ಟ್ ಸ್ಕ್ರ್ಯಾಪ್ ಮಾಡಬೇಕಾಗುತ್ತದೆ. ಈಗಲೇ ಭಾರವಾದ ಹಡಗು ಬರುವಂತೆ ಮಾಡಬೇಕು ಇಲ್ಲದಿದ್ದರೆ ಮುಂದೆ ತೊಂದರೆಯಾಗುತ್ತದೆ. ಮಂಗಳೂರು ಬಂದರು ದೊಡ್ಡ ಬಂದರು ಆಗದಿದ್ದರೆ ಹೊಸಪೇಟೆಯಿಂದ ಕಬ್ಬಿಣದ ಅದುರು ಸಾಗಾಣಿಕೆಗೆ ಹಾಸನ ಮಂಗಳೂರು ರೈಲು ಬಂದರೂ ಅನುಕೂಲವಾಗದೆ ಅದನ್ನು ಮದ್ರಾಸಿಗೆ ತೆಗೆದುಕೊಂಡು ಹೋಗುತ್ತಾರೆ.

ಕೃಷ್ಣಾ ಕಾವೇರಿ ವ್ಯಾಲಿ ಯೋಜನೆಗೆ ದುಡ್ಡು ಇಲ್ಲ ಎಂದು ಹೇಳುತ್ತೀರಿ. ಈ ಎರಡು ನದಿಗಳ ಪ್ರತಿಯೊಂದು ಹನಿ ನೀರು ಉಪಯೋಗವಾಗುವುದಾದರೆ ಕೃಷ್ಣಾ ಮತ್ತು ಕಾವೇರಿ ಬೇಸಿನ್‌ನಲ್ಲಿ ಇರತಕ್ಕಂಥ ಜನತೆ ದುಡ್ಡು ಕೊಡುವುದಕ್ಕೆ ಸಿದ್ಧರಿರಬೇಕು. ಹಣ ಜನರಿಂದಲೂ ವಸೂಲು ಮಾಡಬೇಕಾಗುತದೆ. ಕೇಂದ್ರ ಸರಕಾರ ಅಮೇರಿಕಾದಿಂದ ಆಹಾರ ಧಾನ್ಯ ತರಿಸಲು ಪಿ.ಎಲ್. 480 ಸಾಲ ಅಮೇರಿಕಾದಿಂದ ಪಡೆಯುತ್ತಾರೆ. ಕೋಟ್ಯಾಂತರ ರೂಪಾಯಿ ಆಹಾರ ಕ್ಕೋಸ್ಕರ ಇತರ ದೇಶಗಳಿಗೆ ಕೊಡುತ್ತಿದ್ದಾರೆ. ನಾಳೆ ದಿನ ಚೆಸ್ಟರ್ ಬೋಲ್ಸ್ ಅವರು ಈ

(ಶ್ರೀ ಎಚ್. ಬಿ. ಜ್ವಾಲನಯ್ಯ)

ದೇಶಕ್ಕೆ ಬರತಕ್ಕವರು ಇದ್ದಾರೆ. ಈ ಯೋಜನೆಗಳು ಕಾರ್ಯರೂಪಕ್ಕೆ ತರಲು ಸಾಲದ ರೂಪದಲ್ಲಿ ಹಣ ಕೊಡಿ ಎಂದು ಅವರನ್ನು ಕೇಳಬಹುದು. ಇದಕ್ಕೆ ಕೇಂದ್ರ ಸರಕಾರ ಒಪ್ಪಬೇಕಾಗುತ್ತದೆ. ಇದರಿಂದ ಕೆಲಸ ಬೇಗ ಆಗುವುದಕ್ಕೆ ಸಾಧ್ಯವಾಗುತ್ತದೆ, ಹಾಗು ಹೆಚ್ಚು ಆಹಾರ ಧಾನ್ಯ ಉತ್ಪಾದನೆ ಮಾಡುವುದರಿಂದ ಅಮೇರಿಕವು ಕೂಡ ಸಂತೋಷಪಡುತ್ತವೆ. ಅವರು ಒಪ್ಪುತ್ತಾರೆ ಎಂದು ನನಗೆ ಸಂಪೂರ್ಣ ಭರವಸೆ ಇದೆ.

ಇನ್ನು ಪಿ.ಡಬ್ಲ್ಯೂ.ಡಿ. ಅಕೌಂಟ್ಸ್ ಯೂನಿಟ್. ಒಂದು ಡಿವಿಜನ್ನಿಗೆ ಒಂದು ಅಕೌಂಟ್ಸ್ ಯೂನಿಟ್ ಇದೆ. ಇದು ಮೊದಲು ಸ್ಟೇಟ್ ಅಕೌಂಟ್ಸ್ ಡಿಪಾರ್ಟ್‌ಮೆಂಟ್ ಕಂಟ್ರೋಲ್‌ನಲ್ಲಿ ಇತ್ತು. ಸರಕಾರದವರು ಅದನ್ನು ಈಗ ಎಂಜಿನಿಯರಿಂಗ್ ಇಲಾಖೆಗೆ ವರ್ಗಾಯಿಸಬೇಕೆಂದು ಮಾಡಿದ್ದಾರೆ. ಇದು ತಪ್ಪು. ಯಾಕೆಂದರೆ ಅಕೌಂಟ್ಸ್ ಡಿಪಾರ್ಟ್‌ಮೆಂಟ್ ಯಾವಾಗಲೂ ಯಾವ ಒತ್ತಡಕ್ಕೂ ಸಿಕ್ಕದೇ ಇರಬೇಕು. ಅಂದರೆ ಲೆಕ್ಕ ಸರಿಯಾಗಿ ಇಡುವುದಕ್ಕೆ ಅನುಕೂಲವಾಗುತ್ತದೆ. ಅದಕ್ಕಾಗಿ ಅದನ್ನು ಬೈಫರ್‌ಕೇಟ್ ಮಾಡಿ ಇಟ್ಟಿದ್ದಾರೆ. ಇದನ್ನು ಬದಲು ಮಾಡುತ್ತೇವೆ ಎಂದು ಹೇಳುವ ಸಂದರ್ಭದಲ್ಲಿ ನೀವೇ ಲೆಕ್ಕ ಇಡುವುದು ನೀವೇ ಚೆಕ್ ಮಾಡುವುದು ಸಾಧು ಅಲ್ಲ. ಪಬ್ಲಿಕ್‌ಅಕೌಂಟ್ಸ್ ಕಮಿಟಿ ವರದಿಯಲ್ಲಿ ಈ ಬಗ್ಗೆ ಹೇಳಿದ್ದಾರೆ. ಈ ರೀತಿ ಮಾಡಿದರೆ ಇದರಿಂದ ಬಹಳ ತೊಂದರೆಯಾಗುತ್ತದೆ ಮತ್ತು ಲೆಕ್ಕದಲ್ಲಿ ಅವ್ಯವಸ್ಥೆಯಾಗುತ್ತದೆ ಎಂದು ಹೇಳುತ್ತೇನೆ.

ಇನ್ನೂ ಹೇಳಬೇಕಾದ ವಿಷಯ ಬೇಕಾದಷ್ಟು ಇದೆ. ಆದರೆ ಮಾತನಾಡಲು ನನಗೆ ಕಾಲಾವಕಾಶವಿಲ್ಲ. ಆದುದರಿಂದ ಕೊನೆಯದಾಗಿ ಒಂದೇ ಒಂದು ಮಾತು ಹೇಳಿ ನನ್ನ ಭಾಷಣ ಮುಗಿಸುತ್ತೇನೆ. ಅದೇನೆಂದರೆ ಹೇಮಾವತಿ ಯೋಜನೆ. ಈ ಹೇಮಾವತಿ ಯೋಜನೆಗೆ ಕೊಟ್ಟಿರತಕ್ಕಂಥ ಹಣ ಏನೇನೂ ಸಾಲದು. ಹೆಚ್ಚಿನ ರೀತಿಯಲ್ಲಿ ಇದಕ್ಕೆ ಹಣ ಒದಗಿಸಿ ಈ ಯೋಜನೆ ಬೇಗ ಮಾಗಿಯಬೇಕು ಮತ್ತು ಅದರ ಪ್ರತಿಫಲ ಜನರಿಗೆ ದೊರೆಯುವಂತೆ ಮಾಡಬೇಕು ಎಂದು ಹೇಳಿ, ನಾನು ಇದುವರೆಗೆ ಹೇಳಿದ ಕಾರಣಕ್ಕಾಗಿ ಈ ಬೇಡಿಕೆಯನ್ನು ಒಪ್ಪುವುದಕ್ಕಾಗುವುದಿಲ್ಲ ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

†ಶ್ರೀ ಡಿ. ಎಸ್. ಗೌಡ (ದೇವನಹಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಮಂಡಿಸಿದ ಬೇಡಿಕೆಯನ್ನು ಸ್ವಾಗತಿಸುತ್ತಾ ಎರಡು ವಿಚಾರ ಹೇಳಲು ಬಯಸುತ್ತೇನೆ.

ಇಂದು ನಮ್ಮ ದೇಶ ಇಷ್ಟು ಪ್ರಗತಿಗೆ ಬರಬೇಕಾದರೆ ಲೋಕೋಪಯೋಗಿ ಇಲಾಖೆಯ ಪಾತ್ರ ಬಹು ಮುಖ್ಯವಾಗಿದೆ ಈ ಇಲಾಖೆಯಲ್ಲಿ ನೀರಾವರಿ ಯೋಜನೆ, ರಸ್ತೆಗಳ ರಚನೆ, ವಿದ್ಯುತ್ ಶಕ್ತಿ ಉತ್ಪಾದನೆ ಈ ಕೆಲಸ ಕಾರ್ಯಗಳು ನಡೆದು ಈ ಕ್ಷೇತ್ರಗಳಲ್ಲಿ ಸಾಧಿಸಿತಕ್ಕಂಥ ಪ್ರಗತಿ ಬಹಳ ಸಮಾಧಾನಕರವಾಗಿದೆ. ದೇಶದ ಪ್ರಗತಿಗೆ ಅತ್ಯಾವಶ್ಯಕವಾಗಿ ಮಾಡಬೇಕಾದ ಕೆಲಸಗಳು ಜನೋಪಯೋಗಿ ಕೆಲಸಗಳು ಇನ್ನೂ ಹೆಚ್ಚಾಗಿ ನಡೆಯಬೇಕಾಗಿವೆ. ಈ ಸಂದರ್ಭದಲ್ಲಿ ಬಹು ಮುಖ್ಯವಾದ ಈ ಇಲಾಖೆಗೆ ಸಂಬಂಧಪಟ್ಟ ಹಾಗೂ ನಮ್ಮ ಮೈಸೂರು ರಾಜ್ಯಕ್ಕೆ ಇರತಕ್ಕಂಥ ದೊಡ್ಡ ವಿಷಯ ಅಂದರೆ, ಕೃಷ್ಣಾ ಕಾವೇರಿ ನದಿಗಳ ನೀರು ಉಪಯೋಗಿಸುವ ವಿಷಯ.

ಕೃಷ್ಣಾ, ಗೋದಾವರಿ ನೀರಿನ ವಿಷಯದಲ್ಲಿ ಸ್ವಾಭಾವಿಕವಾಗಿ ಮೈಸೂರು ಸಂಸ್ಥಾನಕ್ಕೆ ಇರತಕ್ಕ ಹಕ್ಕು, ನಮ್ಮ ಪಾಲು ದೊರಕಬೇಕಾಗಿದೆ ನಮ್ಮ ಆ ಪಾಲು ಸ್ವಾಭಾವಿಕವಾದುದು. ಈ ವಿಷಯದಲ್ಲಿ ಕೇಂದ್ರ ಸರ್ಕಾರ ಇನ್ನೂ ಹೆಚ್ಚಿನ ವಿಶಾಲ ರೀತಿಯ ಮನೋಭಾವನೆಯನ್ನು ಅನುಸರಿಸಬೇಕಾಗಿದೆ. ಈಗ ನೋಡುವುದಾದರೆ, ಕೆಲವು ವಿಷಯಗಳಲ್ಲಿ ಕೇಂದ್ರ ಸರ್ಕಾರ ಕೆಲವು ಸಂಸ್ಥಾನಗಳ ವಿಷಯದಲ್ಲಿ ಮಲತಾಯಿ ಧೋರಣೆಯನ್ನು ಅನುಸರಿಸುತ್ತಿದೆ ಎನುವ ಭಾವನೆ ಕೆಲವು ಕಡೆ ಉಂಟಾಗತಕ್ಕ ಸಂದರ್ಭ ಒದಗಿಬಂದಿದೆ. ಕೇಂದ್ರ ಸರ್ಕಾರ ಕೃಷ್ಣ, ಗೋದಾವರಿ ನೀರಿನ ವಿಷಯದಲ್ಲಿ ಆಂಧ್ರಕ್ಕೆ ಏನೊಂದು ಸೌಲಭ್ಯವನ್ನು ಒದಗಿಸಿಕೊಟ್ಟಿದೆಯೋ ಅದೇ ಸೌಲಭ್ಯವನ್ನು ನಮಗೆ ಸ್ವಾಭಾವಿಕವಾಗಿ ಇರತಕ್ಕ ಹಕ್ಕಿನ ವಿಷಯದಲ್ಲಿ ಒದಗಿಸುವುದರಲ್ಲಿ ಬಹುಶಃ ವಿಫಲವಾಗಿದೆ ಎಂದರೆ ತಪ್ಪಾಗಲಾರದು. ಈ ವಿಷಯದಲ್ಲಿ ನಾನು ಮೊದಲೇ ಹೇಳಿದಂತೆ ಕೇಂದ್ರ ಸರ್ಕಾರದವರು ಇನ್ನೂ ಹೆಚ್ಚಿನ ವಾಸ್ತವ ರೀತಿಯಲ್ಲಿ ರಾಷ್ಟ್ರದ ಹಿತದೃಷ್ಟಿಯಿಂದ ಎಲ್ಲೆಲ್ಲಿ ನೀರಾವರಿ ಪ್ರದೇಶಗಳಿಂದ ಇಡೀ ದೇಶದ ಪ್ರಗತಿಗೆ ಅನುಕೂಲವಾಗುತ್ತದೆ ಎನ್ನುವ ವಿಶಾಲ ದೃಷ್ಟಿಯನ್ನಿಟ್ಟುಕೊಂಡು ಕೃಷ್ಣ ಮತ್ತು ಗೋದಾವರಿ ನೀರಿನ ಹಂಚಿಕೆ ವಿಷಯವನ್ನು ಪರಿಹರಿಸಬೇಕಾಗಿದೆ. ಈ ವಿಷಯದಲ್ಲಿ ಇಂದು ಸರ್ಕಾರ ಏನೊಂದು ನೀತಿಯನ್ನು ಅನುಸರಿಸುತ್ತಿದೆ ಆ ನೀತಿಗೆ ನಾವು ಮತ್ತು ಇಡೀ ಸಭೆ ಇನ್ನೂ

ಹೆಚ್ಚಿನ ಬೆಂಬಲವನ್ನು ಕೊಟ್ಟು, ಕಡೆಗೂ ಮಾತುಕಥೆಯ ಮುಖಾಂತರ ಕೇಂದ್ರ ಸರ್ಕಾರದವರು ನಮ್ಮ ನ್ಯಾಯಬದ್ಧವಾದ ಮಾತಿಗೆ ಒಗೊಡದೆ ಹೋದರೆ ಉಳಿದಿರುವ ಏಕೈಕ ಮಾರ್ಗವಾದ ನಮ್ಮ ರಾಷ್ಟ್ರದ ಶ್ರೇಷ್ಠ ನ್ಯಾಯಾಲಯವೇನಿದೆಯೋ, ಸುಪ್ರೀಂ ಕೋರ್ಟ್, ಅದಕ್ಕೆ ಹೋಗಿಯಾದರೂ ಸರಿ, ನದಿ ನೀರಿನ ಹಂಚಿಕೆ ವಿಷಯದಲ್ಲಿ ನಮಗೆ ಇರತಕ್ಕ ಸ್ವಾಭಾವಿಕ ಹಕ್ಕಿನ ಲಾಭ ಮತ್ತು ಹಕ್ಕನ್ನು ನಾವು ಪಡೆಯಬೇಕು. ಈ ವಿಷಯದಲ್ಲಿ ಸರ್ಕಾರ ಯೋಚನೆ ಮಾಡುತ್ತಿದ್ದರೆ ಬಹಳ ಸಂತೋಷ. ಇಲ್ಲದೆ ಇದ್ದರೆ ಈ ತರಹ ಸರ್ಕಾರ ಮಾಡಬೇಕೆಂದೂ, ಇದಕ್ಕೆ ಇಡೀ ಸಭೆ ಹೆಚ್ಚಿನ ಬೆಂಬಲವನ್ನು ಸರ್ಕಾರಕ್ಕೆ ಕೊಟ್ಟು ಸರ್ಕಾರ ಆ ವಿಷಯದಲ್ಲಿ ಮುಂದುವರಿಯುವಂತೆ ಮಾಡಬೇಕೆಂದೂ ನಾನು ಸಲಹೆ ಮಾಡ ಬಯಸುತ್ತೇನೆ.

ಕಾವೇರಿ ನದಿ ನೀರಿನ ವಿಷಯದಲ್ಲಿ ಹೇಳತಕ್ಕ ಮಾತು ಒಂದು ಇದೆ. 1892 ಮತ್ತು 1924, ಈ ಅವಧಿಯಲ್ಲಿ ಕಾವೇರಿ ನದಿ ನೀರಿನ ವಿಷಯದಲ್ಲಿ ಮೈಸೂರು ಮತ್ತು ಮದ್ರಾಸು ಸರ್ಕಾರಗಳಿಗೆ ಎರಡು ಒಪ್ಪಂದಗಳಾಗಿವೆ. ಈ ಒಪ್ಪಂದದ ಪ್ರಕಾರ ನೀರು ಮೈಸೂರಿಗೆ ಯಾವ ರೀತಿಯಲ್ಲಿ ಉಪಯೋಗವಾಗಬೇಕು, ಮದ್ರಾಸಿಗೆ ಯಾವ ರೀತಿಯಲ್ಲಿ ಉಪಯೋಗವಾಗಬೇಕು ಎನ್ನುವ ಕೆಲವು ಅಂಶಗಳು ಅದರಲ್ಲಿ ಒಳಪಟ್ಟಿವೆ. ಅದರ ಬಗ್ಗೆ ನಾನು ಈಗ ವಿಶದವಾಗಿ ಹೇಳಲು ಹೋಗುವುದಿಲ್ಲ. ಮೈಸೂರಿನಲ್ಲಿರುವ ಕೃಷ್ಣರಾಜ ಸಾಗರದಲ್ಲಿ ಮದ್ರಾಸ್ ಸರ್ಕಾರದ ಒಬ್ಬ ಪ್ರತಿನಿಧಿ ಇದ್ದು, ಅಲ್ಲಿರತಕ್ಕ ನೀರಿನ ಪರಿಸ್ಥಿತಿ, ಅಲ್ಲಿ ಆಗತಕ್ಕ ಬೆಳವಣಿಗೆಗಳು, ಮತ್ತೊಂದು ಮಗದೊಂದು, ಎಲ್ಲವನ್ನೂ ಅಂಕಿಅಂಶಗಳ ಮೂಲಕ ಮದ್ರಾಸ್ ಸರ್ಕಾರಕ್ಕೆ ತಿಳಿಸತಕ್ಕ ವ್ಯವಸ್ಥೆ ಇದೆ. ಅದೇ ರೀತಿಯಲ್ಲಿ ಮದ್ರಾಸಿನಲ್ಲಿ ಇರುವ ಮೆಟ್ಟೂರು ಡ್ಯಾಂನಲ್ಲಿ ಅವರು ಮಾಡತಕ್ಕ ಕೆಲವು ಕಾರ್ಯಕ್ರಮಗಳನ್ನು ಅನುಸರಿಸಿಕೊಂಡು ಅಂಕಿ ಅಂಶಗಳನ್ನು ನಾವು ತರಿಸಿಕೊಂಡು, ಈ ನದಿಯ ನೀರನ್ನು ನಾವು ಯಾವ ರೀತಿಯಲ್ಲಿ ಉಪಯೋಗಿಸಿಕೊಂಡು ತನ್ಮೂಲಕ ಹೆಚ್ಚು ಉಪಯೋಗ ಪಡೆಯಬಹುದು ಎನ್ನತಕ್ಕ ವಿಷಯಕ್ಕೆ ಅನುಕೂಲವಾಗುವಂತೆ ಒಬ್ಬ ತಜ್ಞ ಅಧಿಕಾರಿಯನ್ನು: ಪ್ರತಿನಿಧಿಯನ್ನು ಅಲ್ಲಿ ಇಡುವುದಕ್ಕೆ ನಮಗೆ ಅವಕಾಶವಿಲ್ಲದಿರುವುದು ಈ ಒಪ್ಪಂದದ ನ್ಯೂನತೆ ಎಂದು ನನಗೆ ಕಂಡುಬರುತ್ತದೆ.

ಕಾವೇರಿ ನದಿ ನೀರು ಹರಿದು ಹೋಗುತ್ತದೆ. ಹರಿದು ಹೋಗತಕ್ಕ ನೀರನ್ನು, ಒಪ್ಪಂದದ ಒಳಗೆ ಅಥವಾ ಒಪ್ಪಂದವನ್ನು ಮೀರಿ ಮದ್ರಾಸ್ ಸರ್ಕಾರದವರು, ಕಟ್ಟಾಲ, ಪುಳ್ಳಂಪಾಡಿ ಮತ್ತು ಭವಾನಿ ರಿಸರ್ವಾಯರುಗಳನ್ನು ಕಟ್ಟಿ ಈಗಾಗಲೇ ಮುಗಿಸಿದ್ದಾರೆ. ಆದರೆ ನಮ್ಮಲ್ಲಿರುವ ಹೆಚ್ಚಿನ ನೀರನ್ನು ಉಪಯೋಗಿಸಿಕೊಂಡು ಕೆಲವು ಪ್ರಾಜೆಕ್ಟ್‌ಗಳನ್ನು, ನೀರಾವರಿ ಅಣೆಕಟ್ಟುಗಳನ್ನು, ಹಾರಂಗಿ, ಹೇಮಾವತಿ, ಇವುಗಳನ್ನು ಕಟ್ಟುವುದಕ್ಕೆ ಹೋಗಿರುವ ಸಂದರ್ಭದಲ್ಲಿ ಮದ್ರಾಸ್ ಸರ್ಕಾರದ ಆಕ್ಷೇಪಣೆ ಅಥವಾ ಕೇಂದ್ರ ಸರ್ಕಾರದ ಅನುಮತಿಗೆ ಮದ್ರಾಸ್ ಸರ್ಕಾರದವರು ಒಪ್ಪಿಗೆಯನ್ನು ಕೊಟ್ಟಿಲ್ಲ ಎನ್ನುವ ಧೋರಣೆ ಏನಿದೆ, ಈ ಧೋರಣೆ ಬದಲಾಗಬೇಕಾಗಿದೆ. ಇದು ದೇಶದ ಮಾತು. ಮದ್ರಾಸ್ ಸರ್ಕಾರದ ಅಥವಾ ಮೈಸೂರು ಸರ್ಕಾರದ ಪ್ರಶ್ನೆಯಲ್ಲ. ಇಡೀ ದೇಶದಲ್ಲಿ ಇವೊತ್ತು ಅಭಾವ ಪರಿಸ್ಥಿತಿ ಇವೆ ಎಲ್ಲೆಲ್ಲಿ ಹೆಚ್ಚಿನ ಅಣೆಕಟ್ಟೆಗಳನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತದೆ ಅಲ್ಲೆಲ್ಲ ಅಣೆಕಟ್ಟೆಗಳನ್ನು ಕಟ್ಟುವುದಕ್ಕೆ ಅವಕಾಶ ಮಾಡಿಕೊಡಬೇಕು. ನಮ್ಮ ರಾಜ್ಯದಲ್ಲಿ ಸ್ವಾಭಾವಿಕವಾಗಿ ಹುಟ್ಟತಕ್ಕ ನದಿಗಳು ಮೈಸೂರಿನಿಂದ ಹೊರಗಡೆ ಪ್ರದೇಶಕ್ಕೆ ಹೆಚ್ಚಾಗಿ ಹರಿದು ಹೋಗುತ್ತಿವೆ. ಇದರ ಬಗ್ಗೆ ತಜ್ಞರು ಮತ್ತು ಸರ್ಕಾರದವರು ಪರಿಶೀಲನೆ ಮಾಡಿ ಹೆಚ್ಚಿನ ರೀತಿಯಲ್ಲಿ ನಮ್ಮ ಮೈಸೂರು ರಾಜ್ಯಕ್ಕೆ ಅನುಕೂಲವಾಗುವಂತೆ ಮಾಡಿಕೊಳ್ಳಬೇಕಾಗಿದೆ. ಈ ದಿಸೆಯಲ್ಲಿ ಸರ್ಕಾರದವರು ಸೂಕ್ತವಾದ ಕ್ರಮಗಳನ್ನು ಕೈಕೊಂಡು ನಮಗೆ ಅನುಕೂಲವಾಗುವಂತೆ ಮಾಡಬೇಕೆಂದು ನಾನು ಸರ್ಕಾರದಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಇತ್ತೀಚಿನ ಕೆಲವಾರು ಅಂಕಿಅಂಶಗಳ ಮುಖಾಂತರ ಕಾವೇರಿ ಬೇಸಿನ್ ಬೆಲ್ಟ್ ಏನಿದೆ ಇದರಲ್ಲಿರುವ ನಮ್ಮ ಭಾಗದ ನೀರನ್ನು ಉಪಯೋಗಿಸಿಕೊಂಡರೆ ಎಂಟು ಹತ್ತು ಲಕ್ಷ ಎಕರೆಗಳಲ್ಲಿ ನೀರಾವರಿ ಮಾಡಲು ಸಾಧ್ಯವಾಗುತ್ತದೆ. ಇಂಥ ಹೆಚ್ಚಿನ ಉಪಯೋಗಗಳು ನಮಗೆ ಇರುವುದರಿಂದ ಅದನ್ನು ಯಾವ ರೀತಿ ಅಳವಡಿಸಿಕೊಳ್ಳಬೇಕು ಎನ್ನುವ ಯೋಚನೆಯನ್ನು ಸರ್ಕಾರ ಏನು ಇಟ್ಟುಕೊಂಡಿದೆ ಅದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ, ದೃಢ ನೀತಿಯಿಂದ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡದೆ ಹೋದರೆ ನಮ್ಮ ಕಾರ್ಯಕ್ರಮಗಳನ್ನು ಮುಂದೊಡ್ಡಿ ನಾವು ಉಳಿಯಬೇಕಾಗುತ್ತದೆ ಎಂದು ಹೇಳಬಯಸುತ್ತೇನೆ.

ಮೈಸೂರಿನಲ್ಲಿ ಕೆಲವು ಭಾಗಗಳಲ್ಲಿ ಹರಿಯತಕ್ಕ ಕೆಲವು ನದಿಗಳನ್ನು ಬಿಟ್ಟರೆ ಬಹು ಭಾಗದ ಪ್ರದೇಶಗಳು ಬಯಲು ಪ್ರದೇಶಗಳು. ಈ ಭಾಗಗಳಲ್ಲಿ ಸರ್ಕಾರ ಸಣ್ಣ ನೀರಾವರಿ ಯೋಜನೆಗಳನ್ನು ಕೈಗೊಳ್ಳಬೇಕಾಗಿದೆ. ಈ ದಿಸೆಯಲ್ಲಿ ನೀರಾವರಿ ಬೋರ್ಡ್ ಮಾಡಲು ಸರ್ಕಾರ ಏನು ಯೋಚಿಸಿದೆ ಅದು ನಿಜವಾಗಿಯೂ ಸ್ವಾಗತಾರ್ಹ. ನೂರಾರು ವರ್ಷಗಳ ಹಿಂದೆ ಕಟ್ಟಿರುವ ಅಥವಾ

(ಶ್ರೀ ಡಿ. ಎಸ್. ಗೌಡ)

ಸ್ವಾತಂತ್ರ್ಯ ಪೂರ್ವ ಕಟ್ಟಿರುವ ಕೆರೆಗಳು ಅನೇಕವಿವೆ. ಈ ಕೆರೆಗಳನ್ನು ಕಟ್ಟಿದ ದಿನ ಏನು ಕೆಲಸ ವನ್ನು ಮಾಡಿತ್ತು ಅದನ್ನು ಬಿಟ್ಟರೆ, ಅಂದಿನಿಂದ ಕೆರೆ ಕಟ್ಟೆ, ಕೋಡಿಗಳ ದುರಸ್ತು ಬಿಟ್ಟರೆ ಮತ್ತೆ ಏನೂ ಕೆಲಸ ಮಾಡಿಲ್ಲ. ಈಗ ಕೆರೆಗಳಲ್ಲಿ ನೀರು ನಿಲ್ಲತಕ್ಕ ಪ್ರಮಾಣ ಕಡಿಮೆಯಾಗಿದೆ. ಈ ಸಂಬಂಧದಲ್ಲಿ ಇಲಾಖೆಯ ತಜ್ಞರು ಮತ್ತು ಅಧಿಕಾರಿಗಳು ಕೆರೆಗಳಲ್ಲಿರುವ ಹೂಳು ತೆಗೆಸಿ ಅಥವಾ ಹೆಚ್ಚು ನೀರು ನಿಲ್ಲಬೇಕಾದರೆ ಏನು ಕ್ರಮ ಕೈಕೊಳ್ಳಬೇಕು ಅದಕ್ಕೆ ಒಂದು ಯೋಜನೆಯನ್ನು ಮಾಡಿ ಬುಲ್ ಡೋಜರ್ ಮುಖಾಂತರ ಅಥವಾ ಬೇರೆ ರೀತಿಯಿಂದ ಹೂಳನ್ನು ತೆಗೆಯುವುದರಿಂದ ಅನುಕೂಲವಾಗುತ್ತದೆಯೋ ಎನ್ನುವುದನ್ನು ಪರಿಶೀಲಿಸಬೇಕು ಎಂದು ಹೇಳುತ್ತೇನೆ.

ಅದಕ್ಕಿಂತ ಮಿಗಿಲಾದ ಒಂದು ವಿಷಯವೆಂದರೆ, ಬಯಲು ಪ್ರದೇಶದಲ್ಲಿ ಹೆಚ್ಚಿನ ಮಳೆಯ ಅಭಾವವಿದೆ. ಅಲ್ಲಿ ನದಿಗಳಂತೂ ಇಲ್ಲ. ಅಂಥ ಪ್ರದೇಶಗಳಲ್ಲಿ, ಅಚ್ಚುಕಟ್ಟು ಪ್ರದೇಶಗಳಲ್ಲಿ ಹೊಸ ಕೆರೆಗಳನ್ನು ಕಟ್ಟುವ ವಿಷಯವನ್ನು ಪರಿಶೀಲಿಸಬೇಕಾಗಿದೆ. ನೀರಾವರಿ ವ್ಯವಸಾಯಕ್ಕೆ ಅನುಕೂಲವಾಗುವ ಹಾಗೆ ನಾಲ್ಕಾರು ತಿಂಗಳಿಗೆ ಆಗುವಷ್ಟು ನೀರು ನಿಂತರೂ ಸರಿ, ಅಂಥ ಪ್ರದೇಶಗಳನ್ನು ಹೆಚ್ಚು ವಿಮರ್ಶಿಸಿ ಹೊಸ ಕೆರೆಗಳನ್ನು ಕಟ್ಟತಕ್ಕ ಯೋಜನೆಯನ್ನು ಸರ್ಕಾರ ಇಟ್ಟುಕೊಳ್ಳಬೇಕು. ಈಗ ಹೊಸ ಕೆರೆಗಳನ್ನು ಅಲ್ಲಲ್ಲಿ ಕಟ್ಟುತ್ತಿದ್ದಾರೆ. ಈ ಕ್ರಮ ಇನ್ನೂ ಬಿರುಸಾಗಿ ನಡೆದು ಹೆಚ್ಚು ಅಭಿವೃದ್ಧಿಯಾಗಬೇಕಾಗಿದೆ.

ಕೆರೆಗಳ ವಿಷಯದಲ್ಲಿ ಒಂದು ತೀವ್ರ ಕ್ರಮವನ್ನು ಲೋಕೋಪಯೋಗಿ ಇಲಾಖೆ ತೆಗೆದು ಕೊಳ್ಳಬೇಕಾಗಿದೆ. ಎಲ್ಲಿ ದೊಡ್ಡ ಅಥವಾ ಸಣ್ಣ ಕೆರೆಗಳಿವೆ, ಆ ಪ್ರದೇಶದಲ್ಲಿ ಕೆರೆಗಳ ಅಂಗಳದಲ್ಲಿ ರುವ ಭೂಮಿಯನ್ನು ಕೆಲವರು ಅತಿಕ್ರಮಣ ಮಾಡಿ, ಸಾಗುವಳಿ ಮಾಡುತ್ತಿದ್ದಾರೆ. ಇದರಿಂದ ಕೆರೆಯಲ್ಲಿ ನೀರು ನಿಲ್ಲುವುದಕ್ಕೆ ಬಹಳ ತೊಂದರೆಯಾಗಿದೆ. ಈ ರೀತಿಯ ಅತಿಕ್ರಮಣವನ್ನು ಸರ್ಕಾರ ತಡೆಗಟ್ಟಬೇಕೆಂದು ಸೂಚನೆ ಮಾಡುತ್ತೇನೆ.

ಇನ್ನೊಂದು ಸೂಚನೆಯನ್ನು ನಾನು ಸರ್ಕಾರಕ್ಕೆ ಮಾಡ ಬಯಸುತ್ತೇನೆ. ಕಂಟ್ರಾಕ್ಟರ್ ಹುದ್ದೆ ಬಹಳ ಲಾಭದಾಯಕವಾಗಿದೆ ಎಂದು ಎಲ್ಲರೂ, ಹಿರಿಯರು, ಚಿಕ್ಕವರು, ದೊಡ್ಡವರು, ಕಂಟ್ರಾಕ್ಟ್ ಮಾಡಲು ಮುಂದೆ ಬರುತ್ತಿದ್ದಾರೆ. ಸ್ವಾಭಾವಿಕವೋ, ಅಸ್ವಾಭಾವಿಕವೋ ವಿದ್ಯಾವಂತ ತರುಣರ, ಇಂಜಿನಿಯರಿಂಗ್ ಪದವೀಧರರ ನಿರುದ್ಯೋಗ ಸಮಸ್ಯೆ ಭೂತಾಕಾರ ವಾಗಿ ಸರ್ಕಾರ ಮತ್ತು ಸಮಾಜದ ಮುಂದೆ ಇದೆ. ಈ ಬಗ್ಗೆ ನಾನು ಕೊಡತಕ್ಕ ಸಲಹೆ ಉಪಯೋಗವಾಗುತ್ತದೆಯೋ ಎನ್ನುವುದನ್ನು ಸರ್ಕಾರ ಮತ್ತು ಸಂಬಂಧಪಟ್ಟ ಅಧಿಕಾರಿಗಳೂ, ತಜ್ಞರೂ ಪರಿಶೀಲಿಸಬೇಕಾಗಿದೆ. ಇಷ್ಟು ಲಾಭದಾಯಕವಾದ ಕಂಟ್ರಾಕ್ಟ್ ಹುದ್ದೆಯ ಈ ಕ್ಷೇತ್ರವನ್ನು ಸರ್ಕಾರವೇ ಏಕೆ ವಹಿಸಿಕೊಳ್ಳಬಾರದು ? ಇದು ಪರಿಶೀಲಿಸಬೇಕಾದ ವಿಷಯ.

ಶ್ರೀ ಎಚ್. ಸಿದ್ಧವೀರಪ್ಪ (ಹರಿಹರ).—ಕುರಿ ಕಾಯುವುದಕ್ಕೆ ತೋಳ ಬಿಟ್ಟ ಹಾಗೆ ಆಗುತ್ತದೆ.

ಶ್ರೀ ಡಿ. ಎಸ್. ಗೌಡ.—ಕಾಯುವವನು ಸರಿಯಾಗಿದ್ದರೆ ತೋಳ ಏನು ಮಾಡುತ್ತದೆ, ಸ್ವಾಮಿ ?

ಇದರಿಂದ ಇಂಜನಿಯರಿಂಗ್ ಪದವೀಧರರನ್ನು ಉಪಯೋಗಿಸಿಕೊಂಡು ಒಂದು ಕಡೆ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಬಹುದು ಮತು ಹೆಚ್ಚಿನ ರೀತಿಯಲ್ಲಿ ಕೆಲಸವಾಗುವಂತೆ ಮಾಡಬಹುದು. ಕಂಟ್ರಾಕ್ಟಿಗೆ ಸಿಮೆಂಟ್, ಕಬ್ಬಿಣ, ಉಕ್ಕು, ಮತ್ತೊಂದು, ಮಗದೊಂದು ಹೀಗೆ ಏನು ಬೇಕೋ ಆ ಸೌಲಭ್ಯಗಳನ್ನೆಲ್ಲ ಸರ್ಕಾರವೇ ಒದಗಿಸಿಕೊಡುತ್ತಿದೆ. ಸ್ವಾಭಾವಿಕವಾದ ಕೆಲವು ವಸ್ತುಗಳು ಬೇಕಾಗಿರುವುವು ನಮ್ಮಲ್ಲಿರುವಾಗ ನಾವೇ ಕಂಟ್ರಾಕ್ಟ್ ಕೆಲಸಗಳನ್ನು ವಹಿಸಿ ಕೊಂಡು ಮಾಡಿದರೆ ಅದರಿಂದ ಸರ್ಕಾರಕ್ಕೂ ಮತ್ತು ದೇಶಕ್ಕೂ ಹೆಚ್ಚಿನ ಉಪಯೋಗವಾಗ ಬಹುದು ಎಂದು ನಾನು ಭಾವಿಸುತ್ತೇನೆ. ಈ ವಿಷಯವನ್ನು ಸರ್ಕಾರದವರು ತೀವ್ರವಾಗಿ ಪರಿಶೀಲಿಸಬೇಕು.

4-30 P.M.

ವಿದ್ಯುಚ್ಛಕ್ತಿಯ ವಿಚಾರದಲ್ಲಿ ಕೆಲವಾರು ಮಾತುಗಳನ್ನು ಹೇಳಬೇಕಾಗಿದೆ. ಈ ದಿವಸ ಬೇಕಾದಷ್ಟು ವಿದ್ಯುಚ್ಛಕ್ತಿ ನಮ್ಮ ದೇಶದಲ್ಲಿದೆ, ಅದು ಇನ್ನೂ ಹೆಚ್ಚಾಗಿ ಗ್ರಾಮಾಂತರಗಳಿಗೆ ಹರಡ ಬೇಕಾಗಿದೆ, ಗ್ರಾಮಾಂತರದಲ್ಲಿ ನೀರಾವರಿ ಅನುಕೂಲವಿಲ್ಲದಿರುವ ಹಳ್ಳಿಗಳು ತುಂಬಾ ಇವೆ,

ಅಲ್ಲಿಗೆ ಒದಗಿಸಬೇಕು, ಅಲ್ಲಿ ಮಳೆಯಿಲ್ಲದೆ ನೀರಾವರಿಗೆ ಬಹಳ ತೊಂದರೆಯಾಗಿದೆ. ಆದರೆ ವಿದ್ಯುಚ್ಛಕ್ತಿ ಇದೆ. ನಮ್ಮ ದೇವನಹಳ್ಳಿ ತಾಲ್ಲೂಕಿನಲ್ಲಿ ಹೆಚ್ಚು ನೀರಾವರಿ ಕೆಲಸಮಾಡಲು ಪಂಪುಸೆಟ್ಟು ಗಳನ್ನು ಉಪಯೋಗಿಸುತ್ತಿದ್ದಾರೆ. ಆದರೆ ಒಂದೊಂದು ಸಾರಿ 2-3 ದಿವಸಗಳವರೆಗೆ ಕರೆಂಟಿರುವು ದಿಲ್ಲ. ಆದುದರಿಂದ ಈ ನ್ಯೂನತೆಯನ್ನು ಸರಿಪಡಿಸಬೇಕು, ತಾಂತ್ರಿಕ ತೊಂದರೆಯಿಂದಲೋ, ಟ್ರಾನ್ಸ್‌ಫಾರ್ಮರುಗಳ ಅಭಾವದಿಂದಲೋ ಹಾಗಿರಬಹುದು. ಏನೇ ಇರಲಿ, ಈ ನ್ಯೂನತೆ ಯನ್ನು ತಕ್ಷಣ ಅಧಿಕಾರಿಗಳು ಸರಿಪಡಿಸಿ ವಿದ್ಯುಚ್ಛಕ್ತಿ ಸರಬರಾಜಿಗೆ ತೊಂದರೆಯಾಗದಹಾಗೆ ನೋಡಿ ಕೊಳ್ಳಬೇಕು. ಇಂದು ರಸ್ತೆ ಮತ್ತು ಸಾರಿಗೆ ಸೌಕರ್ಯಕ್ಕಾಗಿ ಸರಕಾರ ಹೆಚ್ಚಿನ ಹಣ ಒದಗಿಸಿದ್ದರೂ ಅದು ಸಾಲದು, ಹಣದ ಅಭಾವವಿದ್ದರೂ ಕೂಡ ಸರಕಾರ ತನ್ನ ಶಕ್ತಿಮೀರಿ ಕೆಲಸಮಾಡಿರುವುದು ಪ್ರಶಂಸನೀಯವಾಗಿದೆ. ಆದರೆ ಹಣದ ಅಭಾವವೆಷ್ಟೇ ಇದ್ದರೂ ಸಾರಿಗೆ ಮತ್ತು ರಸ್ತೆ ಕೆಲಸ ನಿಲ್ಲಿಸುವುದಕ್ಕಾಗುವುದಿಲ್ಲ. ಪ್ರಗತಿಯಾಗಬೇಕೆಂದು ಹೇಳುವಾಗ ಹಳ್ಳಿಗಾಡುಗಳಿಗೆ ಉತ್ತಮ ರಸ್ತೆ ಸೌಕರ್ಯ ಒದಗಿಸಬೇಕು, ರೈತರ ಪ್ರಗತಿಯಾಗಬೇಕಾದರೆ ಈ ಕೆಲಸವಾಗಬೇಕು, ಆದ್ದರಿಂದ ಇರುವ ಹಣದಲ್ಲೇ ರೈತರಿಗೆ ಸರಕಾರ ಸಾಕಷ್ಟು ಸಹಾಯ ಮಾಡಬೇಕು.

ಬೆಂಗಳೂರು ಜಿಲ್ಲೆ ಮತ್ತು ಬಾರ್ಡರಿನಲ್ಲಿ ಇರುವ ಕೋಲಾರ ಜಿಲ್ಲೆ ದೇವನಹಳ್ಳಿ ಉತ್ತರ ದಲ್ಲಿ ರಾಯಲಸೀಮೆ ಬರುತ್ತದೆ, ದೇವನಹಳ್ಳಿಯಲ್ಲಿ ಹೆಚ್ಚು ಮಳೆಯಿಲ್ಲ, ಕೋಲಾರ ಜಿಲ್ಲೆ ಅಭಾವ ಪ್ರದೇಶದಿಂದ ಕೂಡಿದೆ, ನಮ್ಮಲ್ಲಿ ದೊಡ್ಡ ಕೆರೆಯಾಗಲೀ ನದಿಗಳಾಗಲೀ ಇಲ್ಲ. ಆದುದರಿಂದ ಈ ಅಭಾವ ಪ್ರದೇಶದಲ್ಲಿ ಹೆಚ್ಚು ಸಣ್ಣ ನೀರಾವರಿ ಕೆಲಸಗಳನ್ನು ಕೈಕೊಳ್ಳಬೇಕು. ಈ ದಿಶೆಯಲ್ಲಿ ನಾನು ಸರಕಾರಕ್ಕೆ ಸಲಹೆಮಾಡಿದ್ದೆ. ಮಾನ್ಯ ಲೋಕೋಪಯೋಗಿ ಶಾಖೆಯ ಮಂತ್ರಿಗಳು ಪ್ರವಾಸ ಬಂದಾಗ ಸೈಟು ತೋರಿಸಿ ದಕ್ಷಿಣ ಪಿನಾಕಿನಿ ನದಿ ಹರಿಯುತ್ತದೆ, ಅದರ ನೀರು ಉಪ ಯೋಗವಾಗದೆ ಬೇರೆ ಎಲ್ಲೋ ಹರಿದು ಹೋಗುತ್ತಿದೆ, ಅದಕ್ಕೆ ಪಿಕಪ್ ಹಾಕಿ ಅಥವಾ ಸಣ್ಣ ಸಣ್ಣ ಅಣೆ ಕಟ್ಟಿ ಆ ನೀರನ್ನು ಉಪಯೋಗಿಸಲು ನೀರಾವರಿ ಕೆಲಸ ಮಾಡಲು ಅವಕಾಶಮಾಡಿದರೆ ಬಹಳ ಉಪಯೋಗವಾಗುತ್ತದೆ, ಆ ನದಿ ಹರಿಯುವ 10-12 ಮೈಲಿ ಪ್ರದೇಶದಲ್ಲಿ ಸುಮಾರು 300 ಹಳ್ಳಿ ಗಳಿಗೆ ಅನುಕೂಲವಾಗುವುದು ಎಂದು ತಿಳಿಸಿದ್ದೆ. ಇದನ್ನು ಮಾಡಿದರೆ ಶಾಶ್ವತವಾದ ನೀರಾವರಿ ಮಾಡಬಹುದು. ಆದುದರಿಂದ ಆದಷ್ಟು ತೀವ್ರವಾಗಿ ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕೆಂದು ಸೂಚಿಸುತ್ತೇನೆ.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಸನ್ಮಾನ್ಯ ಸಭಾಧ್ಯಕ್ಷಣೀಯವರೇ, ಸನ್ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು 91 ಕೋಟಿ ರೂಪಾಯಿಗಳ ಬಜೆಟ್ ಬೇಡಿಕೆಯೇನು ನಮ್ಮ ಮುಂದಿಟ್ಟಿದ್ದಾರೆ ಅದನ್ನು ವಿರೋಧಿಸುತ್ತಾ ನಾಲ್ಕಾರು ಮಾತುಗಳನ್ನು ಹೇಳುತ್ತೇನೆ. ಈ ಬೇಡಿಕೆಯನ್ನು ನೋಡಿದರೆ ಪೂರ್ಣವಾಗಿ ಹಳೇ ಮೈಸೂರನ್ನು ಕಡೆಗಣಿಸಿದ್ದಾರೆಂದು ಹೇಳಬಹುದು. ನಮ್ಮ ರಾಜ್ಯದಲ್ಲಿ ದೊಡ್ಡ ದೊಡ್ಡ ಯೋಜನೆ, ಸಣ್ಣ ಸಣ್ಣ ಯೋಜನೆ ಮಾಡಿ ಹೆಚ್ಚು ನೀರಾವರಿಗೆ ಅನುಕೂಲಮಾಡಬೇಕೆಂದು ಹೊರಟು ನಾಲ್ಕನೆಯ ಯೋಜನೆ ಮುಗಿಯುವ ವೇಳೆಗೆ 426.67 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಸುಮಾರು 78.2 ಲಕ್ಷ ಎಕರೆ ನೀರಾವರಿ ತರಬೇಕೆಂದಿ ದ್ದಾರೆ. ಈಗ ಕೇವಲ 21 ಲಕ್ಷ ಎಕರೆ ಮಾತ್ರ ನೀರಾವರಿಯಾಗಿದೆ. ಅಂದರೆ ಸುಮಾರು 8.3 ಭಾಗ ಸಾಧನೆಯಾಗಿದೆ. ಇದನ್ನು ನೋಡಿದರೆ ಖರ್ಚುಮಾಡುವಾಗ ಅಪವ್ಯಯವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ ಈ ಹಣ ಖರ್ಚುಮಾಡುವಾಗ ಸಮತೋಲನವಾಗಿ ಮಾಡಿಲ್ಲ. ತೆಗೆದು ಕೊಂಡಿರುವ 17 ಕಾರ್ಯಗಳಲ್ಲಿ ಹಳೇ ಮೈಸೂರು ಭಾಗದಲ್ಲಿ ಕೇವಲ 3 ಯೋಜನೆಗಳನ್ನು ತೆಗೆದು ಕೊಂಡಿದ್ದಾರೆ, ಕಪಿನಿ ಹೇಮಾವತಿ ಮತ್ತು ಯಗಚಿ ರಿಸರ್ವಾಯರ್ ಕೆಲಸಗಳನ್ನು ಮಾತ್ರ ತೆಗೆದು ಕೊಂಡಿದ್ದಾರೆ. ಇದರಿಂದ ಕಡಮೆ ಕೆಲಸ ಹಳೇ ಮೈಸೂರಿನಲ್ಲಿ ತೆಗೆದುಕೊಂಡಿರುವುದು ಗೊತ್ತಾಗುತ್ತವೆ. ಹೊಸ ಮೈಸೂರು ಭಾಗದಲ್ಲಿ ಆಗಿರುವ ಪ್ರಗತಿ ಹಳೆಯ ಮೈಸೂರಿನಲ್ಲಿ ಆಗಿಲ್ಲ. ಹೊಸ ಮೈಸೂರಾದ ಮೇಲೆ ಹಳೆಯ ಮೈಸೂರನ್ನು ಮರೆತಿದ್ದಾರೆ, ಅಭಿವೃದ್ಧಿ ಕಾರ್ಯ ಹಳೆಯ ಮೈಸೂರಿನಲ್ಲಿ ಸಾಕಷ್ಟು ಮಾಡುತ್ತಿಲ್ಲ ಎಂಬ ಭಾವನೆ ಜನರಲ್ಲಿದೆ. ಈ ಭಾವನೆ ಮಾಡಲು ಅವಕಾಶ ಕೊಡುವುದು ಒಳ್ಳೆಯದಲ್ಲ. ಅದರಿಂದ ರಾಜ್ಯಕ್ಕೆ ತುಂಬಾ ಹಾನಿಯಾಗುತ್ತದೆ. ನೀರಾವರಿ ಕೆಲಸ ಮಾಡುವಾಗ ಹೇಮಾವತಿ ಯೋಜನೆಯ ಕೆಲಸವು ಜರೂರಾಗಿ ಆಗುತ್ತಿಲ್ಲ. ಅದನ್ನು ತ್ವರಿತವಾಗಿ ಮಾಡಿ ಹಳೆಯ ಮೈಸೂರು, ಹಾಸನ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಇತರ ನೀರಾವರಿ ಕಾರ್ಯಗಳನ್ನು ಕೈಕೊಳ್ಳಬೇಕು. ಹೊಸ ಮೈಸೂರು ಭಾಗದಲ್ಲಿ ಬ್ಯಾಂಕುಗಳು ಹಣ ಕೊಡುವಂತೆ ಒತ್ತಾಯಮಾಡಿ ರೈತರಿಗೆ ಹಣ ಸಹಾಯಮಾಡಿ ಪ್ರೋತ್ಸಾಹ ನೀಡುತ್ತಿದ್ದಾರೆ. ಅದೇ ರೀತಿಯಲ್ಲಿ ಹಳೆಯ ಮೈಸೂರು ಭಾಗಕ್ಕೂ ಹೆಚ್ಚು ಪ್ರೋತ್ಸಾಹ ಕೊಟ್ಟು ಬ್ಯಾಂಕುಗಳಿಗೆ ಜಮೀನು ಆಧಾರಮಾಡಿಕೊಂಡು ಹಣ ಸಹಾಯಮಾಡುವಂತೆ ಜಾಗ್ರತೆ ಕ್ರಮ ಕೈಕೊಂಡು ಇಡೀ ಜಿಲ್ಲೆಯ ನೀರಾವರಿ ಕೆಲಸಗಳನ್ನು ಜಾಗ್ರತೆಯಾಗಿ ಮುಗಿಸಬೇಕು.

(ಶ್ರೀ ಎನ್. ಎ. ಚನ್ನೇಗೌಡ)

ರಸ್ತೆ ವಿಚಾರ. ಹಳೆಯ ಮೈಸೂರಿನಲ್ಲಿ ಬೇಕಾದಷ್ಟು ರಸ್ತೆ ಇತ್ತು. ಮಂಡ್ಯ ಜಿಲ್ಲೆಯಲ್ಲಿ ಪಾಂಡವಪುರ ತಾಲ್ಲೂಕಿನಲ್ಲಿ ಸುಮಾರು 198 ಮೈಲಿ ರಸ್ತೆ ಇದೆಯೆಂದು ತಿಳಿಸಿದ್ದಾರೆ. ಆದರೆ ಮೈಸೂರು ಸಕ್ಕರೆ ಕಂಪೆನಿ ಷುಗರ್‌ಕೇನ್ ಸೆಸ್ ಫಂಡಿನಿಂದ ಅದನ್ನು ಮಾಡಿದ್ದಾರೆಯೇ ಹೊರತು ಲೋಕೋಪಯೋಗಿ ಇಲಾಖೆಯ ನಿಧಿಯಿಂದ ಮಾಡಿಲ್ಲ. ಸರಕಾರ ಷುಗರ್‌ಕೇನ್‌ಸೆಸ್ ಫಂಡನ್ನು ಜನರಲ್ ರೆವೆನ್ಯೂಗೆ ಸೇರಿಸಿದೆ, ಇದರಿಂದ ನಮ್ಮ ವಿಭಾಗದ ರೈತರಿಗೆ ಬಹಳ ನಷ್ಟವಾಗುತ್ತಿದೆ. ಪ್ರತಿಯೊಂದು ಟನ್ನಿಗೂ 6 ರೂಪಾಯಿ ಕೊಡುತ್ತಿದ್ದರೂ ಕೂಡ ಇಂದು ಗಾಡಿಗಳು ಓಡಾಡಲು ಸರಿಯಾದ ರಸ್ತೆಯಿಲ್ಲ ಮತ್ತು ಗದ್ದೆಗಳಿಗೆ ಗೊಬ್ಬರ ವಗೈರೆ ಸಾಗಿಸಲು ಒಳ್ಳೆಯ ರಸ್ತೆಯೇ ಇಲ್ಲ. ಕರ್ಣಾಟಕವಾದ್ದರಿಂದ ಇಂಥ ದುರಂತಕ್ಕೆ ಅವಕಾಶವಾಯಿತು ಎಂಬ ಭಾವನೆ ಜನರಲ್ಲಿ ಮೂಡಿದೆ. 342ನೆಯ ಪುಟ ನೋಡಿದರೆ ಮಂಡ್ಯ ಡಿವಿಜನ್ನಿಗೆ ಕೇವಲ 55 ಸಾವಿರ ರೂಪಾಯಿ ಕೊಟ್ಟು, ಅದರಲ್ಲಿ ಮಂಡ್ಯದ ಪ್ಯಾರಲಲ್ ರಸ್ತೆಗೇ 48 ಸಾವಿರ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದಾರೆ. ಇಡೀ ಜಿಲ್ಲೆಯಲ್ಲಿ ಒಂದು ಡಿವಿಜನ್ನಿನಲ್ಲಿ ಯಾವ ರಸ್ತೆಯ ಕೆಲಸವನ್ನೂ ಸರಕಾರ ತೆಗೆದುಕೊಂಡಿಲ್ಲ. ಮಂಡ್ಯ ತೆಂಡೇಕೆರೆ ರಸ್ತೆಗೆ 10 ವರ್ಷಗಳ ಹಿಂದೆ ಅಂದಾಜು ಮಾಡಿದ್ದರು. ಅಲ್ಲಿ ಸ್ವಲ್ಪ ಕೆಲಸ ಮಾಡಿದ್ದಾರೆ, ಮುಂದೆ ಮಾಡಿಲ್ಲ. ಇದರಿಂದ ಯಾವ ರೀತಿಯ ಉಪಯೋಗವೂ ಆಗದೆ ಹಣ ಅನ್ಯಾಯವಾಗಿದೆ. ಇಂಥ ರಸ್ತೆಗಳನ್ನು ಜಾಗ್ರತೆ ಮಾಡಬೇಕು. ಅಲ್ಲದೆ ಬಲ್ಲೇನಹಳ್ಳಿ ಪ್ರಾಜೆಕ್ಟನ್ನು 1957ರಲ್ಲಿ ಅಂದಾಜು ಮಾಡಿತ್ತು. ಮಂತ್ರಿಮಂಡಲ ಬದಲಾವಣೆಯಾದಮೇಲೆ ಅದನ್ನು ಕೈಬಿಟ್ಟಿದ್ದಾರೆ. ಮಂತ್ರಿಮಂಡಲ ಬದಲಾವಣೆಯಾದ ಮಾತ್ರಕ್ಕೆ ರೈತರ ಹಿತಚಿಂತನೆಯನ್ನು ಕಡೆಗಾಣಿಸಬಾರದು. ಯಾರೇ ಅಧಿಕಾರಕ್ಕೆ ಬರಲಿ ಪ್ಲಾನಿನ ಪ್ರಕಾರ ಕೆಲಸ ಮಾಡಿ ರೈತರಿಗೆ ಸಹಾಯ ಮಾಡಬೇಕಾದ್ದು ಅಗತ್ಯವಾದದು. ಅದೇ ರೀತಿ ಕೃಷ್ಣರಾಜಸಾಗರ ಮತ್ತು ತೊಣ್ಣೂರು ಕೆರೆ ಒಳಾಯದಲ್ಲಿ ಲಿಫ್ಟ್ ಇರಿಗೇಷನ್ ಮಾಡುವ ಯೋಜನೆಯನ್ನು ಶ್ರೀ ಚೆನ್ನಬಸಪ್ಪನವರು ಮಾಡಿದ್ದರು, ಅದನ್ನು ಕೈಬಿಡಲಾಗಿದೆ. ಇದನ್ನು ಮಾಡಿದರೆ ಬಹುಮಂದಿ ರೈತರಿಗೆ ಅನುಕೂಲವಾಗುವುದು. ಇದನ್ನು ಮಾಡದೆ ರಾಜಕೀಯ ಉದ್ದೇಶಗಳಿಗಾಗಿ ಕೈ ಬಿಟ್ಟರೆ, ಮಂತ್ರಿಗಳ ಬದಲಾವಣೆಯಾದ ಹಾಗೆಲ್ಲಾ ಅವರು ಮಾಡಿರುವ ಕೆಲಸಗಳನ್ನೆಲ್ಲಾ ಕೈಬಿಡಬೇಕೆಂಬ ದೃಷ್ಟಿಯಿಂದ ಮುಂದುವರೆಯುವುದಾದರೆ ರೈತರಿಗೆ ಮತ್ತು ರಾಜ್ಯಕ್ಕೆ ಅನ್ಯಾಯವಾಗುವುದು. ಈ ಮನೋಭಾವ ಇರಬಾರದು.

ವಿದ್ಯುಚ್ಛಕ್ತಿ ವಿಚಾರ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ಬೇಕಾದಷ್ಟು ವಿದ್ಯುಚ್ಛಕ್ತಿ ಇದೆ, ಈಗಾಗಲೆ ನೆರೆ ರಾಜ್ಯಗಳಿಗೆ ಅದನ್ನು ಕಡಮೆ ದರದಲ್ಲಿ ಕೊಡಲಾಗುತ್ತಿದೆ

ನಾವು ಇಂಟರ್‌ನಲ್ ಮಾರ್ಕೆಟ್ ಡೆವಲಪ್ ಮಾಡಿಕೊಳ್ಳದಿದ್ದರೆ ಯಾವತ್ತಾದರೂ ಕೂಡ ಓವರ್ ಪ್ರೊಡಕ್ಷನ್ ಅಂತ ಏನು ಹೇಳುತ್ತೇವೆ ಅದನ್ನು ಎದುರಿಸಬೇಕಾಗುತ್ತದೆ. ಅದು ಆಗದ ರೀತಿಯಲ್ಲಿ ಎಚ್ಚರಿಕೆಯಿಂದ ಲೋಕಲ್ ಮಾರ್ಕೆಟನ್ನು ಬೆಳೆಸಿಕೊಳ್ಳಬೇಕು. ಈಗಾಗಲೇ ಹೊರ ರಾಜ್ಯಗಳಿಗೆ 4.5 ಪೈಸೆಯಂತೆ ಒಂದು ಯುನಿಟ್ಟಿಗೆ ಕೊಡುತ್ತಾ ಇರುವಾಗ ಇಲ್ಲಿನ ರೈತರಿಗೆ ಹೆಚ್ಚಿನ ಬೆಲೆಯಲ್ಲಿ ವಿದ್ಯುಚ್ಛಕ್ತಿಯನ್ನು ಮಾರುತ್ತಾ ಇರುವುದು ದುರದೃಷ್ಟಕರ. ರಾಜ್ಯದಲ್ಲಿ ಹೆಚ್ಚು ಆಹಾರಧಾನ್ಯಗಳನ್ನು ಬೆಳೆಯಲು ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡಿ ರೈತರಿಗೆ ಪ್ರೋತ್ಸಾಹ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಈ ಲೋಕೋಪಯೋಗಿ ಇಲಾಖೆಯಲ್ಲಿ ಕರಪ್ಷನ್ ಮನೆಮಾತಾಗಿದೆ. ಇದರಲ್ಲಿರತಕ್ಕ ಕರಪ್ಷನ್ ಎಲ್ಲಾ ಸೇರಿಸಿದರೆ ಇಡೀ ರಾಜ್ಯದ ಬೇರೆ ಇಲಾಖೆಗಳಲ್ಲಿರುವ ಭ್ರಷ್ಟಾಚಾರಕ್ಕೆ ಸರಿಸಮಾನವಾಗುತ್ತದೆ ಎಂದರೆ ಅತಿಶಯೋಕ್ತಿಯಾಗಲಾರದು. ಕೇವಲ ಒಬ್ಬ ಸಣ್ಣ ನೀರುಗಂಟಿಯಿಂದ ಹಿಡಿದು ದೊಡ್ಡ ಅಧಿಕಾರಿಯವರೆಗೂ ಭ್ರಷ್ಟಾಚಾರ ಬೇರೂರಿದೆ. ನೀರುಗಂಟಿ ಒಂದು ರೂಪಾಯಿ ತೆಗೆದುಕೊಂಡರೆ ದೊಡ್ಡ ದೊಡ್ಡ ಅಧಿಕಾರಿಗಳು ಸಾವಿರಾರು ರೂಪಾಯಿ ಲಂಚ ತೆಗೆದುಕೊಳ್ಳುತ್ತಾರೆ. ಯಾವ ಡಿಪಾರ್ಟ್‌ಮೆಂಟಿಗಾದರೂ ಸೇರಿಕೊಳ್ಳುವುದಾದರೆ ಇಂಜನಿಯರಿಂಗ್ ಡಿಪಾರ್ಟ್‌ಮೆಂಟಿಗೆ ಸೇರಿಕೊಳ್ಳಿ ಎಂದು ಹೇಳುತ್ತಾರೆ. ಅಲ್ಲಿ 4—6 ವರ್ಷ ಕೆಲಸದಲ್ಲಿದ್ದು ರಾಜೀನಾಮೆ ಕೊಟ್ಟು ಕಂಟ್ರಾಕ್ಟ್ ಮಾಡಿಸಿ ಅಂತ ಹೇಳುತ್ತಾರೆ. ಏಕೆಂದರೆ ಅಲ್ಲಿನ ಆಗುಹೋಗುಗಳನ್ನೆಲ್ಲಾ ಚೆನ್ನಾಗಿ ತಿಳಿದುಕೊಂಡು ಕಂಟ್ರಾಕ್ಟುದಾರರಾಗಿದ್ದಾರೆ. ರಾಜೀನಾಮೆ ಕೊಟ್ಟು ಕಾಂಟ್ರಾಕ್ಟುದಾರರಾಗುವ ಉದ್ದೇಶದಿಂದಲೇ ಅಧಿಕಾರದಲ್ಲಿರುವ ಕೆಲವೇ ವರ್ಷಗಳಲ್ಲಿ ಲಕ್ಷಾಧೀಶ್ವರರಾಗಿರುವ ನಿದರ್ಶನ ಬೇಕಾದಷ್ಟು ಇದೆ. ಆದ್ದರಿಂದ ನನ್ನ ಸಲಹೆ ಏನೆಂದರೆ, ಯಾರಾದರೂ ರಾಜಿನಾಮೆ ಕೊಡುವುದಾದರೆ ಅವರು ರಾಜಿನಾಮೆ ಕೊಡುವಾಗ ತಮ್ಮ ಹೆಸರಿನಲ್ಲಿ ತಮ್ಮ ಬಂಧುಗಳ ಹೆಸರಿನಲ್ಲಿ ಎಷ್ಟು ಆಸ್ತಿ ಮಾಡಿದ್ದಾರೆ ಎಂಬುದನ್ನು ವಿಮರ್ಶೆ ಮಾಡಿ ಅನಂತರ ರಾಜೀನಾಮೆ ಒಪ್ಪಿ

ಕೊಳ್ಳುವ ಪದ್ಧತಿಯನ್ನು ಜಾರಿಗೆ ತಂದರೆ ಈ ಭ್ರಷ್ಟಾಚಾರವನ್ನು ಕಡಿಮೆ ಮಾಡಬಹುದು ಎಂದು ಸೂಚನೆ ಮಾಡುತ್ತೇನೆ.

ಕೊನೆಯದಾಗಿ ಹೇಮಾವತಿ ಬಗ್ಗೆ ಒಂದು ಮಾತು. ನಮಗೆ ಕಾವೇರಿ ಎಷ್ಟು ಪ್ರಾಮುಖ್ಯವೋ ಅಷ್ಟೇ ಹೇಮಾವತಿ ಮಂಡ್ಯ ಜಿಲ್ಲೆಯವರಿಗೆ ವರಪ್ರದಾನ. ಈ ಯೋಜನೆಗೆ ಎಷ್ಟು ಆದ್ಯತೆ ಕೊಟ್ಟು ಮಾನ್ಯ ಮಂತ್ರಿಗಳು ಎಷ್ಟು ಜಾಗ್ರತೆ ಮಾಗಿಸುತ್ತಾರೋ ಅಷ್ಟು ಮಂಡ್ಯ ಜಿಲ್ಲೆಯ ಜನರಿಗೆ ಅನು ಕೂಲವಾಗುತ್ತದೆ ಎಂದು ತಿಳಿದುಕೊಂಡಿದ್ದೇನೆ. ಮಂಡ್ಯ ಜಿಲ್ಲೆಯಲ್ಲಿ ಬಹಳ ಭಾಗ ಖುಷ್ಕಿ ಜಮೀನು ಇವೆ. ಅಲ್ಲಿ ಹೆಚ್ಚಿನ ನೀರಾವರಿಯ ಅವಶ್ಯಕತೆ ಇದೆ. ಬೇಟಿ ಗ್ರಾಮದಲ್ಲಿ ಕೆರೆ ಕಟ್ಟಿಸಿ ಕೊಡಬೇಕೆಂದು ಅರ್ಜಿ ಹಾಕಿಕೊಂಡು 7–8 ವರ್ಷವಾಗಿವೆ, ಅದು ಬೆಟ್ಟ ಗುಡ್ಡ ಇರತಕ್ಕ ಪ್ರದೇಶ, ಈ ದಿವಸ ಕುಡಿಯುವುದಕ್ಕೂ ಕೂಡ ಅಲ್ಲಿ ನೀರಿಲ್ಲ. ಅಂತಹ ಕಡೆ ಕೆರೆ ಕಟ್ಟಿಸದೆ, ನೀರಾವರಿ ಸೌಲಭ್ಯ ಒದಗಿಸದೆ ಬೇರೆ ಕಡೆ ಲಕ್ಷಾಂತರ ರೂಪಾಯಿ, ಕೋಟ್ಯಾಂತರ ರೂಪಾಯಿ ಖರ್ಚು ಮಾಡುವುದು ಸಮಾಧಾನಕರವಾದ ಸಂಗತಿ ಅಲ್ಲ. ಅಲ್ಲದೆ ನನ್ನ ಜಿಲ್ಲೆಯಲಿರತಕ್ಕ ಕೆರೆಗಳ ಹೂಳನ್ನೂ ಕೂಡ ತೆಗೆದು ಹತ್ತು ವರ್ಷ ಆಗಿದೆ. ಇನ್ನೂ ತೆಗೆಸಿಲ್ಲ. ಕೆಲವು ಕೆರೆಗಳಲ್ಲಿ ಹೂಳು ತುಂಬಿಕೊಂಡು ನೀರು ನಿಲ್ಲದೇ ಮುಚ್ಚುವ ಸ್ಥಿತಿಗೆ ಬಂದಿದೆ. ಈ ಕಾರ್ಯವನ್ನು ಮೊದಲು ಲೋಕೋಪಯೋಗಿ ಇಲಾಖೆಯವರು ಮಾಡಿಸಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕೃಷ್ಣರಾಜಸಾಗರ ನಾಲೆಯಿಂದ ಈಗಾಗಲೇ ಒಂದು ಲಕ್ಷ ಇಪ್ಪತ್ತು ಸಾವಿರ ಎಕರೆ ನೀರಾ ವರಿಯಾಗುತ್ತಾ ಇದೆ. ನೀರು ಸಾಕಾದಷ್ಟು ಸರಬರಾಯಿ ಆಗುತ್ತಿಲ್ಲ. ಇಂತಹ ಸಮಯದಲ್ಲಿ ವರುಣಾ ನಾಲೆಯನ್ನು ಮಾಡಿಸಿಕೊಡಬೇಕೆಂದು ಸರ್ಕಾರದವರು ನಿರ್ಧಾರ ಮಾಡಿದ್ದಾರೆ. ಅಲ್ಲಿ prescriptive rights ಇದೆ. ಯಾವ ಜಮೀನಿಗೆ ನೀರು ಸರಬರಾಯಿ ಮಾಡಲಾಗುತ್ತಿದೆಯೋ ಅವರಿಗೆ ಯಾವ ತೊಂದರೆಯೂ ಆಗುವುದಿಲ್ಲ, ಹೆಚ್ಚಿನ ನೀರು ಇದ್ದರೆ ಮಾತ್ರ ವರುಣಾ ನಾಲೆಯಿಂದ ಕೊಡುತ್ತೇವೆ ಎಂದು ಹೇಳುತ್ತಾರೆ. ಕಾಲುವೆ ತೆಗೆದಮೇಲೆ ಆ ಪ್ರದೇಶದ ರೈತರಿಗೆ ನೀರು ಕೊಡದಿದ್ದರೆ ಆ ರೈತರು ಸುಮ್ಮನೆ ಇರುವುದಿಲ್ಲ, ನಮಗೆ ನೀರು ಕೊಡಿ, ಕಾಲುವೆ ತೆಗೆದು ಹಣ ವೆಚ್ಚ ಮಾಡಿ ನೀರು ಕೊಡದಿದ್ದರೆ ಅಧರ್ಮವಾಗುತ್ತದೆ ಎಂದು ಹೋರಾಟ ನಡೆಸುತ್ತಾರೆ. ಆಗ ನೀರು ಕೊಡಬೇಕಾಗುತ್ತದೆ. ಪ್ರಿಸ್ಕ್ರಿಪ್ಟೀವ್ ರೈಟ್ ಕಾಪಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಕಪಿನಿ ಜಲಾಶಯವನ್ನು ಪೂರ್ಣ ಮಾಡುವುದನ್ನು ಮುಂದೂಡಬೇಡಿ. ವರುಣಾ ನಾಲೆಯನ್ನು ಕೈಬಿಡಿ ಇಲ್ಲವೇಇದ್ದರೆ ಮಂಡ್ಯಜಿಲ್ಲೆಯಲ್ಲಿ ಬೆಳೆಯತಕ್ಕ ಕಬ್ಬಿನ ಗಿಡ ಚಿನ್ನದ ಗಿಡ ಎನ್ನಿಸಿಕೊಂಡಿರುವುದು ಹೋಗಿ ತುಂಬೆಯ ಗಿಡವಾಗುತ್ತದೆ. ಈಗಾಗಲೇ ನೀರು ಸರಬರಾಯಿ ಕಡಿಮೆಯಾಗಿದೆ. ನೆನ್ನೆ ರೈತರಗುಂಪು ಬಂದು ಮಂತ್ರಿಮರ್ಯರನ್ನು ಈ ವಿಚಾರದಲ್ಲಿ ನೋಡಿದ್ದಾರೆ. 15 ದಿವಸಕ್ಕೆ ಒಂದು ಸಾರಿ ನೀರು ಕೊಡುತ್ತಾ ಇದ್ದಾರೆ. ಒಂದು ಲಕ್ಷ 20 ಸಾವಿರ ಎಕರೆ ಇರತಕ್ಕ ಪ್ರದೇಶದಲ್ಲಿ 40 ಸಾವಿರ ಎಕರೆ ಕಬ್ಬು ಬೆಳೆಯತಕ್ಕ ಪ್ರದೇಶಕ್ಕೆ 6 ದಿವಸಕ್ಕೆಮಾತ್ರ ನೀರನ್ನು ಹರಿಸುತ್ತಾ ಯಿರುವುದು ತುಂಬಾ ಅನ್ಯಾಯ. ಹೀಗಿರುವಾಗ ಕಬ್ಬು ಬೆಳೆಯುವುದು ಕಡಿಮೆಯಾದರೆ ಸಕ್ಕರೆ ಉತ್ಪಾದನೆ ಮಾಡುವುದಕ್ಕೂ ತೊಂದರೆಯಾಗುತ್ತದೆ, ಫ್ಯಾಕ್ಟರಿಗಳಿಗೆ ನಷ್ಟವಾಗುತ್ತದೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರುತ್ತೇನೆ. ಸದ್ಯದಲ್ಲಿ ತಕ್ಷಣ ಅಲ್ಲಿನ ರೈತರಿಗೆ ನೀರು ಸರಬರಾಯಿ ಮಾಡುವುದನ್ನು ರೆಗ್ಯುಲೇಟೆಡ್ ಸಿಸ್ಟಂ ಪ್ರಕಾರ ಮಾಡಬೇಕು ಮತ್ತು ಕೆಲಕೆಲವು ಕಮಿಟಿಗಳನ್ನು ಮಾಡುವಾಗ ಒಳ್ಳೆಯ ಪರಿಣತರಾದ ಸದಸ್ಯರನ್ನೊಳಗೊಂಡ ಸದಸ್ಯರನ್ನು ಆ ಕಮಿಟಿಗಳಲ್ಲಿ ಹಾಕಿ ಅವರ ಸಲಹೆಯ ಪ್ರಕಾರ ಕೆಲಸ ನಡೆಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀಮತಿ ಶಾರದವ್ವ ಎಂ. ಪಟ್ಟಣ್ (ರಾಮದುರ್ಗ).—ಮಾನ್ಯ ಸಭಾಪತಿಗಳೇ, ನಮ್ಮ ರಾಮದುರ್ಗ ತಾಲ್ಲೂಕವು ಬೆಳಗಾಂವ, ವಿಜಾಪುರ, ಧಾರವಾಡ ಈ ಮೂರೂ ಜಿಲ್ಲೆಗಳ ಕೇಂದ್ರದಲ್ಲಿ ಬೆಂಗಳೂರ ರಾಜಧಾನಿಗೆ ಬರ ಹೋಗುವವರಿಗೆ ಸಂಪರ್ಕ ಬೆಳೆಸುವ ಮುಖ್ಯ ಹೆದ್ದಾರಿಯಂತಿದೆ. ಈ ರಸ್ತೆಗೆ ರಾಮದುರ್ಗದ ಮುಂದೆ ಮಲಪ್ರಭಾ ನದಿಗೆ ಪೂಲ ಕಟ್ಟುವದು ಸರಕಾರವು ಆದಷ್ಟು ಬೇಗ ಕಾಮಗಾರಿ ಷುರುಮಾಡಬೇಕೆಂದು ಸೂಚಿಸುವೆ. ವಿಜಾಪುರ—ಬೆಂಗಳೂರು ನೇರವಾಗಿ ಸಂಬಂಧ ಬೆಳೆಸಲು ಹತ್ತಿರವೆನಿಸುವ ಇದೊಂದೇ ಪೂಲಿನಿಂದ ಪ್ರತಿ ವರ್ಷವೂ ಮಳೆಗಾಲದಲ್ಲಿ 2–3 ತಿಂಗಳು ದಾರಿ ಕಟ್ಟಾಗುತ್ತಿದ್ದುದು ಹತ್ತಾರುವರ್ಷದಿಂದಲೂ ಹಿಂದೆ ಬೀಳುತ್ತಾ ಬಂದ ಈ ಯೋಜನೆಯನ್ನು ತೀವ್ರ ಶುರುಮಾಡುವಂತೆ ಸರಕಾರಕ್ಕೆ ಆಗ್ರಹದಿಂದ ಒತ್ತಾಯಪಡಿಸಿ ಕೇಳಿ ಕೊಳ್ಳುತ್ತೇನೆ.

ಕೋಳಚಿ ವೇರ್ ನೀರಾವರಿ ಕಾಲುವೆಯು ಶಿವಪೇಟವೆಂಚ ಹಳ್ಳಿಯ ಮೇಲ್ಭಾಗದಲ್ಲಿ ನೀರಿನ ಕಾಲುವೆ ಹಾಯ್ದು ಕಾಲುವೆಯ ಬಸಿ ನೀರಿನಿಂದ ಇಡೀ ಗ್ರಾಮವೇ ಜವಳು ಭೂಮಿಯಾಗಿ

(ಶ್ರೀಮತಿ ಶಾರದವ್ವ ಎಂ. ಪಟ್ಟಣ್)

ಮುಕ್ಕಾಲು ಭಾಗ ಮನೆಗಳೆಲ್ಲ ಬಿದ್ದುಹೋಗಿ ಅಲ್ಲಿ ಬಡ ಜನರೆಲ್ಲ ಮನೆ ಮಾರು ಕಳಕೊಂಡು ನಿರಾಶ್ರಿತರಾಗಿ ಅಲ್ಲಿಯ ಹೆಣ್ಣು ಮಕ್ಕಳು ತಮ್ಮ ಚಿಕ್ಕ ಪುಟ್ಟ ಮಕ್ಕಳೊಂದಿಗೆ ಬೈಲು ಪ್ರದೇಶದಲ್ಲಿ ಗೋಳಾಡುವ ಕನಿಕರ ದೃಶ್ಯವನ್ನು ನೋಡಿವ ಜಿಲ್ಲಾಧಿಕಾರಿಗಳೂ ಪಿ.ಡಬ್ಲ್ಯೂ.ಡಿ. ಮೇಲಧಿಕಾರಿಗಳೂ ಸಮಕ್ಷಮ ಸ್ಥಳಕ್ಕೆ ಭೇಟಿ ಕೊಟ್ಟು 7-8 ವರ್ಷದಿಂದಲೂ ಬಂದು ನೋಡಿ ಕನಿಕರಪಟ್ಟು ಸದರಿ ಗ್ರಾಮದ ಜನರಿಗೆ ಇದರ ಪರಿಹಾರ ಕುರಿತು ಹೊಸಗ್ರಾಮ ಕಟ್ಟಿಸಿಕೊಡುತ್ತೇವೆಂದು ಆಶ್ವಾಸನೆ ಕೊಡುತ್ತಾ ಬಂದು ಈ ವರೆಗೂ ಬರೇ ಕಾಗದ ಪತ್ರಗಳೇ ಓಡಾಡುತ್ತಿವೆ. ಹೊರ್ತಾಗಿ ಕಾಮಗಾರಿ ಮಾತ್ರ ಆಗದೆ ಇದ್ದದ್ದು ಬಹಳ ವಿಷಾದದ ಸಂಗತಿ. ಸರಕಾರವು ದಯವಿಟ್ಟು ದಿನಾಲು ಕೂಲಿ ಮಾಡಿ ದುಡಿದು ಹೊಟ್ಟೆ ತುಂಬಿಕೊಳ್ಳುವ ಈ ಬಡ ಜನರ ಗೋಳನ್ನು ತಪ್ಪಿಸಲು ಆದಷ್ಟು ಬೇಗ ಹೊಸ ಗ್ರಾಮ ನಿರ್ಮಿಸಲು ಪಿ.ಡಬ್ಲ್ಯೂ.ಡಿ. ಮೇಲಧಿಕಾರಿಗಳಿಗೆ ಆಜ್ಞೆ ಮಾಡಬೇಕೆಂದು ವಿನಂತಿಸಿಕೊಳ್ಳುವೆ.

ಕೊಳಚಿ ವೇರ್ ನೀರಾವರಿ ಕಾಲುವೆಯು ಕೇವಲ ರಾಮದುರ್ಗ ತಾಲ್ಲೂಕಿನ ಹಳ್ಳಿಗಳಿಗೇ ಸಂಬಂಧಿಸಿದ ಯೋಜನೆ ಇದ್ದು ಯಾವಾಗಲೂ ಇದರ ಮೇಲ್ವಿಚಾರಣೆಯು ರಾಮದುರ್ಗ ತಾಲ್ಲೂಕಿನ ಅಸಿಸ್ಟೆಂಟ್ ಇಂಜನಿಯರ ಅಧೀನಕ್ಕೇ ಒಳಪಟ್ಟಿರಬೇಕು. ಸದರೀ ನೀರಾವರಿ ಗ್ರಾಮದ ಹಳ್ಳಿಗಳ ಜನರು ಒಂದಿಲ್ಲೊಂದು ತೊಂದರೆ ಉದ್ಭವಿಸಿದಾಗ ತಮ್ಮ ತಾಲ್ಲೂಕಿನ ಅಲ್ಲಿ ಇರತಕ್ಕ ಇಂಜಿನಿಯರನ್ನು ಭೇಟಿಯಾಗಿ ಪರಿಹರಿಸಿಕೊಳ್ಳಲು ಅನುಕೂಲವಾಗುತ್ತಿದೆ.

ನಮ್ಮ ತಾಲ್ಲೂಕಿನಲ್ಲಿ ಚಿಪ್ಪಲಕಟ್ಟಿ—ಹೊಸೂರು ಗ್ರಾಮದ ಕೆರೆಯು ನೀರಾವರಿ ಯೋಜನೆ ಯಾಕೆ ವಿಳಂಬವಾಗಲಿಕ್ಕೆ ಹತ್ತಿದೆಯೋ ತಿಳಿಯದಂತಾಗಿದ್ದು 6-7 ವರ್ಷದಿಂದಲೂ ಅಕ್ವಿಜಿಶನ್ ಪ್ರಕರಣ ನಡೆದಿದ್ದು ಈ ವರ್ಷ ಮುಗಿಯುತ್ತದೆ. ಮುಂದಿನ ವರ್ಷ ಆಗುತ್ತದೆ, ಎಂದು ಕುಂಟ ನೆಪ ಹೇಳುತ್ತಾ ಬರುವ ಅಕ್ವಿಜೀಶನ್ ಅಧಿಕಾರಿಗಳ ಈ ಮುಂದೂಡುವಿಕೆ ಧೋರಣೆಯನ್ನು ನಿಲ್ಲಿಸಿ ಆದಷ್ಟು ಬೇಗ 100ಕ್ಕೆ 98 ಜನರಿಗೆ ಅನುಕೂಲವಿರುವ ಈ ನೀರಾವರಿ ಯೋಜನೆಯನ್ನು ಬೇಗಾ ಶುರು ಮಾಡಬೇಕೆಂದು ಸೂಚಿಸಿ ಯಾರೋ ಒಬ್ಬರು ಪ್ರಭಾವಿ ವ್ಯಕ್ತಿಗಳ ಕೈವಾಡದಿಂದ ಮುಂದೆ ಹಾಕುತ್ತಾ ಬರುವ ಈ ಯೋಜನೆಯನ್ನು ಸ್ವತಃ ಮಂತ್ರಿಗಳೇ ಆಸ್ತೆವಹಿಸಿ ಕಾರ್ಯಗತವಾಗುವಂತೆ ಲಕ್ಷ್ಯವೀಯಬೇಕೆಂದು ಸೂಚಿಸುವೆ.

ನಮ್ಮ ತಾಲ್ಲೂಕಿನ ಮುಖ್ಯ ಸ್ಥಳಕ್ಕೆ ಕೋರ್ಟು ಕಛೇರಿಗಳಿಗೆ ಬರಹೋಗುವ ಸೌಕರ್ಯಕ್ಕಾಗಿ ಬರಗಾಲ ಕಾಮಗಾರಿ ರಸ್ತೆಗಳು ನಾದುರಸ್ತ ಆಗಿ ತೊಂದರೆಯಾಗಿದ್ದು ಇಂಥ ರಸ್ತೆಗಳನ್ನು ಪಿ.ಡಬ್ಲ್ಯೂ.ಡಿ. ಖಾತೆಯವರು ಆದಷ್ಟು ಬೇಗ ತಮ್ಮ ವಶಕ್ಕೆ ತೆಗೆದುಕೊಂಡು ಪಕ್ಕಾ ರಸ್ತೆಗಳು ಮಾಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೂ ಸರಕಾರಕ್ಕೂ ಮನವಿ ಮಾಡಿಕೊಳ್ಳುವೆ.

ಸುರೆಬಾನ—ಮನಿಹಾಳ ಗ್ರಾಮವು ಕೂಡಾ ಕೊಳಚಿ ವೇರ್ ನೀರಾವರಿ ಕಾಲುವೆಯಿಂದ ಮನೆಗಳಿಗೆ ತೇವ ತಗಲಿ ಮನೆಗಳು ನಷ್ಟವಾಗುವ ಸಂಭವ ಹೆಚ್ಚಾಗಿದ್ದು ಈಗಾಗಲೇ ಅಲ್ಪಸ್ವಲ್ಪ ಮನೆಗಳು ವಾಸಿಸಲು ಬಾರದಂತಾಗಿದ್ದು ಸರಕಾರವು ಹೆಚ್ಚಿನ ನಷ್ಟ ಸಂಭವಿಸುವ ಮುಂಚಿತವಾಗಿಯೇ ಮುಂಜಾಗ್ರತೆ ಕ್ರಮ ಕೈಕೊಳ್ಳಬೇಕೆಂದು ಸದರಿ ಕಾಲುವೆಯ ಸಿಮೆಂಟ್ ಯೋಜನೆ ಬೇಗ ಶುರು ಮಾಡಬೇಕೆಂದು ಸೂಚಿಸುವೆ.

ಸಭಾಧ್ಯಕ್ಷರೇ, ಈವರೆಗೂ ನನಗೆ ನಮ್ಮ ತಾಲ್ಲೂಕಿನ ಕೆಲವು ಯೋಜಗಳನ್ನು ಸಭೆಯ ಮುಂದಿಡಲು ಅವಕಾಶ ಕಲ್ಪಿಸಿ ಕೊಟ್ಟದ್ದಕ್ಕಾಗಿ ತಮಗೆ ತುಂಬಾ ಧನ್ಯವಾದಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಜಿ. ಹಾಲಪ್ಪ (ಚನ್ನಗಿರಿ).—ಸನ್ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ಇರುವ ಬೇಡಿಕೆಗಳನ್ನು ವಿರೋಧಿಸುತ್ತಾ ನಾಲ್ಕು ಮಾತುಗಳನ್ನು ಆಡಬೇಕೆಂದು ಬಯಸುತ್ತೇನೆ. ಮಾನ್ಯ ಸದಸ್ಯರು ಅನೇಕರು ಎಲ್ಲಾ ವಿಚಾರಗಳನ್ನೂ ಹೇಳಿದ್ದಾರೆ. ನಾನು ನಮ್ಮ ತಾಲ್ಲೂಕಿನ ಬಗ್ಗೆ ಈ ಇಲಾಖೆ ಎಷ್ಟರಮಟ್ಟಿಗೆ ಕೆಲಸ ಮಾಡಿದೆ ಎಂಬುದನ್ನು ನಾಲ್ಕು ಮಾತುಗಳಿಂದ ಹೇಳುತ್ತೇನೆ. ನಮ್ಮ ತಾಲ್ಲೂಕು ಒಂದು ಲಕ್ಷ 80 ಸಾವಿರ ಪ್ರಜಾಸಂಖ್ಯೆ ಇರುವ ಪ್ರದೇಶವಾದರೂ ಆ ತಾಲ್ಲೂಕಿನಲ್ಲಿ ಸಾರಿಗೆ ರಸ್ತೆಗಳು ಚೆನ್ನಾಗಿಲ್ಲ. ಸುಮಾರು 20-30 ವರ್ಷಗಳ ಹಿಂದೆ ಡಿಸ್ಟ್ರಿಕ್ಟ್ ಬೋರ್ಡ್ ಮಾಡಿದಂಥ ರಸ್ತೆಗಳ ಬಗ್ಗೆ ಸರ್ಕಾರ ಒಂದು ಕಾಸು ದಮ್ಮಡಿ ಖರ್ಚುಮಾಡಿಲ್ಲ. ತಾಲ್ಲೂಕಿನಲ್ಲಿ ರಸ್ತೆ ಸೌಕರ್ಯ ಮಾಡುವುದು ಬಹಳ ಮುಖ್ಯ. ರಸ್ತೆಗಳ ಬಗ್ಗೆ ಈ ಇಲಾಖೆ ಅಷ್ಟು ಉದಾಸೀನಮಾಡುವುದು ಸರಿಯಲ್ಲ. ರಸ್ತೆ ರಿಪೇರಿಮಾಡುವುದಕ್ಕೂ ಮತ್ತು ಸೇತುವೆಗಳನ್ನು

ಕಟ್ಟುವುದಕ್ಕೂ ಮೂರು ಕಾಸೂ ಕೂಡ ಖರ್ಚುಮಾಡುತ್ತಾ ಇಲ್ಲ. ದುಮ್ಮಿ-ತ್ಯಾವಣಿಗೆ ರಸ್ತೆ, ಹಿರೇಹಳ್ಳ ಸೇತುವೆ ಬಗ್ಗೆ ಒಂದು ಕಾಸನ್ನೂ ಖರ್ಚುಮಾಡಿಲ್ಲ. ನಲ್ಲೂರು ಮತ್ತು ಚಿಕ್ಕಜಾಜೂರು—ಇವು ಕಮರ್ಷಿಯಲ್ ಲೈನ್ಸ್ ಆಗಿರುವುದರಿಂದ ಹೊಳಲಕೆರೆ ತಾಲ್ಲೂಕುವರೆಗೆ ಮಾಡಿದ್ದಾರೆ. ಆದರೆ ನಮ್ಮ ತಾಲ್ಲೂಕಿನಲ್ಲಿ ಅರ್ಧಂಬರ್ಧ ಕೆಲಸಮಾಡಿ ದುಡ್ಡು ವ್ಯರ್ಥ ಆಗಿದೆ. ಆದಷ್ಟು ಜಾಗ್ರತೆಯಾಗಿ ಆ ರಸ್ತೆಗಳ ಕೆಲಸವನ್ನು ಪೂರ್ತಿಮಾಡಬೇಕು. ನಮ್ಮ ತಾಲ್ಲೂಕಿನಲ್ಲಿ ದೊಡ್ಡ ದೊಡ್ಡ ಕೆರೆಗಳು ವಿಪರೀತವಾಗಿವೆ. ಅವುಗಳ ರೆಸ್ಟೊರೇಷನ್ ವರ್ಕ್ಸ್ ಬಗ್ಗೆ ಸಂಬಂಧಪಟ್ಟ ಇಲಾಖೆಯವರು ಗಮನಕೊಟ್ಟಿಲ್ಲ. ನಮ್ಮ ಅಧಿಕಾರಿಗಳಿಗೆ ನಮ್ಮ ತಾಲ್ಲೂಕಿನಲ್ಲಿರತಕ್ಕ ಕೆರೆಗಳ ಹಾಗೂ ರಸ್ತೆಗಳ ಕಡೆಗಳಲ್ಲಿ ಅಡ್ಡಾಡಿ ನೋಡುವ ಅಭ್ಯಾಸವಿಲ್ಲ. ಕೆಲವು ಅಧಿಕಾರಿಗಳಿಗೆ ಅವರ ಕೆಲಸಗಳಮೇಲೆ ನಿಗಾ ಇಲ್ಲದಿದ್ದರೂ ಕ್ಲಬ್‌ಗಳ ಮೇಲೆ ನಿಗಾ ಜಾಸ್ತಿಯಾಗಿದೆ. ನಮ್ಮ ತಾಲ್ಲೂಕಿನಲ್ಲಿ ಅಡಕೆ ತೋಟದ ಗದ್ದೆಗಳಿಗೆ ಅನುಕೂಲವಾಗತಕ್ಕ ದೊಡ್ಡ ದೊಡ್ಡ ಕೆರೆಗಳಿವೆ. ಅವುಗಳಲ್ಲಿ ತಾವರೆ ಕೆರೆ ಕೆರೆ, ಮುದಿಗೆರೆ ಕೆರೆ ಬಸಪ್ಪನ ಟ್ಯಾಂಕ್—ಇವು ಅಡಿಕೆ ತೋಟ ಇರುವ ಕಡೆ ಇರತಕ್ಕ ಕೆರೆಗಳು. ಇವನ್ನು ರೆಸ್ಟೋರ್ ಮಾಡಬೇಕೆಂದು ರೈತರು ಅಹವಾಲ್ ಕೊಟ್ಟರೂ ಸರ್ಕಾರ ಇದುವರೆಗೂ ಉದಾಸೀನವಾಗಿಯೇ ಇದೆ. ಮುದಿಗೆರೆ ಟ್ಯಾಂಕನ್ನು ಇನ್ನೂ ರೆಸ್ಟೋರ್ ಮಾಡಿಲ್ಲ. ಇನ್ನೊಂದು ಮುಖ್ಯ ವಿಚಾರ. ಶಾಂತಿಸಾಗರ ಟ್ಯಾಂಕ್ ಬಗ್ಗೆ ಲೋಕೋಪಯೋಗಿಶಾಖೆಯ ಸಚಿವರು ಒಪ್ಪಿಕೊಂಡಿದ್ದಾರೆ. ಅಲ್ಲಿ ನೀರಾವರಿ ಪ್ರವಾಹದಿಂದ ಬಹಳ ತೊಂದರೆಯಾಗಿರುವುದರಿಂದ 13 ಕೆರೆಗಳನ್ನು ಕಟ್ಟಲಾಗುತ್ತದೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅಲ್ಲಿ 6 ಸಾವಿರ ಚಿಲ್ಲರೆ ಎಕರೆ ನೀರಾವರಿಯಾಗುತ್ತದೆ. ಕೆಲವು ಕೆಲಸಗಳು ಈಗ ಶುರುವಾಗಿವೆ. ಇನ್ನು ಕೆಲವು ಕೆಲಸಗಳು ಶುರುವಾಗಿಲ್ಲ. ಆದರೂ ಕೆರೆಯ ಕೆಲಸ ಬಹಳ ತಡವಾಗಿದೆ. ಅದರಿಂದ ಅವು ಈಗ ನಿರುಪಯುಕ್ತವಾಗಿವೆ. 56–57 ಚದುರಮೈಲಿ ಇರುವ ವಿಸ್ತೀರ್ಣದಲ್ಲಿ ಅಚ್ಚುಕಟ್ ಆಗಿರುವುದು ಕೇವಲ 2–3 ಸಾವಿರ. ಇನ್ನು ಶಾಂತಿಸಾಗರದಲ್ಲಿ ಸಿಲ್ಟ್ ಕೂತು ಕೆರೆಯ ಆಳ ಕಡಿಮೆಯಾಗಿದೆ. ಈ ಕೆರೆಗೆ ಹೊಸದುರ್ಗ, ಹೊಳಲ್‌ಕೆರೆ ಮತ್ತು ಚನ್ನಗಿರಿ ತಾಲ್ಲೂಕುಗಳಿಂದ ನೀರು ಬರುತ್ತದೆ. ನಿರೀಕ್ಷಿಸಿದಷ್ಟು ಉಪಯೋಗ ಇದರಿಂದ ಯಾರಿಗೂ ಇಲ್ಲ. ಮಾನ್ಯ ಮಂತ್ರಿಗಳಿಗೆ ಈ ಕೆರೆಯ ಕೋಡಿಯನ್ನು 2 ಅಡಿಗಳಷ್ಟು ಇಳಿಸಿ ಎಂದು ಹೇಳಿದ್ದಕ್ಕೆ ಅದು ಸಾಧ್ಯವಿಲ್ಲವೆಂದು ಹೇಳುತ್ತಾರೆ. ಆಂಧ್ರಕ್ಕೆ ನೀರು ಹೋಗುತ್ತಿದೆಂಬುದಾಗಿ ಹೇಳುತ್ತಿದ್ದಾರೆ. ಅಮೇಲೆ ಇನ್ನೂ ಕೆರೆಗಳನ್ನು ಕಟ್ಟುತ್ತೇವೆ ಎಂಬುದಾಗಿ ಹೇಳುತ್ತಾರೆ. ಅದು ಫೀಜಿಬಲ್ ಆಗಿದೆಯೋ ಅಥವಾ ಅದು ಫೀಜಿಬಲ್ ಆಗಿಲ್ಲವೋ ಎಂಬ ದೃಷ್ಟಿ ಇಲ್ಲದೆ ಮೊದಲೇ 6 ಸಾವಿರ ಎಕರೆ ನೀರಾವರಿಗೆ ನೀರು ಸಿಗುತ್ತದೆಂದು ಹೇಳಿದ್ದಾರೆ. ಪ್ರವಾಹಗಳಿಂದ 20–30 ಹಳ್ಳಿಗಳಿಗೆ ಆಗುವ ತೊಂದರೆ ತಪ್ಪಿ ಹೋಗುತ್ತದೆಂದು ಹೇಳಿದ್ದಾರೆ. ಇದಕ್ಕಾಗಿ ಒಂದು ತಜ್ಞರ ಸಮಿತಿಯನ್ನು ನೇಮಕ ಮಾಡಬೇಕು. ಇರತಕ್ಕ ಕೆರೆಗಳನ್ನು ರೆಸ್ಟೋರ್ ಮಾಡಬೇಕು. ಕೋಡಿ ಇಳಿಸಬೇಕಾಗಿದೆ. ಅದರ ಬಗ್ಗೆ ತಜ್ಞರ ಸಮಿತಿಯಿಂದ ಒಂದು ವರದಿಯನ್ನು ತರಿಸುವುದು ಉತ್ತಮವೆಂದು ನನ್ನ ಸಲಹೆ. ಭದ್ರಾ ಪ್ರಾಜೆಕ್ಟ್‌ನಲ್ಲಿ ಇರ್ರಿಗೇಷನ್ ಚೆನ್ನಾಗಿ ಆಗಿದೆ. ಇದರಲ್ಲಿ ಕೆಲವು ಇರ್ರಿಗೇಷನ್ನು ಟ್ರಾಕ್ ರೋಡ್ಸ್ ಇನ್ನೂ ಆಗಿಲ್ಲ. ಸುಮಾರು ನಾಲ್ಕೈದು ಸಾವಿರ ಎಕರೆಗಳಷ್ಟು ನೀರಾವರಿಯಾಗುವಂಥ ಅನುಕೂಲ ಅಲ್ಲಿ ಇದೆ. ಕೋಗಲೂರು–ಆಲೂರು ರಸ್ತೆ ನಲ್ಕುದುರೆಯಿಂದ ದೊಡ್ಡಗಟ್ಟಕ್ಕೆ ಹೋಗುವ ರಸ್ತೆಯ ನಡುವೆ ಒಂದು ಹಳ್ಳ ಬರುತ್ತದೆ. ಅಂತಹ ಹಳ್ಳವನ್ನು ಹೆಂಗಸರು, ಮಕ್ಕಳು ದಾಟುವುದಕ್ಕೆ ಆಗುವುದಿಲ್ಲ. ಕೆಲವು ಕಡೆಗಳಲ್ಲಿ ಚಾನಲ್‌ಗಳಲ್ಲಿ ನೀರು ಹರಿಯುತ್ತಿಲ್ಲವೆಂದು ಅವುಗಳ ದುರಸ್ತಿಗಾಗಿ ಕಳುಹಿಸಿದ್ದೇವೆಂದು ಹೇಳಿದರು. ಇರ್ರಿಗೇಷನ್ ಟ್ರಾಕ್ಟ್ ವರ್ಕ್ಸ್‌ನ್ನು ಅಪ್ರೂವ್ ಮಾಡಿದ್ದರೆ 4–5 ಸಾವಿರ ಎಕರೆ ಜಮೀನು ಸಾಗು ಮಾಡಬಹುದಾಗಿತ್ತು. ಹಳ್ಳದ ಆಚೆಕಡೆ, ಮತ್ತು ಈಚೆಕಡೆ ಇರತಕ್ಕ ಜಮೀನುಗಳನ್ನು ಜನರು ದಾಟುವುದಕ್ಕಾಗುವುದಿಲ್ಲ. ಸರ್ಕಾರದವರು ಅದನ್ನು ಆದಷ್ಟು ಜಾಗ್ರತೆ ಮಾಡಬೇಕೆಂದು ನನ್ನ ವಿನಂತಿ. ಈ ಬಗ್ಗೆ ಒಂದು ವಿಷಯವನ್ನು ಹೇಳಬೇಕೆಂದು ನನಗನ್ನಿಸುತ್ತದೆ. ಲಕ್ಕವಳ್ಳಿ ಛಾನಲ್‌ಗೆ ಬಸವಾಪಟ್ಟಣದ ಬಳಿ ಕಟ್ಟಿರುವ ಅಕ್ವಿಡಕ್ಟ್ ಕುಸಿದುಬಿದ್ದುಹೋಯಿತು. ಕಾರಣ ಗೊತ್ತಿಲ್ಲ ನಾನು ಹೋಗಿ ನೋಡಿದ್ದೇನೆ. ಅಲ್ಲಿ ಮಾಡಿರುವ ಕೆಲಸ ಎಷ್ಟು ದುರುಪಯೋಗವಾಗಿದೆಯೆಂಬುದು ಗೊತ್ತಾಗುತ್ತದೆ. Even a layman can understand that no cement is used for that work. ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ಬಗ್ಗೆ ಒಂದು ಪತ್ರವನ್ನು ಬರೆದಿದ್ದೇನೆ. ಆ ಕಂಟ್ರಾಕ್ಟರ್ ಯಾರು, ಏನಾದರೂ ಹಣ ಕೊಟ್ಟಿದ್ದೀರಾ, ಆ ಕಂಟ್ರಾಕ್ಟರಿಗೆ ಖಂಡಿತ ಹಣ ಕೊಡಬೇಡಿ ಎಂಬುದಾಗಿ ಪತ್ರ ಬರೆದಿದ್ದೇನೆ. ಅರಸಿನಗಟ್ಟದ ಬಳಿ ಚಾನಲ್‌ಗೆ ಬಿಡಗಂಡಿ ಚಾನಲ್ ಕಟ್ಟಿದ್ದಾರೆ. ಅಲ್ಲಿಂದ ಬಂದಂಥ ನೀರು ಶಾಂತಿಸಾಗರಕ್ಕೆ ಹೋಗುತ್ತದೆ. ಇದರಿಂದ ನೀರು ಹೋದರೆ ಬಹಳ ತೊಂದರೆಯಾಗುತ್ತದೆ. ಆ ಚಾನಲ್‌ಗೆ

(ಶ್ರೀ ಎಚ್. ಜಿ. ಹಾಲಪ್ಪ)

ಕ್ಲೇ ಉಪಯೋಗಿಸಿ ಸುಮ್ಮನೆ ಸಿಮೆಂಟ್ ಮಾತ್ರ ಅದಕ್ಕೆ ಉಪಯೋಗಿಸಿದೆ ಎಂಬುದಾಗಿ ಹೇಳಿ ಬಿಲ್ ಕೊಟ್ಟಿದ್ದಾನೆ. ಅವನಿಗೆ ಖಂಡಿತವಾಗಿ ಪೇಮೆಂಟ್ ಮಾಡಬೇಡಿ. ಆ ಕಂಟ್ರಾಕ್ಟರ್ ಬಗ್ಗೆ ತೀವ್ರ ವಿಚಾರ ನಡೆಯಬೇಕು. ಫೈನಲ್ ಬಿಲ್ ಪೇ ಮಾಡುವಾಗ ಸರಿಯಾಗಿ ವಿಚಾರಣೆ ಮಾಡಿ ಕೊಡಬೇಕೆಂದು ನನ್ನ ಮನವಿ.

ಇನ್ನು ನಮ್ಮ ತಾಲ್ಲೂಕಿನಲ್ಲಿ 1200 ಐ.ಪಿ. ಸೆಟ್ಟುಗಳಿವೆ. ಸುಮಾರು ಐದಾರು ತಿಂಗಳು ಗಳಿಂದಲೂ ವಿದ್ಯುಚ್ಛಕ್ತಿ ಸರಬರಾಜು ಆಗುತ್ತಾ ಇಲ್ಲ. ಕೆಪಾಸಿಟಿ ಕಡಿಮೆಯಾಗಿದೆ. ಇನ್ನೊಂದನ್ನು ಲಂಗದಹಳ್ಳಿಗೆ ಟ್ರಾನ್ಸ್‌ಫರ್ ಮಾಡಬೇಕೆಂದು ಹೇಳಿದರೂ ಸರ್ಕಾರದವರು ಇದು ವರೆಗೆ ಅದಕ್ಕೆ ಪರಿಹಾರ ಕೊಟ್ಟಿಲ್ಲ. ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಇತ್ತ ಕಡೆ ಅದಷ್ಟು ಜಾಗ್ರತೆಯಾಗಿ ಸರ್ಕಾರದವರು ಗಮನಕೊಡಬೇಕು.

ಇನ್ನು ಉಗ್ರಾಣಿ ಹೋಬಳಿ ದುರುವಿಗೆರೆಯಲ್ಲಿ ಒಂದು ಕೆರೆ. ಅದಕ್ಕೆ 7 ಲಕ್ಷ ರೂಪಾಯಿ ಗಳ ಅಂದಾಜು ಆಗಿದೆ. ಅದರಿಂದ 1500 ಎಕರೆಗಳಿಗೆ ನೀರಾವರಿಯಾಗುತ್ತದೆ. 1962 ರಲ್ಲಿ ಸರ್ಕಾರ ಒಂದು ಹುಕುಂ ಕೊಟ್ಟಿದ್ದಾರೆ. ಅದು ವಾಣೀವಿಲಾಸ ಸಾಗರದ ಕ್ಯಾಚ್‌ಮೆಂಟ್ ಏರಿಯಾಕ್ಕೆ ಬರುತ್ತದೆ. ಆದ್ದರಿಂದ ಅಲ್ಲಿ ಕೆರೆ ಕಟ್ಟಕೂಡದೆಂದು ಹೇಳಿದ್ದಾರೆ. ಆ ಕೆರೆ ಜಾಗ ಇರುವುದು ಸಹ್ಯಾದ್ರಿ ಪರ್ವತಶ್ರೇಣಿಯಲ್ಲಿರತಕ್ಕ ಪ್ರದೇಶದಲ್ಲಿ. ಇದನ್ನು ಕಟ್ಟಿದರೆ ಏನೂ ತೊಂದರೆಯಾಗಲಾರದು. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಆಲೋಚನೆ ಮಾಡಿ ಆ ಒಂದು ಕೆರೆಯನ್ನು ಕೂಡಲೇ ಕಟ್ಟಿಸಿಕೊಡಬೇಕೆಂದು ನನ್ನ ವಿನಂತಿ.

ಇನ್ನು ಲೋಕೋಪಯೋಗಿ ಮಂತ್ರಿಗಳಲ್ಲಿ ಒಂದು ವಿಷಯವನ್ನು ಪ್ರಸ್ತಾಪಮಾಡುತ್ತೇನೆ. ಕರಪ್ಷನ್ ಹೇಗೆ ಬರುತ್ತದೆಂಬುದನ್ನು ಹೇಳುತ್ತೇನೆ. ಗಾಂಧೀಜಿಯವರು ಮೈಸೂರಿಗೆ ಬಂದಾಗ್ಗೆ ಇದನ್ನು ರಾಮರಾಜ್ಯವೆಂದು ಕರೆಯುತ್ತಿದ್ದರು. ಈಗ ಆ ರಾಮರಾಜ್ಯ ರಾವಣ ರಾಜ್ಯವಾಗುತ್ತಿದೆ. ನಮ್ಮ ತಾಲ್ಲೂಕಿನ ಲಕ್ಕವಳ್ಳಿ ಪ್ರಾಜೆಕ್ಟಿನಲ್ಲಿ ತೋಪೇನಳ್ಳಿ ಹತ್ತಿರ ಸ್ಟೋನ್ ರಿವೆಟ್‌ಮೆಂಡ್ ಕಟ್ಟಿದ್ದಾರೆ. ಆ ಸ್ಟೋನನ್ನು ಎಲ್ಲಿಂದ ತಂದಿದ್ದಾರೆ? ಅದಕ್ಕೆ 50 ಸಾವಿರ ರೂಪಾಯಿಗಳು ಆಗಿದೆ. "Information regarding Quarry is not available" ಎಂದು ಹೇಳಿದರೆ, ಪಿ.ಡಬ್ಲ್ಯು.ಡಿ. ಆಫೀಸಿನಲ್ಲಿ ರೆಕಾರ್ಡೇ ಇಲ್ಲ ಎಂದರೇನು ಗತಿ?

5·00 P.M.

ಹೀಗೆ ರೆಕಾರ್ಡುಗಳು ಕಳವಾಗಿ ಹೋದರೆ ದೇಶದ ಗತಿಯೇನಾಗುತ್ತದೆ? ನಿಜವಾಗಿಯೂ ಆ ಕಂಟ್ರಾಕ್ಟರನು ಆ ಕೆಲಸ ನಡೆಯುತ್ತಿದ್ದ ಸ್ಥಳಕ್ಕೆ 3—4 ಫರ್ಲಾಂಗಿನಲ್ಲಿ ಒಬ್ಬ ರೈತನ ಹೊಲ ದಲ್ಲಿ ಬಿದ್ದಿದ್ದ ಕಲ್ಲುಗಳನ್ನೆಲ್ಲಾ ಆ ಕೆಲಸಕ್ಕೆ ಅಲ್ಲಿಂದ ಸಾಗಿಸಿದ್ದಾನೆ. ಅವನು ಅಲ್ಲಿರತಕ್ಕ ಸ್ಥಳೀಯ ಇಂಜಿನಿಯರಿಂಗ್ ಅಧಿಕಾರಿಗಳಿಗೂ ಮತ್ತು ಅವರ ಮೇಲ್ಪಟ್ಟಿರತಕ್ಕ ಚೀಫ್ ಇಂಜಿನಿಯರ್, ಸೂಪರಿಂಟೆಂಡಿಂಗ್ ಇಂಜಿನಿಯರ್, ಎಗ್ಸಿಕ್ಯುಟೀವ್ ಇಂಜಿನಿಯರ್ ಹಾಗೂ ಸರ್ಕಾರ ಇಷ್ಟೆಲ್ಲಾ ಕಡೆಗೂ ಅರ್ಜಿಗಳನ್ನು ಕೊಟ್ಟು ಆ ಕಂಟ್ರಾಕ್ಟರಿಂದ ರಾಯಲ್ಟಿ ಕೊಡಿಸಬೇಕೆಂದು ಅರ್ಜಿಗಳನ್ನು ರಿಜಿಸ್ಟರ್ಡ್ ಪೋಸ್ಟ್ ಮೂಲಕ ಕಳುಹಿಸಿದ್ದಾನೆ. ಒಂದಕ್ಕೂ ಉತ್ತರವಿಲ್ಲ. ಆ ರೈತ ಮೊದಲು ರಿಜಿಸ್ಟರ್ಡ್ ಪೋಸ್ಟ್ ಮೂಲಕ ತಾ॥ 2-12-1963 ರಲ್ಲಿ ಒಂದು ಅರ್ಜಿಯನ್ನು ಕೊಟ್ಟನು ಅದು ಅವರಿಗೆ ತಾ॥ 7-12-1963 ರಲ್ಲಿ ತಲುಪಿದೆ. ಆ ನಂತರ ಅತನು ತಾ॥ 18-3-1963 ರಲ್ಲಿ ಇನ್ನೊಂದು ಅರ್ಜಿಯನ್ನು ಕೊಟ್ಟನು, ಅದು ಅವರ ಕೈಯನ್ನು ತಾ॥ 27-3-67 ರಲ್ಲಿ ಸೇರಿದೆ. ಅದಾದ ನಂತರ ಆ ರೈತನು ತಾ॥ .. ಆಗಸ್ಟ್ 1964 ರಲ್ಲಿ ಮತ್ತೊಂದು ಅರ್ಜಿಯನ್ನು ಕೊಟ್ಟನು. ಅದು ಅವರಿಗೆ ತಾ॥ 13-8-64 ರಲ್ಲಿ ತಲುಪಿದೆ. ಈ ಅರ್ಜಿಗಳನ್ನು P. W. D. ಮಂತ್ರಿಗಳಿಗೆ ಕೊಟ್ಟಿರುತ್ತೆ. ಹೀಗೆ ಆ ರೈತನು ಅಲ್ಲಿರತಕ್ಕ ಇಂಜಿನಿಯರಿಂಗ್ ಸ್ಥಳೀಯ ಅಧಿಕಾರಿಗಳನ್ನು ಹಿಡಿದು ರಾಜ್ಯದ ತುಟ್ಟತುದಿಯಲ್ಲಿರತಕ್ಕ ಮುಖ್ಯ ಮಂತ್ರಿಗಳಿಗೂ ಅರ್ಜಿಗಳನ್ನು ಕೊಟ್ಟು ವಿಚಾರಣೆ ಮಾಡಿ ಆತನಿಗೆ ಆ ಕಂಟ್ರಾಕ್ಟರನಿಂದ ಕಲ್ಲನ್ನು ತೆಗೆದುಕೊಂಡ ಬಗ್ಗೆ ರಾಯಲ್ಟಿ ಕೊಡಿಸಿಕೊಡಬೇಕೆಂದು ಪ್ರಾರ್ಥಿಸಿಕೊಂಡಿದ್ದರೂ ಅರ್ಜಿಗಳನ್ನು ಸರ್ಕಾರದವರೇ ಮುಚ್ಚಿಹಾಕಿ ಅತನನ್ನು ಷೀಲ್ಡ್ ಮಾಡು ತ್ತಿದ್ದಾರೆ. ಅರ್ಜಿಗಳೇ ಬಂದಿಲ್ಲ ಎಂದು ಮಂತ್ರಿಗಳು ಹೇಳುತ್ತಿದ್ದಾರೆ.

He is withholding the correct information from the House. He is wilfully shielding the officer.

ಅಲ್ಲಿ ಈ ರಿವೆಟ್‌ಮೆಂಟ್ ನಿರ್ಮಾಣ ಕಾರ್ಯಕ್ಕೆ 54 ಸಾವಿರ ರೂಪಾಯಿಗಳು ಖರ್ಚಾಗಿಲ್ಲ. ಅದಕ್ಕೆಲ್ಲಾ ಅಮ್ಮಮ್ಮಾ ಅಂದರೆ, 10 ಸಾವಿರ ಖರ್ಚಾಗಿದ್ದರೆ ಹೆಚ್ಚಾಯಿತು. ಇನ್ನುಳಿದ 44 ಸಾವಿರ ಪೋಲಾಗಿ ಹೋಗಿದೆ. It has been the song of the petitioner that this man has been doing havoc. The Superintending Engineer and Assistant Engineers are Officers. Inspite of that the P.W.D. Minister says that no such petitions are received. If this is the state of affairs I do not know where we should go.

ನಾನು ಈ ವಿಚಾರವನ್ನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ಅಲ್ಲಿ ಒಬ್ಬರಿಗೆ ಈಗಾಗಲೇ ಸರ್ಕಾರದವರು 50 ಸಾವಿರ ರೂಪಾಯಿಗಳನ್ನು ರಾಯಲ್ಟಿ ರೂಪದಲ್ಲಿ ಕೊಡಿಸಿದ್ದಾರೆ. ಹಾಗೆ ರಾಯಲ್ಟಿ ಪಡೆದವರು ಯಾರೆಂದರೆ, ಆತನ ಹೆಸರು ಎಚ್. ಎಸ್. ಚನ್ನಬಸಪ್ಪ ಎಂದು. ಬಹುಶಃ ಈತನು ಆ ಖಾದೀ ಬೋರ್ಡಿನ ಛೇರ್ಮನ್ನಿದ್ದಾರಲ್ಲಾ ಅವರ ತಮ್ಮನೆಂದು ಆತನಿಗೆ ರಾಯಲ್ಟಿ ಕೊಡಿಸಿ ಈ ಬಡ ರೈತನ ವಿಚಾರವನ್ನು ಮೂಲೆಗೆ ತಳ್ಳಿದ್ದಾರೆ. ಈ ರೀತಿಯಾಗಿ ಈ ದಿನ ಈ ಸರ್ಕಾರದಲ್ಲಿ ಬಹಳ ಅನ್ಯಾಯಗಳು ನಡೆಯುತ್ತಿವೆ. ಹೀಗೆ ಸರ್ಕಾರದಲ್ಲಿ ಲಂಚ ಅನ್ನುವುದು ತಾಂಡವವಾಡುತ್ತಿದೆ. ಒಂದು ಹಂಡೆಯಲ್ಲಿರತಕ್ಕ ಅನ್ನ ಬೆಂದಿದೆಯೇ ಇಲ್ಲವೇ ಅನ್ನುವುದನ್ನು ನೋಡಬೇಕಾಗಿದ್ದರೆ ಆ ಹಂಡೆಯಲ್ಲಿರತಕ್ಕ ಅನ್ನದ ಅಗುಳನ್ನೆಲ್ಲಾ ಹಿಸುಕಿ ನೋಡಬೇಕಾದ್ದಿಲ್ಲ. ಒಂದು ಅಗುಳನ್ನು ಹಿಸುಕಿದರೆ ಸಾಕು, ಅದು ಬೆಂದಿದೆಯೇ ಇಲ್ಲವೇ ಎಂಬುದು ಗೊತ್ತಾಗುವಂತೆ ಒಂದು ಕಡೆ ಹೀಗೆ ಲಂಚದ ಹಾವಳಿ ಇದೆ ಎನ್ನುವುದು ಕಂಡುಬಂದಾಗ ಅದು ದೇಶಾದ್ಯಂತವೂ ಇದೆ ಎಂಬುದನ್ನು ನಾವು ಸುಲಭವಾಗಿ ತಿಳಿಯಬಹುದು.

ನಾನು ಈಗ ಇನ್ನೊಂದು ಸಮಾಚಾರವನ್ನು ಈಗ ಈ ಸಭೆಯ ಗಮನಕ್ಕೆ ತರಬೇಕಾಗಿದೆ. ನಾನೂ ಮತ್ತು ಇದೇ ಸಭೆಯ ಸದಸ್ಯರಾದ ವೆಂಕಾನಾಯ್ಕ ಅವರೂ ಮೊನ್ನೆ ನಮ್ಮ ಕಮ್ಯುನಿಕೇಷನ್ ಮತ್ತು ಬಿಲ್ಡಿಂಗ್ ಶಾಖೆಯ ಚೀಫ್ ಇಂಜಿನಿಯರವರ ಆಫೀಸಿಗೆ ಹೋಗಿದ್ದೆವು. ನಾವು ಹೋದಾಗ ಅವರು ಆಫೀಸಿನಲ್ಲಿ ಇರಲಿಲ್ಲ. ಅವರು ಆಫೀಸಿನಲ್ಲಿಲ್ಲವೆಂದು ನಾವು ಹೊರ ಹೊರಟು ಬರುತ್ತಿದ್ದೆವು. ಅಷ್ಟರಲ್ಲೇ ಅವರು ಎಲ್ಲಿಗೋ ಹೋಗಿದ್ದವರು ಮತ್ತೆ ಆಫೀಸಿಗೆ ಬಂದರು. ಅಲ್ಲಿದ್ದವರು ಇವರೇ ಚೀಫ್ ಇಂಜಿನಿಯರ್ ಅಂತ ಹೇಳಿದರು. ಆಗ ನಾವು ಅವರಿಗೆ ಚೀಟಿ ಕಳುಹಿಸಿದೆವು. ಅವರು ಏನೋ ಕೆಲಸವಿತ್ತೆಂದು ಎಲ್ಲಿಗೋ ಹೋದರು. ನೀವು ನಾಳೆ ಬನ್ನಿ—ನನಗೇನೋ ಬಹಳ ಅರ್ಜೆಂಟ್ ಕೆಲಸವಿದೆ ಎಂದು ಹೇಳುವಷ್ಟು ಒಂದು ಸೌಜನ್ಯತೆ ಕೂಡ ಅವರಲ್ಲಿ ಇರಲಿಲ್ಲ. I was very much humiliated by the way in which he behaved. He has no courtesy to tell me to come tomorrow. If this is the attitude, what response he will have to a common man? ಅವರು ಏತಕ್ಕೆ ಅಷ್ಟು ಉದಾಸೀನತೆಯಿಂದ ವರ್ತಿಸಿದರು ಅಂದರೆ ಬಹುಶಃ ಅವರು ಪಿ. ಡಬ್ಲ್ಯು. ಡಿ. ಮಂತ್ರಿಗಳಿಗೆ ಸಂಬಂಧಿಕರೆಂದು ಹೇಳುತ್ತಿದ್ದಾರೆ. ಆ ಕಾರಣದಿಂದ ಅವರು ಅಷ್ಟು ಉದಾಸೀನತೆಯಿಂದ ವರ್ತಿಸಿದರೆಂದು ಕಾಣುತ್ತದೆ. ಅದು ಸಹಿಸಲಾರದಂಥ ಸನ್ನಿವೇಶ......I am saying this from my heart. I am sorry I have to state this on the floor of the House because his behaviour was very rude, and it is most uncultured way of treating an M.L.A. merely because he happens to be a relative......

ಶ್ರೀ ವೀರೇಂದ್ರ ಪಾಟೀಲ್.—ಈಗ ಮಾತನಾಡುತ್ತಿರುವ ಮಾನ್ಯ ಸದಸ್ಯರಾದ ಶ್ರೀ ಹಾಲಪ್ಪನವರಿಗೂ ನನಗೂ ಎಷ್ಟು ಸಂಬಂಧವಿದೆಯೋ ಅಷ್ಟೇ ಸಂಬಂಧ ನನಗೂ ಆ ಚೀಫ್ ಇಂಜಿನಿಯರುಗಳಿಗೂ ಇದೆ.

Sri N. G. HALAPPA.—My information may be wrong. But this is the way in which he behaved. ನಮ್ಮ ತಾಲ್ಲೂಕಿನ ರಸ್ತೆಗಳ ಬಗ್ಗೆ ನಮ್ಮಂಥ ಪಟ್ಟ ಅಧಿಕಾರಿಗಳು ನಿಗಾಕೊಟ್ಟಿಲ್ಲ. ಯಾವ ರಸ್ತೆಗಳೂ ಸಂಚಾರಕ್ಕೆ ಯೋಗ್ಯವಿಲ್ಲ. ಉದಾಹರಣೆಗೆ ದುರ್ಮಿತ್ಯಾವಣಿಗೆ ರಸ್ತೆ. ಈ ರಸ್ತೆಯಲ್ಲಿ ವಿಲೇಜ್ ಲಿಮಿಟ್ಟಿನಲ್ಲಿ ಸಹ ಟೂರ್ ಮಾಡಿಲ್ಲ. ನಲ್ಲೂರು, ಚಿಕ್ಕಜಾಜೂರು ರಸ್ತೆ ಬಹಳ ಮುಖ್ಯವಾದದ್ದು. ಈ ರಸ್ತೆಯ ಕೆಲಸ ಅಲ್ಲಲ್ಲೆ ಮಾಡಿ ಕೈಬಿಟ್ಟಿದ್ದಾರೆ. S.V.C. ರಸ್ತೆಗಳ ಪೈಕಿ ಚನ್ನಗಿರಿಯಿಂದ ಕಗತೂರಿಗೆ ಹೋಗುವ ರಸ್ತೆ ಹಾಗು ನೀತಿಗೆರೆಯಿಂದ ಹೊದಿಗೆರೆ ರಸ್ತೆಗಳು ಜಾನುವಾರುಗಳು ತಿರುಗಾಡುವುದಕ್ಕೂ ಯೋಗ್ಯವಲ್ಲ. ನಾನು ಇಲ್ಲಿಯವರೆಗೂ ಹೇಳಿರತಕ್ಕ ವಿಷಯಗಳೇನೇನಿವೆ ಅವುಗಳಿಗೆಲ್ಲಾ ಸಮರ್ಕವಾದ ಉತ್ತರವನ್ನು ಮಾನ್ಯ

(ಶ್ರೀ ಎಚ್. ಜಿ. ಹಾಲಪ್ಪ)

ಮಂತ್ರಿಗಳು ಒದಗಿಸಬೇಕೆಂದು ಹೇಳಿ ಇನ್ನು ಆ ತೋಪನಹಳ್ಳಿ ಮತ್ತು ಲಕ್ಕುವಳ್ಳಿ ಕಾಮುಗಾರಿಗಳ ವಿಷಯದಲ್ಲಿ ಹಣ ದುರುಪಯೋಗವಾಗಿರುವುದನ್ನು ಪತ್ತೆ ಮಾಡಬೇಕು ಅಲ್ಲಿ ಅಷ್ಟು ಹೆಚ್ಚಿನ ಹಣ ಖರ್ಚಾಗುವುದಕ್ಕೆ ಅವಕಾಶವಿಲ್ಲ ಎಂದು ಹೇಳಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿ ಕೊಟ್ಟ ಅಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಾಪೂಗೌಡ (ಶಹಾಪೂರ್).—ಮಾನ್ಯ ಅಧ್ಯಕ್ಷಿಣಿಯುರೇ, ಮಾನ್ಯ ಲೋಕೋಪಯೋಗಿ ಶಾಖೆಯ ಸಚಿವರು ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಅನುಮೋದಿಸುತ್ತ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ.

ನೆನ್ನೆಯ ದಿವಸದಿಂದ ಇಲ್ಲಿ ಈ ಬೇಡಿಕೆಯ ಬಗ್ಗೆ ಅನೇಕ ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ಹೇಳಿದ್ದಾರೆ. ನಮ್ಮ ವಿರೋಧಪಕ್ಷದ ಸದಸ್ಯರನೇಕರು ತಾವೇನು ಒಂದು ಈ ಲೋಕೋಪಯೋಗಿ ಶಾಖೆಯಿಂದ ಆಸೆಗಳನ್ನಿಟ್ಟುಕೊಂಡಿದ್ದರೋ ಆ ಆಸೆಗಳೆಲ್ಲಾ ಇನ್ನಿತರ ಇಲಾಖೆಗಳ ಬಗ್ಗೆಯೂ ಇದ್ದೇಇರುತ್ತವೆ. ಹಾಗೆ ಆಸೆ ಇಲ್ಲದ ಇಲಾಖೆಯೇ ಇಲ್ಲವೆನ್ನಬಹುದು. ಆದರೆ ವಿರೋಧಪಕ್ಷದವರು ಈ ಇಲಾಖೆಯಲ್ಲಿ ಹಣ ಬಹಳ ವ್ಯರ್ಥವಾಗಿಹೋಗಿದೆ, ಇದರಲ್ಲಿ ಲಂಚದ ಹಾವಳಿ ಜಾಸ್ತಿಯಾಗಿದೆ ಎಂದು ಹೇಳಿದ್ದಾರೆ. ಆದರೆ ಅವರು ಯಾರು ಕಳೆದ 10 ವರ್ಷಗಳಿಂದ ಈ ಲೋಕೋಪಯೋಗಿ ಶಾಖೆ ದೇಶದಲ್ಲಿ ಯಾವ ಪ್ರಗತಿಯನ್ನೂ ಸಾಧಿಸಿಲ್ಲ ಎಂದು ಅವರು ಹೇಳಲಿಲ್ಲ, ಇದನ್ನು ಅಲ್ಲಗಳೆದೂ ಇಲ್ಲ. ಸಾಮಾನ್ಯವಾಗಿ ಈ ಖಾತೆಯ ಮೂಲಕ ದೇಶದ ನಾನಾ ಭಾಗವಲ್ಲಿ ಅನೇಕ ರಸ್ತೆಗಳೂ, ಸೇತುವೆಗಳೂ ಮತ್ತು ಕೆರೆ ಕಟ್ಟೆಗಳೂ, ಅಣೆಕಟ್ಟೆಗಳೂ ಆಗಿವೆ. ಈ ಭಾಗದಲ್ಲಿ ಸಾಕಷ್ಟು ಪ್ರಗತಿಯನ್ನು ನಾವು ಸಾಧಿಸಿದ್ದೇವೆ. ನಮ್ಮ ಜನರ ಆರ್ಥಿಕ ಜೀವನ ಮತ್ತು ಸಾಮಾಜಿಕ ಜೀವನದಲ್ಲಿ ಬಹಳ ಬದಲಾವಣೆಯಾಗಿದೆ. ನಮ್ಮಲ್ಲಿ ಈ ದಿವಸ 55 ಸಾವಿರ ಕಿಲೋಮೀಟರಿನಷ್ಟು ರಸ್ತೆ ಕೆಲಸ ನಡೆದಿದೆ. ಇದು ಇನ್ನೂ ಹೆಚ್ಚುವ ಸಂಭವಗಳಿವೆ. ಇನ್ನು ನಮಲ್ಲಿ ಸುಮಾರು ಒಂದು ಸಾವಿರ ಅಡಿಗೊಂದರಂತೆ ಸೇತುವೆಗಳನ್ನಿಟ್ಟುಕೊಂಡರೆ ಇಲ್ಲಿ ಹೊಸದಾಗಿ 300-400 ಸೇತುವೆಗಳಿವೆ. ಇನ್ನು ವಿದ್ಯುಚ್ಛಕ್ತಿಯ ವಿಷಯಕ್ಕೆ ಬಂದರೆ ಇಲ್ಲಿ ಹಳ್ಳಿಹಳ್ಳಿಗೂ ಪಂಪ್‌ಸೆಟ್ಟುಗಳನ್ನು ಒದಗಿಸಿದ್ದಾರೆ. ಒಂದೊಂದು ಹೋಬಳಿಯಲ್ಲೂ ನಾಲ್ಕೈದು ಸಾವಿರ ಪಂಪ್ ಸೆಟ್ಟುಗಳನ್ನು ಕೊಟ್ಟಿದಾರೆ. ಅದಕ್ಕೆಲ್ಲಾ ವಿದ್ಯುತ್ತನ್ನು ಒದಗಿಸಿದ್ದಾರೆ. ಹೀಗೇ ಒಕ್ಕಲಗನಿಗೆ ಹೆಚ್ಚು ಬೆಳೆಯನ್ನು ಬೆಳೆಯಲು ಅನುಕೂಲ ಮಾಡಿದ್ದಾರೆ. ಅನೇಕ ದೊಡ್ಡ ಪ್ರಾಜೆಕ್ಟ್‌ಗಳನ್ನು ಕಟ್ಟಿಸಿದ್ದಾರೆ. ನೀರಾವರಿ ಕಾಮುಗಾರಿಗಳನ್ನು ಸಾಕಷ್ಟು ಮಾಡಿಸಿದ್ದಾರೆ. ಹೀಗಿರುವುದರಿಂದ ನಾವು ಪ್ರತಿಯೊಂದು ಇಲಾಖೆಯ ಮೂಲಕ ಸಾಧಿಸಿರತಕ್ಕ ಪ್ರಗತಿಯನ್ನು ಯಾರೂ ಅಲ್ಲಗಳೆದಿಲ್ಲ—ಇಲ್ಲಾ ಎಂದು ಹೇಳಿಲ್ಲ. ಆದರೆ ನಾವು ಎಷ್ಟನ್ನು ಸಾಧಿಸಬೇಕಾಗಿತ್ತೋ ಅಷ್ಟನ್ನು ಸಾಧಿಸುವುದಕ್ಕಾಗಿಲ್ಲ. ಇನ್ನು ಸರ್ಕಾರದವರು ಈ ಖಾತೆಯಲ್ಲಿ ಆಗತಕ್ಕ ಲೋಪದೋಷಗಳನ್ನು ತಿದ್ದಿಕೊಂಡರೆ ಈ ಇಲಾಖೆ ಹತ್ತು ವರ್ಷಗಳಲ್ಲಿ ದೇಶಕ್ಕೆ ಬೇಕಾಗುವ ಆಹಾರವನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ.

ಇನ್ನು ಕೈಗಾರಿಕೆಗಳ ವಿಷಯದಲ್ಲೂ ಅಷ್ಟೇ. ನಮಗೆ ಸಾಧಿಸುವುದಕ್ಕೆಷ್ಟು ಸಾಧ್ಯವಿತ್ತೋ ಅಷ್ಟನ್ನೂ ಸಾಧಿಸಿದ್ದೇವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ ಈ ದಿವಸ ನಮ್ಮ ಮುಂದಿರತಕ್ಕ 1968-69ರ ಆಯವ್ಯಯದಲ್ಲಿ ಅದರಲ್ಲೂ ಈ ಲೋಕೋಪಯೋಗಿ ಶಾಖೆಯಲ್ಲಿ ಸರ್ಕಾರದವರ ದೃಷ್ಟಿಕೋನ ನೀರಾವರಿ ಕಾಮುಗಾರಿಗಳ ಕಡೆಗೆ ಬಹಳ ಕಡಮೆ ಆಗಿದೆ ಎಂದು ಹೇಳುತ್ತೇನೆ. ದೇಶಾದ್ಯಂತವೂ ಇರತಕ್ಕ ರೈತರು ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯುವಂತಾಗಬೇಕಾದರೆ ಅವರಿಗೆ ನೀರಾವರಿ ಸೌಕರ್ಯಗಳನ್ನು ಹೆಚ್ಚು ಹೆಚ್ಚಾಗಿ ಕಲ್ಪಿಸಬೇಕು. ಮೇಜರ್ ಮತ್ತು ಮೈನರ್ ಇರಿಗೇಷನ್ ಬಾಬುಗಳಿಗೆ ಹೆಚ್ಚಿನ ಗಮನ ಕೊಡಬೇಕು. ಕೆರೆ ಬಾವಿಗಳಿಗೆ ಹೆಚ್ಚಿನ ಹಣವನ್ನು ಒದಗಿಸಬೇಕಾಗಿತ್ತು. ನಮ್ಮ ರಾಜ್ಯದಲ್ಲಿ ಎಲ್ಲಿ ಕಡೆಯಲ್ಲೂ ಆಹಾರಕ್ಕೆ ಅಭಾವ ಉಂಟಾಗಿದೆ ಎಂದು ಎಲ್ಲರೂ ಹೇಳುತ್ತಿದ್ದಾರೆ. ಆದರೆ ಇದರಲ್ಲಿ ಒದಗಿಸಿರತಕ್ಕ ಹಣ ಸಾಲದು. ರೈತರು ಬೆಟರ್‌ಮೆಂಟ್ ಲೆವಿ ಕೊಡಬೇಕು, ಕೊಡುವುದಿಲ್ಲ ಎಂದು ಹೇಳುವುದಿಲ್ಲ. ರೈತರಿಗೆ ಮುಖ್ಯವಾಗಿ ನೀರು ಬೇಕಾಗಿದೆ. ಆ ರೀತಿ ನೀರನ್ನು ಒದಗಿಸುವುದಾದರೆ ರೈತ ಸಮೃದ್ಧಿಯಾಗಿ ಬತ್ತ ಬೆಳೆದು, ಫಾಯಿದೆ ಪಡೆಯುತ್ತಾನೆ. ಈ ಯೋಚನೆಯನ್ನು ಸರ್ಕಾರದವರು ಮಾಡಬೇಕು. ಕೆರೆ, ಬಾವಿ, ಚಾನಲ್ ಯಾವುದೇ ಮುಖಾಂತರವಾಗಲೀ ಬೆಟರ್‌ಮೆಂಟ್ ಲೆವಿ ಹಾಕಿ, ಆದರೆ ರೈತರಿಗೆ ನೀರಾವರಿ ಸೌಲಭ್ಯವನ್ನು ಮಾತ್ರ ಒದಗಿಸಿಕೊಡಬೇಕು. ಮತ್ತು 1966ರಿಂದ 67ರವರೆಗೆ 71 ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಮಾಡಬೇಕೆಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಆ ಲಿಫ್ಟ್ ಇರಿಗೇಷನ್ ಯೋಜನೆಗೆ ಬೇಕಾದಂತಹ ಮೆಷೀನ್ ವಗೈರೆ

ಏನು ಸಾಮಾನುಗಳು ಬೇಕೋ ಅದನ್ನೆಲ್ಲಾ ತರಿಸಿ ಆ ಯೋಜನೆಗಳನ್ನು ಕಾರ್ಯಗತ ಮಾಡಬೇಕು. ಈ ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಸಹಕಾರ ಸಂಘಗಳ ಮುಖಾಂತರ ಮಾಡಿಸುತ್ತೇವೆಂದು ಹೇಳಿದ್ದಾರೆ. ಈ ಸಹಕಾರ ಸಂಘಗಳಿಂದ ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಮಾಡಿಸತಕ್ಕ ಪ್ರವೃತ್ತಿ ಏನಿದೆ ಇದರಿಂದ ಹೆಚ್ಚಿನ ಪ್ರಮಾಣದಲ್ಲಿ ಲಿಫ್ಟ್ ಇರಿಗೇಷನ್ ಯೋಜನೆ ಬಾರದೆ ಹೋಗಿದೆ. ಕೆಲವು ಕಡೆ, ಈ ಯೋಜನೆ ಸ್ಥಗಿತವಾಗಿದೆ. ಅದರ ಸಲುವಾಗಿ ಈ ಕೆಲಸವನ್ನು ವಕ್ಕಲುತನ ಖಾತೆಗೆ ವರ್ಗಾಯಿಸುವುದು ಒಳ್ಳೆಯದು. ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಪ್ರತ್ಯೇಕವಾದ ಸಿಬ್ಬಂದಿಯನ್ನು ಇಟ್ಟು ಈ ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಅವರ ಮುಖಾಂತರ ಕಾರ್ಯಗತ ಮಾಡುವಂತಹ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು. ಡಿಪ್ಲೋಮಾ ಪಾಸು ಮಾಡಿರುವವರು ಇವೊತ್ತು ಅನೇಕ ಜನ ಕೆಲಸ ಇಲ್ಲದೆ ತಿರುಗಾಡುತ್ತಿದ್ದಾರೆ. ಆದ್ದರಿಂದ ಅವರನ್ನು ಈ ಕೆಲಸಗಳಿಗೆ ನೇಮಿಸಿ ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಕಾರ್ಯಗತ ಮಾಡಿ ರೈತರಿಗೆ ನೀರಾವರಿ ಸೌಲಭ್ಯವನ್ನು ಒದಗಿಸಿದರೆ ಇದರಿಂದ ರೈತರಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಮತ್ತು ನಿರುದ್ಯೋಗಿಗಳಾಗಿರತಕ್ಕ ಡಿಪ್ಲೋಮಾ ಹೋಲ್ಡರುಗಳಿಗೆ ಉದ್ಯೋಗವೂ ದೊರೆತಂತಾಗುತ್ತದೆ. ಈ ದೃಷ್ಟಿಯಿಂದ ಸರ್ಕಾರದವರು ಲಿಫ್ಟ್ ಇರಿಗೇಷನ್ ಯೋಜನೆಯನ್ನು ಕಾರ್ಯಗತ ಮಾಡಿ ರೈತರಿಗೆ ನೀರಾವರಿ ವ್ಯವಸಾಯಕ್ಕೆ ಅನುಕೂಲಮಾಡಿಕೊಡಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ ಈ ರೀತಿ ನೀರನ್ನು ಕೊಡುವ ಕಾಲಕ್ಕೆ ಒಂದು ಮಾತನ್ನು ಮರೆಯಬಾರದು, ಅದು ಏನೆಂದರೆ, no profit, no loss basis ಮೇಲೆ ರೈತರಿಗೆ ನೀರನ್ನು ಒದಗಿಸುವ ವ್ಯವಸ್ಥೆಯನ್ನು ಮಾಡಬೇಕು. ಇಂಥಾ ಒಂದು ಸೌಲಭ್ಯವನ್ನು ಒದಗಿಸುವುದಾದರೆ ರೈತರಿಗೆ ಹೆಚ್ಚು ಆಹಾರ ಧಾನ್ಯವನ್ನು ಬೆಳೆಯುವುದಕ್ಕೆ ಶಕ್ತಿ ಬರುತ್ತದೆ ಬೆಳೆ ಸಾಕಷ್ಟು ಆದರೆ, ಬೆಟರ್‌ಮೆಂಟ್ ಲೆವಿಯಾಗಲೀ, ಇತರ ಯಾವ ವಾಟರ್ ಚಾರ್ಜ್ ಆಗಲೀ ಅದನ್ನು ಕೊಡುವುದಿಲ್ಲ ಎಂದು ರೈತ ಹೇಳಿಲ್ಲ. ಅವನಿಗೆ ಬೇಕಾಗಿರುವುದು ನೀರಾವರಿ ಸೌಲಭ್ಯ ದೊರೆತು ಸಾಕಷ್ಟು ಬೆಳೆಯನ್ನು ಅವನು ಬೆಳೆಯುವಂತಾಗಬೇಕು. ಇವೊತ್ತು ನಮ್ಮ ರಾಜ್ಯದಲ್ಲಿ ಅನೇಕ ನೀರಾವರಿ ಯೋಜನೆಗಳನ್ನು ಸರ್ಕಾರದವರು ಕೈಗೊಳ್ಳಬೇಕಾಗಿದೆ. ಅದಕ್ಕೆ ಹಣಬೇಕು ಆ ಹಣವನ್ನು ಸಾಲದ ಮುಖಾಂತರವಾಗಿ, ಕೇಂದ್ರದ ಮುಖಾಂತರವಾಗಿ ಅಥವಾ ಇತರ ಏಜೆನ್ಸಿ ಮುಖಾಂತರ ಒದಗಿಸಿಕೊಳ್ಳತಕ್ಕಂಥ ವ್ಯವಸ್ಥೆ ಮಾಡಬೇಕು. ಮತ್ತು ಆ ರೀತಿ ಪಡೆದಂತಹ ಹಣವನ್ನು ಯಾವ ರೀತಿ ಸದುಪಯೋಗಮಾಡಬೇಕು ಎನ್ನುವ ಕಲ್ಪನೆ ಬರಬೇಕಾಗುತ್ತದೆ. ಅಷ್ಟೇ ಅಲ್ಲ, ನಾವು ಸಾಲದ ಮುಖಾಂತರ ಪಡೆದಂತಹ ಹಣವನ್ನು ಉಪಯೋಗ ಮಾಡಿ ಅದರಿಂದ ಪ್ರತಿಫಲವನ್ನು ಪಡೆದು ಅದನ್ನು ರಿಟರ್ನ್‌ಮಾಡತಕ್ಕಂಥ ಶಕ್ತಿ ರಾಜ್ಯ ಸರ್ಕಾರಕ್ಕೆ ಎಲ್ಲಿಯವರೆಗೆ ಬರುವುದಿಲ್ಲ ಅಲ್ಲಿಯವರೆಗೆ ಯಾವುದೇ ಫೈನಾನ್ಸ್ ಏಜೆನ್ಸಿ ಸರ್ಕಾರಕ್ಕೆ ಹಣವನ್ನು ಸಾಲ ಕೊಡುವುದಕ್ಕೆ ತಯಾರಾಗುವುದಿಲ್ಲ. ಈಗ 10 ವರ್ಷಗಳಿಂದ ತುಂಗಭದ್ರಾ ಪ್ರಾಜೆಕ್ಟಿನ ಕೆಳಗಡೆ ಒಂದು ಎಕರೆ ನೀರಾವರಿ ಮಾಡುವುದಕ್ಕೆ ಸರ್ಕಾರದವರು ಒಂದು ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಅದರಿಂದ ಬರತಕ್ಕ ರಿಟರ್ನ್ ಬಹಳ ಕಡಿಮೆ. ಒಂದು ಎಕರೆಗೆ ಒಂದು ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಅದಕ್ಕೆ ಬಡ್ಡಿ ಮತ್ತು ಡೆಪ್ರಿಸಿಯೇಷನ್‌ಗಾಗಿ 90 ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಹೀಗಾದರೆ ಕೇಂದ್ರ ಸರ್ಕಾರದ ಮುಖಾಂತರವಾಗಲೀ ಅಥವಾ ಬೇರೆ ಏಜೆನ್ಸಿ ಮುಖಾಂತರವಾಗಲಿ ರಾಜ್ಯ ಸರ್ಕಾರದವರು ತಂದಂಥ ಸಾಲವನ್ನು ಯಾವ ರೀತಿ ವಾಪಸ್ಸು ಮಾಡಬೇಕು ಎಂಬುದನ್ನು ಯೋಚನೆಮಾಡಬೇಕಾಗುತ್ತದೆ. ಒಂದು ಎಕರೆಗೆ ಒಂದು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೆ 90 ರೂಪಾಯಿಗಳನ್ನು ಕೇವಲ ಬಡ್ಡಿ ಮತ್ತು ಡಿಪ್ರಿಸಿಯೇಷನ್ನಿಗೋಸ್ಕರ ಸಾಲ ಪಡೆದಂತಹ ಏಜೆನ್ಸಿಗೆ ಕೊಡಬೇಕಾಗುತ್ತದೆ ಎನ್ನುವ ಪರಿಸ್ಥಿತಿಯನ್ನು ವಿಚಾರ ಮಾಡಿದರೆ ಇವೊತ್ತು ತುಂಗಭದ್ರಾ ಅಣೆಕಟ್ಟಿನ ಕೆಳಗೆ ಒಂದು ಎಕರೆಗೆ ಕೇವಲ 12-15-20 ರೂಪಾಯಿಗಳನ್ನು ಸರ್ಕಾರದವರು ವಾಟರ್ ರೇಟ್ ಹಾಕಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬರಿಗೂ ಸಂತೋಷವನ್ನುಂಟುಮಾಡಬೇಕಾಗುತ್ತದೆ. ಸರ್ಕಾರದವರು ಈ ನೀರಾವರಿಯ ಬಗ್ಗೆ ಏನು ಹಣವನ್ನು ಇನ್‌ವೆಸ್ಟ್‌ಮಾಡಿದ್ದಾರೆಯೋ ಅದಕ್ಕೆ ಸರಿಯಾದ ಪ್ರತಿ ಫಲ, ರಿಟರ್ನ್ ಬಾರದೆ ಹೋದರೆ, ರಾಜ್ಯ ಸರ್ಕಾರದವರು ಮುಂದೆ ಮೇಜರ್ ನೀರಾವರಿ ಯೋಜನೆಗಳನ್ನು ಕೈಗೊಳ್ಳುವುದು ಹೇಗೆ? ಆ ಯೋಜನೆಗಳಿಗೆ ಯಾರು ಹಣವನ್ನು ಕೊಡುತ್ತಾರೆ? ಮುಂದೆ ಬರತಕ್ಕ ಶಕ್ತಿ ಸರ್ಕಾರಕ್ಕೆ ಬರುವುದಿಲ್ಲ.

ಇನ್ನು ನಮ್ಮ ಮೈಸೂರು ರಾಜ್ಯದಲ್ಲಿ ಆಹಾರದ ಪರಿಸ್ಥಿತಿಯಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಬೇಕಾದರೆ ಸರ್ಕಾರದವರು ದೊಡ್ಡ ಪ್ರಮಾಣದ ಯೋಜನೆಗಳಿಗೆ ಹೆಚ್ಚು ಗಮನವನ್ನು ಕೊಡಬೇಕು. ಈ ಯೋಜನೆಗಳಿಗೆ ಸರ್ಕಾರದವರು ಎಷ್ಟು ಗಮನವನ್ನು ಕೊಡಬೇಕಾಗಿತ್ತೋ

(ಶ್ರೀ ಬಾಪೂಗೌಡ)

ಅಷ್ಟು ಗಮನವನ್ನು ಕೊಟ್ಟಿಲ್ಲ. 1960ನೇ ಇಸವಿಯಿಂದ 1968ರ ತನಕ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಸಂಪೂರ್ಣವಾಗಿ ಕಾರ್ಯರೂಪಕ್ಕೆ ತರುವುದಕ್ಕೆ ಸಮರ್ಥರಾಗಿಲ್ಲ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಈ ಕೃಷ್ಣಾ ಮೇಲ್ದಂಡೆಯ ಯೋಜನೆಯನ್ನು 1960ನೇ ಇಸವಿಯಲ್ಲಿ ಕೇಂದ್ರ ಸರ್ಕಾರದ ಒಪ್ಪಿಗೆಯನ್ನು ಪಡೆದುಕೊಂಡು ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡದೇ ಇರುವ ಕಾಲಕ್ಕೆ ಇದರ ಬಗ್ಗೆ ಸರ್ಕಾರದವರು ಗಮನ ಕೊಟ್ಟಿಲ್ಲ ಎಂದು ಗೊತ್ತಾಗುತ್ತದೆ. ನಾವು ಎಷ್ಟೋ ಸಲ ಈ ಯೋಜನೆಯನ್ನು ಕಾರ್ಯಗತ ಮಾಡಬೇಕೆಂದು ಲೋಕೋಪಯೋಗಿ ಶಾಖೆಯ ಮಂತ್ರಿಗಳ ಲಕ್ಷ್ಯಕ್ಕೂ ಮತ್ತು ಮುಖ್ಯ ಮಂತ್ರಿಗಳ ಲಕ್ಷ್ಯಕ್ಕೂ ತಂದಿದ್ದೇವೆ. ಮತ್ತು ನಮ್ಮ ಕಡೆ ಪ್ರವಾಸ ಬಂದಾಗ ಕೂಡ ಹೇಳಿದ್ದೇವೆ. ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಕಾರ್ಯಗತ ಮಾಡುತ್ತೇವೆ ಎಂದು ಹೇಳಿದ್ದಾರೆ. ಆದರೂ ಸಹ ಅದು ಕಾರ್ಯಗತ ಆಗದೆ ಬರೀ ಕಾಗದದಲ್ಲಿ ಮಾತ್ರ ಉಳಿದಿದೆ ಕಾರ್ಯತಃ ಬಂದಿಲ್ಲ. ಈ ವರ್ಷ ಬಜೆಟ್ಟಿನಲ್ಲಿ ಆ ಯೋಜನೆಗೆ 50 ಲಕ್ಷ ರೂಪಾಯಿಗಳನ್ನು ಮಾತ್ರ ಒದಗಿಸಿದ್ದಾರೆ. ಕೃಷ್ಣಾ ಮೇಲ್ದಂಡೆಯ ಆಲಮಟ್ಟಿ ಮತ್ತು ನಾರಾಯಣಪುರದ ನಾಲ್ಕು ಸಬ್‌ಡಿವಿಜನ್‌ಗಳು ಇವೆ ಅವು ಗಳಿಗೆ 36 ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಉಳಿದ ಹಣವನ್ನು ಈ ಯೋಜನೆಗೆ ಯಾವ ರೀತಿ ಖರ್ಚು ಮಾಡುತ್ತಾರೋ ಗೊತ್ತಿಲ್ಲ. ಈಗ ಅಲ್ಲಿ ನಾಲ್ಕು ಸಬ್‌ಡಿವಿಜನ್‌ಗಳನ್ನು ಏರ್ಪಾಡು ಮಾಡಿ ದ್ದಾರೆ. ಆ ಸಬ್‌ಡಿವಿಜನ್‌ನಲ್ಲಿರತಕ್ಕ ಸೂಪರ್‌ವೈಜರ್‌ಗಳು, ಇಂಜಿನಿಯರ್‌ಗಳು ಹಣ ಇಲ್ಲದೆ ಇರು ವಾಗ ಏನು ಕೆಲಸ ಮಾಡಬೇಕು ಎಂಬುದನ್ನು ವಿಚಾರ ಮಾಡಬೇಕು. ಕೃಷ್ಣಾ ಮೇಲ್ದಂಡೆಯ ಯೋಜನೆಯನ್ನು ಇವೊತ್ತು ಸರ್ಕಾರದವರು ಯಾವ ದೃಷ್ಟಿಕೋಣದಿಂದ ನೋಡುತ್ತಿದ್ದಾರೋ ಆ ದೃಷ್ಟಿಕೋಣವನ್ನು ಬದಲಾಯಿಸಬೇಕು. ಮೈಸೂರು ರಾಜ್ಯದ ಒಂದು ಶಕ್ತಿ ಸಾಮರ್ಥ್ಯ ಇವೊತ್ತು ಪರೀಕ್ಷೆಗೆ ಬಂದಿದೆ. ನಮ್ಮ ರಾಜ್ಯ ಸರ್ಕಾರದವರಿಗೆ ಕೇಂದ್ರದಲ್ಲಿ ಯಾವುದೇ ಒಂದು ಪ್ರಭಾವ ಇಲ್ಲ ಎಂದು ನಾವು ಖಾತರಿಯಾಗಿ ಹೇಳಬೇಕಾಗುತ್ತದೆ. ಈಗ 8 ವರ್ಷಗಳಿಂದ ಆಂಧ್ರ ರಾಜ್ಯದವರಿಗೆ ನಾಗಾರ್ಜುನಾ ಸಾಗರಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇಲ್ಲಿಯವರೆಗೂ ನಮ್ಮ ರಾಜ್ಯ ಸರ್ಕಾರದವರು ಈ ಒಂದು ಮೇಜರ್ ಯೋಜನೆಗೆ ಕೇಂದ್ರ ಸರ್ಕಾರ ದಿಂದ ಹಣ ಸಹಾಯವನ್ನು ಪಡೆಯತಕ್ಕ ಶಕ್ತಿ ಈ ಸರ್ಕಾರಕ್ಕೆ ಬಂದಿಲ್ಲ. ಈ ಕೃಷ್ಣಾ ಮೇಲ್ದಂಡೆಯ ಯೋಜನೆಯಿಂದ ನೀರಾವರಿಯಾಗತಕ್ಕ ಪ್ರದೇಶ ಗುಲ್ಬರ್ಗ, ಬಿಜಾಪುರ ಮತ್ತು ರಾಯಚೂರು ಈ ಮೂರು ಜಿಲ್ಲೆಗಳಲ್ಲಿಯೂ ಬಹಳ ಭೂಮಿ ಇದೆ. ಈ ಯೋಜನೆಯು ಕಾರ್ಯಗತವಾದಲ್ಲಿ ಹೆಚ್ಚು ಆಹಾರವನ್ನು ಬೆಳೆಯತಕ್ಕ ಶಕ್ತಿ ಬರುತ್ತದೆ. ರಾಯಚೂರು ಜಿಲ್ಲೆಯ ಭೂಮಿ ಕಪ್ಪು ಭೂಮಿ ಇದೆ. ಅಲ್ಲಿಗೆ ನೀರು ಕೊಟ್ಟರೆ ಕೇರಳ, ಮೈಸೂರು ಆಂಧ್ರ ಮದ್ರಾಸ್ ಈ ಎಲ್ಲಾ ರಾಜ್ಯಗಳಿಗೂ ಆಹಾರಧಾನ್ಯವನ್ನು ಕೊಡತಕ್ಕ ಶಕ್ತಿ ಬರುತ್ತದೆ. 300 ಮೈಲಿ ಉದ್ದದ ಕೃಷ್ಣಾ ಯೋಜನೆಯನ್ನು ಪೂರ್ತಿ ಮಾಡದೇ ಹೋದರೆ ಕೃಷ್ಣಾನದಿಯಲ್ಲಿ ನಮಗೆ ಬರಬೇಕಾಗಿರತಕ್ಕ 600 ಟಿ.ಎಂ.ಸಿ.ಎಫ್‌ಟಿ. ನೀರು ನಮಗೆ ಸಿಕ್ಕುವುದಿಲ್ಲ. ಇದರ ಸಲುವಾಗಿ ಈ ಕೃಷ್ಣಾ ನದಿಯ ನೀರು ನಮಗೆ ಉಳಿಯು ತ್ತದೆಯೋ ಇಲ್ಲವೋ ಎನ್ನುವ ಸಂಶಯ ಬಂದಿದೆ.

ಇವತ್ತು ಸರ್ಕಾರದವರು ಮನಸ್ಸು ಮಾಡಿದರೆ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಕಟಿ ಮುಗಿಸುವುದು ಸಾಧ್ಯವಾಗದ ಮಾತಲ್ಲ. ರಾಯಚೂರು ಮುನಿಸಿಪಾಲಟಿಯವರಿಗೆ ಎಲ್. ಐ. ಸಿ. ಅವರು ಸುಮಾರು 75 ಲಕ್ಷ ರೂಪಾಯಿಗಳನ್ನು ಸಾಲ ಕೊಟ್ಟಿರುವುದರಿಂದ, ಈ ಯೋಜ ನೆಗೂ ಸಹ ಕೊಡುವುದಕ್ಕೆ ತಯಾರಿದ್ದಾರೆ. ಆದರೆ ಮುಂದೆ ಈ ಸರ್ಕಾರದವರಿಗೆ ಬಡ್ಡಿ ಕೊಡುವ ಸಾಮರ್ಥ್ಯವಿದೆಯೇ ಇಲ್ಲವೇ ಎಂಬುದನ್ನು ಯೋಚನೆ ಮಾಡುತ್ತಿದ್ದಾರೆ. ಕೋಟಿಗಟ್ಟಲೆ ಹಣ ವನ್ನು ಖರ್ಚು ಮಾಡಿ ಒಂದು ಯೋಜನೆ ತಯಾರು ಮಾಡಿದ ಮೇಲೆ, ಬಂಡವಾಳಕ್ಕೆ ತಕ್ಕ ಆದಾಯ ಬರದಿದ್ದರೆ ಯಾರು ಸಾಲ ಕೊಡುವುದಕ್ಕೆ ಮುಂದೆ ಬರುವುದಿಲ್ಲ. ವಿಶ್ವಬ್ಯಾಂಕ್‌ನವರು ಸಹ ಸಾಲ ಕೊಡುವುದಕ್ಕೆ ತಯಾರಿದ್ದರು, ಆದರೆ ಸಾಲವನ್ನು ತಿರುಗಿ ಕೊಡುವ ಶಕ್ತಿ ಈ ಸರ್ಕಾ ರಕ್ಕೆ ಇದೆಯೇ ಇಲ್ಲವೇ ಎಂಬುದನ್ನು ನೋಡಿಕೊಂಡು ಕೊಡಲಿಲ್ಲ. ಮೈಸೂರು ಸರ್ಕಾರದವರಿಗೆ ಸಾಲವನ್ನು ತೀರಿಸುವ ಸಾಮರ್ಥ್ಯವಿಲ್ಲದಿರುವುದರಿಂದ ಯಾರೂ ಸಾಲ ಕೊಡಲು ಮುಂದೆ ಬರುತ್ತಿಲ್ಲವೆಂದು ನುರಿತ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಗುಲ್ಬರ್ಗಿಗೆ ಪ್ರವಾಸ ಬಂದಾಗ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಜಾಗ್ರತೆ ಕಟ್ಟಿ ಮುಗಿಸು ತ್ತೇವೆಂದು ವಚನ ಕೊಟ್ಟಿದ್ದಾರೆ. ಅದರಂತೆ ಗುಲ್ಬರ್ಗ, ಬಿಜಾಪುರ ಮತ್ತು ರಾಯಚೂರಿನ ಜನತೆಯ ಹಿತದೃಷ್ಟಿಯಿಂದ ಈ ಯೋಜನೆಯನ್ನು ಕಟ್ಟಿ ಮುಗಿಸದಿದ್ದರೆ ಅಲ್ಲಿಯ ಜನರು ಉಗ್ರ ವಾದಂಥ ಕ್ರಮವನ್ನು ಕೈಕೊಳ್ಳುತ್ತಾರೆಂದು ಹೇಳುತ್ತೇನೆ. ತಾವು ಅಧಿಕಾರ ಸ್ಥಾನದಲ್ಲಿರು

ವುದರಿಂದ ಎಲ್. ಐ. ಸಿ. ಅವರಿಂದಾಗಲೀ, ಅಥವಾ ವಿಶ್ವಬ್ಯಾಂಕ್‌ನವರಿಂದಾಗಲೀ ಸಾಲವನ್ನು ಪಡೆದು ಈ ಯೋಜನೆಯನ್ನು ಆದಷ್ಟುಮಟ್ಟಿಗೆ 1968—69ರೊಳಗೆ ಕಟ್ಟಿ ಮುಗಿಸಿ ಕಾರ್ಯರೂಪಕ್ಕೆ ಬರುವಂತೆ ಏರ್ಪಾಡು ಮಾಡಬೇಕು. ಮಾನ್ಯ ಅರ್ಥಿಕ ಸಚಿವರು ತಮ್ಮ ಬಡ್ಜೆಟ್ ಭಾಷಣದಲ್ಲಿ 11 ಕೋಟಿ ರೂಪಾಯಿಗಳ ಹೆಚ್ಚುವರಿಯನ್ನು ತೋರಿಸಿದ್ದಾರೆ. ಅವರು ಕೊಟ್ಟಿರತಕ್ಕಂಥ ಅಂಕಿ ಅಂಶಗಳೆಲ್ಲಾ ಸರಿಯಾಗಿದ್ದು, ಈಗ ಹೆಚ್ಚುವರಿಯಾಗಿರುವ ಈ 11 ಕೋಟಿ ರೂಪಾಯಿಗಳನ್ನು ಕೃಷ್ಣಾ ಮೇಲ್ದಂಡೆಯೋಜನೆಗೆ ಕೊಟ್ಟರೆ ಸಾಕಷ್ಟು ಕೆಲಸವಾಗುತ್ತದೆ. ಮತ್ತು ಬೇರೆ ಬೇರೆ ಇಲಾಖೆಗಳಿಗೆ ಮಾಡುತ್ತಿರುವ ಖರ್ಚನ್ನು ಕಡಿಮೆ ಮಾಡಿ ಉಳಿದ ಹಣವನ್ನು ಈ ಯೋಜನೆಗೆ ಉಪಯೋಗಿಸಬಹುದು. ಪಾನನಿರೋಧವನ್ನು ರದ್ದು ಮಾಡಿದ್ದರಿಂದ ಅದರಿಂದ ಬರತಕ್ಕಂಥ ಆದಾಯವಾದ 11 ಕೋಟಿ ರೂಪಾಯಿಗಳನ್ನು ಸಹ ಈ ಯೋಜನೆಗೆ ಕೊಟ್ಟರೆ ಜಾಗ್ರತೆ ಆಗುತ್ತದೆ. 75 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ಈ ಯೋಜನೆಯನ್ನು ಕಟ್ಟಿಸಿದರೆ ಮುಂದೆ ನಾಲ್ಕು ವರ್ಷಗಳಲ್ಲಿ 10 ಲಕ್ಷ ಎಕರೆಗೆ ನೀರನ್ನು ಒದಗಿಸಬಹುದೆಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ನಾನಾ ಇಲಾಖೆಗಳಿಗೆ ಅನಾವಶ್ಯಕವಾಗಿ ಸುಮಾರು 42 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದಿರುವುದನ್ನು ಮತ್ತು ಕಟ್ಟಡಗಳಿಗಾಗಿ 3 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದಿರುವುದನ್ನು ತಪ್ಪಿಸಿ ಅದೇ ಹಣವನ್ನು ಈ ಯೋಜನೆಗೆ ವಿನಿಯೋಗಿಸುವುದು ಒಳ್ಳೆಯದು. ರೆವಿನ್ಯೂ ಸಾಲವನ್ನು ರೈತರಿಗೆ ಲಕ್ಷಗಟ್ಟಲೆ ಕೊಡುತ್ತಿರುವುದರಿಂದ ಏನೂ ಅನುಕೂಲವಾಗುತ್ತಿಲ್ಲ. ತಿರುಪತಿ ಕ್ಷೌರದಂತೆ ಪ್ರತಿಯೊಂದು ಬಾಬಿಗೂ ಸ್ವಲ್ಪ ಸ್ವಲ್ಪ ಹಣವನ್ನು ಖರ್ಚು ಮಾಡುವುದಕ್ಕಿಂತ, ಎಲ್ಲಾ ಹಣವನ್ನು ಈ ಒಂದು ಯೋಜನೆಗೆ ಖರ್ಚು ಮಾಡಿದರೆ ಅದರಿಂದ ಜನರಿಗೆ ಬಹಳ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಸರ್ಕಾರದವರು ಮನಸ್ಸು ಮಾಡಿದರೆ 75 ಕೋಟಿ ರೂಪಾಯಿಗಳನ್ನು ಒದಗಿಸಿಕೊಳ್ಳುವುದೇನೂ ದೊಡ್ಡ ವಿಷಯವಲ್ಲ. ಇದಕ್ಕಾಗಿ ಕೇಂದ್ರ ಸರ್ಕಾರದವರನ್ನು ಕಾಯಬೇಕಾಗಿಲ್ಲ. ನಮ್ಮ ಸರ್ಕಾರದವರೇ ಒಂದು ಧೃಡ ನಿರ್ಧಾರ ಕೈಕೊಳ್ಳುವುದು ಒಳ್ಳೆಯದು. ಸೋಷಿಯಲ್ ಎಜ್ಯುಕೇಷನ್ ಮುಂತಾದ ಅನಾವಶ್ಯಕವಾದಂಥ ಬಾಬುಗಳಿಗೆ ಖರ್ಚು ಮಾಡುತ್ತಿರುವುದನ್ನು ಆದಷ್ಟುಮಟ್ಟಿಗೆ ಕಡಿಮೆ ಮಾಡಿ, ಉಳಿದ ಹಣವನ್ನು ಈ ಯೋಜನೆಗೆ ಖರ್ಚು ಮಾಡಿ, ಆದಷ್ಟು ಬೇಗ ಈ ಯೋಜನೆಯನ್ನು ಕಾರ್ಯರೂಪದಲ್ಲಿರುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಜನರಿಗೆ ಉಪಯೋಗವಾಗಲಿ, ಹೆಚ್ಚು ಆಹಾರಧಾನ್ಯ ಬೆಳೆಯಲಿ ಎಂಬತಕ್ಕಂಥ ಮನಸ್ಸು ನಮ್ಮ ಮಂತ್ರಿಗಳಲ್ಲಿ ಬರಬೇಕು. ಈ ಯೋಜನೆಯನ್ನು ಜಾಗ್ರತೆ ಕಟ್ಟಿ ಮುಗಿಸದಿದ್ದರೆ ಕಲ್ಬುರ್ಗಿಯ ಜನರು ಉಗ್ರ ಕ್ರಮ ತೆಗೆದುಕೊಳ್ಳುತ್ತಾರೆಂದು ಮತ್ತೊಮ್ಮೆ ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬೋಳ ರಘುರಾಮಶೆಟ್ಟಿ (ಕಾರ್ಕಳ).—ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ವಿರೋಧಿಸುತ್ತಾ, ನಾನು ಕೆಲವು ಸೂಚನೆಗಳನ್ನು ಕೊಡಬೇಕೆಂದಿದ್ದೇನೆ. ಮುಖ್ಯವಾಗಿ ನಮ್ಮ ರಾಜ್ಯದಲ್ಲಿ ಬಹುತೇಕವಾಗಿ ಕೃಷಿಕರು ಇರುವುದರಿಂದ, ಇವರ ಕಡೆ ಹೆಚ್ಚಿನ ಗಮನಕೊಡಬೇಕಾಗಿದೆ. ಹಳ್ಳಿಗಳಲ್ಲಿ ವಾಸ ಮಾಡುತ್ತಿರುವ ಈ ಬಡ ರೈತರ ಅಭಿವೃದ್ಧಿಯಾಗಬೇಕಾದರೆ ಇವರಿಗೆ ಹೆಚ್ಚಿನ ಸೌಕರ್ಯವನ್ನು ಒದಗಿಸಿಕೊಡಬೇಕಾಗಿದೆ. ನಮ್ಮ ರಾಜ್ಯದಲ್ಲಿ ಆಹಾರ ಸಮಸ್ಯೆ ಬಹಳ ಗಂಭೀರವಾಗಿದೆ. ಈ ಆಹಾರ ಸಮಸ್ಯೆಯನ್ನು ಪರಿಹಾರ ಮಾಡಬೇಕಾದರೆ, ಮುಖ್ಯವಾಗಿ ನೀರಾವರಿ ಯೋಜನೆಗಳ ಕಡೆ ಗಮನ ಕೊಡಬೇಕಾಗಿದೆ. ಯಾವಾಗಲೂ ಸರ್ಕಾರದವರು ನೀರಾವರಿ ವಿಷಯ ಮಾತನಾಡುವಾಗ ದೊಡ್ಡ ದೊಡ್ಡ ನೀರಾವರಿ ಯೋಜನೆಗಳ ವಿಷಯವನ್ನು ಹೇಳುತ್ತಾರೆಯೇ ಹೊರತು, ಸಣ್ಣ ಸಣ್ಣ ನೀರಾವರಿ ಯೋಜನೆಗಳ ಕಡೆಗೆ ತಮ್ಮ ಗಮನವನ್ನು ಹರಿಸಿಲ್ಲ. ನಮ್ಮ ರಾಜ್ಯದ ಸಣ್ಣ ಸಣ್ಣ ಹಳ್ಳಿಗಳಲ್ಲಿ ಅನೇಕ ಕೆರೆಗಳು ಮತ್ತು ಟ್ಯಾಂಕ್‌ಗಳು ಇವೆ. ಇವುಗಳಲ್ಲಿ ಅನೇಕವು ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಕಟ್ಟಿದವು. ಇಂತಹ ಕೆರೆ ಕಟ್ಟೆಗಳು ಆಗಿಂದಾಗ್ಗೆ ರಿಪೇರಿಗೆ ಒಳಪಡುತ್ತಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಅನೇಕ ವರ್ಷಗಳಿಂದ ರಿಪೇರಿಯಾಗದೆ ಕೆಲವು ಕೆರೆಗಳಲ್ಲಿ ಮಣ್ಣು ತುಂಬಿ, ಹೆಚ್ಚು ಕಡಿಮೆ ದಡದ ಮಟ್ಟಕ್ಕೆ ಬಂದಿವೆ. ಈ ಮಣ್ಣನ್ನು ತೆಗೆಸಿದರೆ ನೀರು ನಿಲ್ಲುವುದಕ್ಕೆ ಅನುಕೂಲವಾಗುವುದಲ್ಲದೆ, ತನ್ಮೂಲಕ ಹೆಚ್ಚು ಆಹಾರವನ್ನು ಬೆಳೆಯಬಹುದಲ್ಲದೆ, ಆಹಾರ ಸಮಸ್ಯೆಯನ್ನು ಪರಿಹಾರ ಮಾಡಬಹುದೆಂದು ದೃಢವಾಗಿ ಹೇಳಬಹುದು. ಕೆರೆಕಟ್ಟೆಗಳು ಮತ್ತು ಬಾವಿಗಳು ಇರುವ ಅಕ್ಕಪಕ್ಕದ ಜಮೀನುಗಳಲ್ಲಿ ಫಲವತ್ತಾದ ಮತ್ತು ಉತ್ತಮಫಾದಂಥ ಮಣ್ಣು ಇರುತ್ತದೆ. ಆದ್ದರಿಂದ ಕೆರೆಗಳಲ್ಲಿ ತುಂಬಿರುವಂತಹ ಮಣ್ಣನ್ನು ತೆಗೆಸಿ, ನೀರು ನಿಲ್ಲುವುದಕ್ಕೆ ಅವಕಾಶ ಮಾಡಿಕೊಟ್ಟರೆ ಉತ್ತಮ

(ಶ್ರೀ ಬೋಳ ರಘುರಾಮ ಶೆಟ್ಟಿ)

ವಾದಂಥ ಬೆಳೆ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಸರ್ಕಾರದವರು ಈ ಕಡೆಗೆ ತಮ್ಮ ಗಮನವನ್ನು ಹರಿಸಬೇಕು. ಮುಖ್ಯವಾಗಿ ಸರ್ಕಾರದವರ ಗಮನ ದೊಡ್ಡ ನೀರಾವರಿಗಳ ಕಡೆಗೇ ಇರುತ್ತದೆ. ಯಾವಾಗಲೂ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಮಾಡಿಸುವುದರಿಂದ ನಮ್ಮ ರಾಜ್ಯದ ಹಣ ಪೋಲಾಗುವುದಕ್ಕೆ ಅವಕಾಶವಾಗುತ್ತದೆ. ಮತ್ತು ದೊಡ್ಡ ದೊಡ್ಡ ಕಂಟ್ರಾಕ್ಟರ್‌ಗಳು ಹೆಚ್ಚು ಹಣ ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಕೆಲವು ಕೆಲಸಗಳನ್ನು ಕಂಟ್ರಾಕ್ಟರ್‌ಗಳು ಸಕಾಲದಲ್ಲಿ ಕಟ್ಟಿ ಮುಗಿಸದೆ ಕೃಷಿಕರಿಗೆ ಬಹಳ ಅನಾನುಕೂಲವಾಗುತ್ತಿದೆ.

ಇನ್ನು ಕೆರೆ ಮತ್ತು ಬಾವಿಗಳಲ್ಲಿರುವಂಥ ನೀರು ಸದುಪಯೋಗವಾಗಬೇಕಾದರೆ ನಮ್ಮ ರಾಜ್ಯದಲ್ಲಿ ಉತ್ಪತ್ತಿಯಾಗತಕ್ಕಂಥ ವಿದ್ಯುಚ್ಛಕ್ತಿಯನ್ನು ಹೆಚ್ಚು ಹೆಚ್ಚು ಪಂಪ್‌ಸೆಟ್ಟುಗಳಿಗೆ ಒದಗಿಸಿಕೊಡಬೇಕು. ನಮ್ಮ ರಾಜ್ಯದಲ್ಲಿ ಹೇರಳವಾಗಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುತ್ತಿದ್ದೇವೆ. ಇದರ ಉಪಯೋಗವನ್ನು ನಮ್ಮ ರೈತರಿಗೆ ಒದಗಿಸಿಕೊಡದೆ ನೆರೆ ರಾಜ್ಯಗಳಿಗೆ ವಿದ್ಯುಚ್ಛಕ್ತಿಯನ್ನು ನಮ್ಮ ಸರ್ಕಾರದವರು ಕೊಡುತ್ತಿದ್ದಾರೆ. ನೆರೆ ರಾಜ್ಯದವರು ಸಹ ದೊಡ್ಡ ದೊಡ್ಡ ವಿದ್ಯುಚ್ಛಕ್ತಿ ಯೋಜನೆಗಳನ್ನು ಪ್ರಾರಂಭ ಮಾಡಿರುವುದರಿಂದ, ಮುಂದೆ ನಮಗೆ ನಿಮ್ಮಿಂದ ವಿದ್ಯುಚ್ಛಕ್ತಿ ಬೇಡ ಎಂದು ಹೇಳಬಹುದು. ಆ ಸಂದರ್ಭ ಬರುತ್ತದೆ. ಅವರು ನಮ್ಮ ಕೈ ಬಿಡುತ್ತಾರೆ. ಆದ್ದರಿಂದ ಈಗಿನಿಂದ ಹಳ್ಳಿಯ ರೈತರಿಗೆ ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿಯನ್ನೂ ಸರಬರಾಜು ಮಾಡಬೇಕು. ಇದುವರೆಗೆ ಈ ಬಗ್ಗೆ ಸರ್ಕಾರದವರು ಯಾವ ಕ್ರಮವನ್ನೂ ತೆಗೆದುಕೊಳ್ಳದಿರುವುದನ್ನು ನೋಡಿದರೆ ಕೃಷಿಕರ ಬಗ್ಗೆ ಇವರಿಗೆ ಕರುಣೆಯಿಲ್ಲವೆಂದು ಸ್ಪಷ್ಟವಾಗಿ ಹೇಳಬಹುದು. ಕೆಲವು ರೈತರು ಐ. ಪಿ. ಸೆಟ್ಟುಗಳನ್ನು ಖರೀದಿ ಮಾಡಿ ವಿದ್ಯುಚ್ಛಕ್ತಿ ಒದಗಿಸಬೇಕೆಂದು ಅರ್ಜಿ ಹಾಕಿಕೊಳ್ಳುತ್ತಾರೆ. ಅಂಥವರಿಗೆ ಕೂಡ ಸಕಾಲದಲ್ಲಿ ಒದಗಿಸುತ್ತಿಲ್ಲ. ಇಂತಹ ಸಾವಿರಾರು ಅರ್ಜಿಗಳು ಸಂಬಂಧಪಟ್ಟ ಆಫೀಸ್‌ಗಳಲ್ಲಿ ಬಂದು ಬಿದ್ದಿವೆ. ಆದರೆ ಈ ಅರ್ಜಿಗಳಿಗೆ ಸರಿಯಾದ ಸಕಾಲದಲ್ಲಿ ಯಾವುದೇ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಾ ಇಲ್ಲ. ಎಷ್ಟೋ ಕಡೆಗಳಲ್ಲಿ ಕೃಷಿಕರಿಗೆ ಅವರ ಅರ್ಜಿ ಏನಾಗಿದೆ ಎಂದು ಗೊತ್ತಾಗುವುದಿಲ್ಲ. ಅವರು ಬಹಳ ಸಮಯ ಕಾದು, ಈ ಸರ್ಕಾರದಿಂದ ಏನೂ ಪ್ರಯೋಜನವಿಲ್ಲವೆಂದು ತಿಳಿದು ಒಂದು ಉದಾಸೀನ ಮನೋಭಾವವನ್ನು ತಾಳುತ್ತಾರೆ. ಇದು ಬಹಳ ದುರ್ದೈವದ ಸಂಗತಿಯಾಗಿದೆ. ಈ ವರ್ಷ ಸಾಧಾರಣ ಮಳೆ ಬಂದಿರುತ್ತದೆ. ಇದರಿಂದ ನಮ್ಮ ರಾಜ್ಯಸರ್ಕಾರದವರು ಸುಮ್ಮನೆ ಕೂತುಕೊಳ್ಳುವುದು ಸರಿಯಲ್ಲ.

5-30 P.M.

ಇದೇ ಸಮಯದಲ್ಲಿ ಕೃಷಿಯನ್ನು ಇನ್ನೂ ಹೆಚ್ಚು ಬೆಳೆಸುವುದಕ್ಕೆ, ಆಹಾರಧಾನ್ಯದ ಕೊರತೆಯನ್ನು ಹೋಗಲಾಡಿಸುವುದಕ್ಕೆ, ರೈತರಿಗೆ ಬೇಕಾದ, ಅಗತ್ಯವಾದ ವಿದ್ಯುತ್‌ನ್ನು ಒದಗಿಸಬೇಕು. ಅದೇ ರೀತಿ ಐ.ಪಿ. ಸೆಟ್ಟುಗಳ ಸರಬರಾಯಿಯ ವಿಚಾರದಲ್ಲೂ ಒಂದು–ಒಂದೂವರೆ ವರ್ಷ ತೆಗೆಯುತ್ತಾರೆ. ಆದರೆ ಅವರ ಆಶೆಯನ್ನು ಸರ್ಕಾರದವರು ಈಡೇರಿಸುವ ಬದಲು ಬಹಳ ಉದಾಸೀನಮಾಡುತ್ತಾರೆ. ಇದರಲ್ಲಿ ಪಿ. ಡಬ್ಲ್ಯು. ಡಿ. ಅಥವಾ ಮೈಸೂರು ಸ್ಟೇಟ್ ಎಲೆಕ್ಟ್ರಿಸಿಟಿ ಬೋರ್ಡ್ ನೌಕರರಲ್ಲಿ ಇಂದು ಉದಾಸೀನ, ಲಂಚಕೋರತನ ಇವಕ್ಕೆ ಮುಖ್ಯ ಕಾರಣವಾಗಿದೆ. ಕೃಷಿಕರು ಸಾವಿರಾರು ಅರ್ಜಿಗಳನ್ನು ಮಾಡಿದ್ದಾರೆ. ಅವರಿಗೆ ಸರಿಯಾದ ಕಾಲದಲ್ಲಿ ಸರಿಯಾದ ಅನುಕೂಲವನ್ನು ಒದಗಿಸಿದ್ದಾರೆಯೇ, ಅಥವಾ ಕಾರ್ಯಕ್ರಮವನ್ನು ಮಾಡಿದ್ದಾರೆಯೇ, ಎಂದು ಒಂದು ನ್ಯಾಯವಾದ ದಕ್ಷವಾದ ಸಮಿತಿಯನ್ನು ಏರ್ಪಡಿಸಿ ವಿಚಾರ ಮಾಡಿದರೆ ಮಾನ್ಯಮಂತ್ರಿಯವರಿಗೂ, ಮತ್ತು ಮಾನ್ಯ ಸಭೆಗೂ ಅದರ ಸತ್ಯಾಂಶ ಗೊತ್ತಾಗುತ್ತದೆ. ಪೇಟೆಯಲ್ಲಿರತಕ್ಕವರಿಗೆ ಈ ವಿಚಾರವೆಲ್ಲಾ ಗೊತ್ತಾಗುವುದಿಲ್ಲ. ಆದರೆ ಹಳ್ಳಿಯವರಿಗೆ ಯಾವ ಅನುಕೂಲವಿದೆ ಎಂದು ಬಂದರೆ ಗೊತ್ತಾಗುತ್ತದೆ. ರೈತರು ಕೆಲವರು ಅರ್ಜಿ ಮಾಡಿದ್ದಾರೆ ಹಣ ಕೂಡ ಕಟ್ಟಿದ್ದಾರೆ. ಪಂಪ್‌ಸೆಟ್ಟು ಪಡೆದಿದ್ದಾರೆ; ಅದು ಹಾಳಾಗುತ್ತದೆ. ಆದರೆ ಇಲ್ಲಿಯವರೆಗೂ ಕರೆಂಟ್ ಕೊಟ್ಟಿಲ್ಲ. ಇಂದು ಕೃಷಿಕರಿಗೆ ಜೈಕಿಸಾನ ಎಂದು ಹೇಳುವ ಕಾಲದಲ್ಲಿ ಸರಿಯಾದ ಮತ್ತು ನ್ಯಾಯವಾದ ಮಾರ್ಗದಲ್ಲಿ ಅವರಿಗೆ ಬೇಕಾದಂತಹ ಅನುಕೂಲಗಳನ್ನು ಮಾಡುತ್ತಾ ಇಲ್ಲ. ಸರ್ಕಾರದವರು ಇದನ್ನೆಲ್ಲಾ ಸರ್ವೆ ಮಾಡಬೇಕು. ಎಲ್ಲೆಲ್ಲಿ ನೀರು ಉಂಟು, ಕೆರೆ ಬಾವಿಗಳು ಉಂಟು, ಎಲ್ಲಿ ಉತ್ಪತ್ತಿ ಮಾಡುವುದಕ್ಕೆ ಅನುಕೂಲ ಇದೆ, ಇದನ್ನು ಒಂದು ಟೆಕ್ನಿಕಲ್ ಬಾಡಿ ಮಾಡಿ, ತಿಳಿದು, ಇಂಥ ಕಡೆಗಳಲ್ಲಿ ಪಂಪ್‌ಸೆಟ್ಟು ಕೊಡಬೇಕು, ಎಂಬುದನ್ನೆಲ್ಲಾ ವಿಚಾರಿಸಿ ಒಂದು ಅರ್ಜಿಯನ್ನು

ತೆಗೆದುಕೊಂಡು ವಿದ್ಯುತ್ ಪೂರೈಕೆ ಮಾಡಬೇಕು. ಇದನ್ನೆಲ್ಲಾ ಮಾಡದೆ ಸರ್ಕಾರದವರು ಉದಾಸೀನ ಭಾವ ತಾಳಿದರೆ, ನಮ್ಮ ರಾಜ್ಯದ ಅಹಾರ ಸಮಸ್ಯೆ ಹೇಗೆ ಪರಿಹಾರವಾದೀತು ಎಂಬುದನ್ನು ನಾವು ಯೋಚನೆ ಮಾಡಬೇಕು. ಮತ್ತು ಕೃಷಿಗೆ ಸಂಬಂಧಪಟ್ಟ ಹಾಗೆ, ಕಾರ್ಖಾನೆಗಳಿಗೆ ಕೂಡ ಮಹತ್ವವನ್ನು ಕೊಡಬೇಕು. ಹಳ್ಳಿಯ ಭಾಗದಲ್ಲಿ ಕೃಷಿಗೆ ಸಂಬಂಧಪಟ್ಟ ಕೃಷಿ ಕೂಲಿಗಾರರು ಇದ್ದಾರೆ. ಅವರಿಗೆ ಒಂದೆರಡು ತಿಂಗಳು ಮಾತ್ರ ಕೆಲಸವಿರುತ್ತದೆ. ಹೆಚ್ಚಿನ ಸಮಯ ಕನಬು ಇರುವುದಿಲ್ಲ. ಅಂಥವರಿಗೆ ಸಣ್ಣ ಸಣ್ಣ ಕಾರ್ಖಾನೆಗಳನ್ನು ಹಳ್ಳಿಯಲ್ಲಿ ಮಾಡಿದರೆ, ಬಹಳ ಅನುಕೂಲವಾಗುತ್ತದೆ. ಮತ್ತು ಕಾರ್ಖಾನೆಗೆ ಬೇಕಾದ ಎಲೆಕ್ಟ್ರಿಸಿಟಿ ಸಿಗುವಂತೆ ಮಾಡಬೇಕು. ಇದರಿಂದ ಹಳ್ಳಿಯ ಜನರ ಉತ್ಪತ್ತಿಯೂ ಹೆಚ್ಚಾಗುತ್ತದೆ ಮತ್ತು ಅಲ್ಲಿರುವಂತಹ ನಿರುದ್ಯೋಗ ಸಮಸ್ಯೆಯು ಕೂಡ ಸಮರ್ಪಕವಾದ ರೀತಿಯಲ್ಲಿ ಪರಿಹಾರಮಾಡುವುದಕ್ಕೆ ಸಾಧ್ಯವಾಗುತ್ತದೆ. ನಮ್ಮ ರಾಜ್ಯ ನಿಜವಾಗಿಯೂ ಮುಂದೆ ಬರಬೇಕಾದರೆ, ಮತ್ತು ಹೆಚ್ಚಿನ ಸೌಕರ್ಯ ಜನರಿಗೆ ಸಿಗಬೇಕಾದರೆ, ಈ ಇಲಾಖೆ ಹೆಚ್ಚು ಹೆಚ್ಚು ಕೆಲಸಕಾರ್ಯಗಳನ್ನು ಮಾಡಬೇಕು. ವರ್ಷ ವರ್ಷ ಇಲಾಖೆ ಬೆಳೆಯುವುದಲ್ಲದೆ, ಅದರ ಫಲ ಅಷ್ಟಾಗಿ ಸಿಗುತ್ತಾ ಇಲ್ಲ. ಇದನ್ನು ಸಕಾಲದಲ್ಲಿ ಒದಗಿಸುವುದಕ್ಕೆ ಮಾನ್ಯ ಮಂತ್ರಿಯವರು ಪ್ರಯತ್ನ ಮಾಡಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಚಂಪಾಬಾಯಿ ಭೋಗಳೆ (ಕಾಗವಾಡಿ).—ಮಾನ್ಯ ಅಧ್ಯಕ್ಷರೇ, ಪಿ.ಡಬ್ಲ್ಯು.ಡಿ. ಇಲಾಖೆಯ ಬೇಡಿಕೆಗಳನ್ನು ಅನುಮೋದಿಸುತ್ತಾ, ನಾನು ಕೆಲವು ಸಲಹೆಗಳನ್ನು ಸೂಚಿಸ ಬಯಸುತ್ತೇನೆ. ಇಂದು ಸ್ವಾತಂತ್ರ್ಯ ಸಿಕ್ಕಿ 20 ವರ್ಷವಾಯ್ತು, ಆದರೂ ಕೂಡ ಯಾವ ಏರಿಯಾದಲ್ಲಿ ಪಿ.ಡಬ್ಲ್ಯು.ಡಿ. ಕೆಲಸ ಕಾರ್ಯಗಳನ್ನು ಮಾಡಬೇಕೆಂದು ಒಂದು ಸರ್ವೆ ಮಾಡಲಿಲ್ಲ, ಸರ್ಕಾರದವರು ಅದನ್ನು ಮಾಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ, ಇವತ್ತು ಬಾರ್ಡರ್ ಏರಿಯಾದೊಳಗೆ ಏನೂ ಕೆಲಸಕಾರ್ಯಗಳು ಆಗಿಲ್ಲ. ಇದನ್ನು ನಮ್ಮ ಸರ್ಕಾರದವರು ಮಾಡಿ ಇನ್ನೊಂದು ರಾಜ್ಯಕ್ಕೆ ಮಾದರಿಯಾಗಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನ ಕ್ಷೇತ್ರದೊಳಗೆ, ಯುದ್ಧದ ಕಾಲಕ್ಕೆ ಸೈನಿಕರೇ ಒಂದು ಪಕ್ಕಾ ರೋಡು ಮಾಡಿಸಿದ್ದಾರೆ; ಅದು ಕೇಂದ್ರ ಸರ್ಕಾರದ ಫಂಡಿನಿಂದ ಮಾಡಿಸಿದ್ದಾರೆ. ಅದರ ಹೊರತು, ಪಿ.ಡಬ್ಲ್ಯು.ಡಿ. ರಸ್ತೆ ಇಲ್ಲ, ಡೆವಲಪ್‌ಮೆಂಟ್ ರಸ್ತೆ ಇಲ್ಲ. ಇಂಥ ಕ್ಷೇತ್ರಗಳನ್ನು ನಮ್ಮ ಸರ್ಕಾರದವರು ಏಕೆ ಮಾಡುವುದಿಲ್ಲವೆಂದು ನಾನು ಕೇಳುತ್ತೇನೆ. ಒಂದು ಸರ್ವೆ ಮಾಡಬೇಕಾದರೆ, ಒಂದು ಲಿಫ್ಟ್ ಇರಿಗೇಷನ್, ನೀರಿನ ಸ್ಕೀಮ್ 5–6 ವರ್ಷ ಪ್ಲಾನ್ ಮತ್ತು ಎಸ್ಟಿಮೇಟಿಗೇನೇ ಆಗುತ್ತದೆ. ಅಲ್ಲಿಂದ ಅದು ಬಂದನಂತರ ಇಲ್ಲಿ ಒಂದು ವರ್ಷ ಪೆಂಡಿಂಗ್ ನಿಲ್ಲುತ್ತದೆ. ಇವತ್ತು ಒಂದು ಕಡೆ ಮಳೆಯಾಗುತ್ತದೆ ಒಂದು ಕಡೆಯಾಗುವುದಿಲ್ಲ. ಮೊನ್ನೆ ಮುಖ್ಯಮಂತ್ರಿಗಳು ಬಂದಾಗ ನಾನು 2–3 ಲಿಫ್ಟ್ ಇರಿಗೇಷನ್ ಕೊಡುವೆನೆಂದು ಹೇಳಿದ್ದಾರೆ. ಇಂದು ಅಲ್ಲಿರುವ ಇಂಗಳಿಕೆ ಸ್ಕೀಮ್ ಮತ್ತು ಕಾಗವಾಡ ಸ್ಕೀಂ ಇವುಗಳನ್ನು ಮೂರು ಕಂತಿನಲ್ಲಾದರೂ ಮಾಡಿ ರೈತರಿಗೆ ಸೌಕರ್ಯ ಮಾಡಬೇಕು. ಇನ್ನು ಸಿರಗುಪ್ಪಾ ಮತ್ತು ಮಂಗಾವತಿ ರೋಡು. ಇದಕ್ಕೆ ಶುಗರ್ ಕೇನ್ ಫಂಡಿನಿಂದ 1 ಲಕ್ಷ 30 ಸಾವಿರ ಕೊಡಬೇಕೆಂದು ಕಾನೂನು ಮಾಡಿದ್ದಾರೆ. ಇವರ ಬಾಯಿಂದ ಬಂದುದು ಕೈಗೆ ಬರಲಿಲ್ಲ. ನಮ್ಮ ಸರ್ಕಾರದವರು ಏಕೆ ಅದನ್ನು ಮಾಡಬಾರದು? ನನಗೆ ಅಲ್ಲಿಯ ಜನರು, ನೀವು ಏಕೆ ಸರ್ಕಾರವನ್ನು ಒತ್ತಾಯ ಮಾಡಿಸಿ ಮಾಡಲಿಲ್ಲವೆಂದು ಕೇಳುತ್ತಿದ್ದಾರೆ. ನೀವು ಅದನ್ನು ಮಾಡಲಿಕ್ಕೆ ಆಗದಿದ್ದರೆ, ಏಕೆ ನೀವು ರಾಜೀನಾಮೆ ಕೊಡಬಾರದು ಎಂದು ಕೇಳುತ್ತಿದ್ದಾರೆ. 20 ವರ್ಷದಿಂದ ಅಲ್ಲಿ ಏನೂ ಕೆಲಸವಾಗಿಲ್ಲ ಎನ್ನುವಾಗ, ನಾನು ಬೇಕಾದರೆ ರಾಜೀನಾಮೆ ಕೊಡಲೂ ಸಿದ್ಧಳಾಗಿದ್ದೇನೆ. ಜನರು ನಿಮಗೆ ಏಕೆ ಓಟು ಕೊಡಬೇಕೆಂದು ಕೇಳುತ್ತಿದ್ದಾರೆ. ಆದ್ದರಿಂದ ಈ ಬಜೆಟ್ಟಿನಲ್ಲಿ ಆ ಕೆಲಸಗಳು ಆಗಲೇಬೇಕು. ಹರಿಜನ ಹೆಣ್ಣು ಮಕ್ಕಳು, ನೀವು ಏಕೆ ಅಲ್ಲಿ ಇರಬೇಕು, ರಾಜೀನಾಮೆ ಕೊಟ್ಟು ಬನ್ನಿ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಆ ಸಿರಗುಪ್ಪ ಮಂಗಾವತಿ ಸ್ಕೀಂನ್ನು ಮಾಡಬೇಕೆಂದು ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ. ಶರಾವತಿ ಯೋಜನೆಯಲ್ಲಿ ವಿದ್ಯುತ್ ಶಕ್ತಿ ಉತ್ಪಾದನೆ ಮಾಡಿ ಅದನ್ನು ರೈತರಿಗೆ ಕೊಡುತ್ತೀರಿ. ಒಂದು ಅಶ್ವ ಶಕ್ತಿ ವಿದ್ಯುತ್ ಶಕ್ತಿ ಒದಗಿಸಬೇಕಾದರೆ ಒಂದು ಸಾವಿರ ರೂಪಾಯಿ ಕೊಡಬೇಕು ಎಂದು ಇದೆ. ರೈತನಿಗೆ ಸಾಲ ಕೊಟ್ಟು ಈ ರೀತಿ ಸಾವಿರ ರೂಪಾಯಿ ಕೊಡಬೇಕು ಎಂದು ಹೇಳುವುದು ಬಹಳ ಅನ್ಯಾಯ. ಹೀಗೆ ಮಾಡಬಾರದು. ಹಳ್ಳಿಗಳಿಗೆ ಅನೇಕ ಕಡೆಗಳಲ್ಲಿ ಇನ್ನೂ ವಿದ್ಯುತ್ ದೀಪ ಬಂದಿಲ್ಲ, ರೈತನಿಗೆ ಇದರ ಸೌಲಭ್ಯ ಮುಟ್ಟಿಲ್ಲ. ಆದುದರಿಂದ ವಿದ್ಯುತ್ ಶಕ್ತಿ ಯಾರಿಗೆ ಕೊಟ್ಟಿದ್ದೀರೋ ಅವರಿಂದ ಹಣ ವಸೂಲ್ಮಾಡಬೇಕು. ಇನ್ನು ಮುಂದೆ ಕೊಡತಕ್ಕಂಥವರಿಗೆ ಈ ಒಂದು ಸಾವಿರ ರೂಪಾಯಿ ಕೊಡಬೇಕು

(ಶ್ರೀಮತಿ ಚಂಪಾಬಾಯಿ ಭೋಗಳೆ)

ಎನ್ನುವುದಕ್ಕೆ ರಿಯಾಯಿತಿ ಕೊಡಬೇಕು. ರೈತನಿಂದ ದುಡ್ಡು ತೆಗೆದುಕೊಂಡು ಅನನುಕೂಲ ಮಾಡುವುದಕ್ಕೆ ಹೋಗಬಾರದು ಎಂದು ಕೇಳಿಕೊಳ್ಳುತ್ತೇನೆ.

ಸಕ್ಕಿವಾಟರ್ ಸಪ್ಲೈ ಸ್ಕೀಂ ಐದು ವರ್ಷಗಳ ಹಿಂದೆಯೇ ಬಂದಿದ್ದರೂ ಕೂಡ ಆ ಕಾಗದಗಳು ಪಿ.ಡಬ್ಲ್ಯೂ.ಡಿ. ಆಫೀಸಿನಲ್ಲಿ ಬಿದ್ದಿವೆ. ಆದಷ್ಟು ಬೇಗನೆ ಅವುಗಳನ್ನು ಮಂಜೂರು ಮಾಡಿ ಕಳಿಸಿ ಕೊಡಬೇಕು ಎಂದು ವಿನಂತಿ ಮಾಡುತ್ತೇನೆ. ಕೊನೆಯದಾಗಿ ಒಂದು ಹೇಳುತ್ತೇನೆ. ಆದಷ್ಟು ಜಾಗ್ರತೆ ಕಾಗವಾಡ ಲಿಫ್ಟ್ ಇರಿಗೇಷನ್ ಮಂಜೂರು ಮಾಡಿ ರೈತರಿಗೆ ಆದರ್ಶ ಅನುಕೂಲತೆ ಮಾಡಿಕೊಡಬೇಕು ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ. ಅಧ್ಯಕ್ಷರಿಗೆ ವಂದಿಸುತ್ತೇನೆ.

[MR. DEPUTY SPEAKER in the Chair]

ಶ್ರೀ ಎಂ. ಮಲ್ಲಪ್ಪ (ಬೀರೂರು).—ಸನ್ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಖಾತೆಯ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ವಿರೋಧಿಸುತ್ತಾ ಒಂದೆರಡು ಮಾತು ಹೇಳಲು ಬಯಸುತ್ತೇನೆ. ಲೋಕೋಪಯೋಗಿ ಇಲಾಖೆ ನಿಜವಾಗಿಯೂ ಜನರ ಹಿತ ರಕ್ಷಣೆ ಅಷ್ಟಾಗಿ ಮಾಡುತ್ತಿಲ್ಲ ಎಂದು ಸ್ಪಷ್ಟಪಡಿಸಬಯಸುತ್ತೇನೆ. ಮುಖ್ಯವಾಗಿ ಈ ಇಲಾಖೆಯಲ್ಲಿ ದಕ್ಷತೆ, ಪ್ರಾಮಾಣಿಕತೆ ಬಹಳ ಕಡಿಮೆಯಾಗಿದೆ. ಇದಕ್ಕೆ ಕಾರಣ ಏನು ಅಂದರೆ ಈ ಇಲಾಖೆಯಲ್ಲಿಯ ಅಧಿಕಾರಿಗಳು ಕಂಟ್ರಾಕ್ಟರುಗಳ ಕೈ ಗೊಂಬೆಗಳಾಗಿದ್ದಾರೆ. ಯಾವ ಕೆಲಸವಾಗಬೇಕಾದರೂ ಅದು ಕಂಟ್ರಾಕ್ಟರವರ ಮೂಲಕ ನಡೆಯುತ್ತದೆ. ಅವರು ಅಧಿಕಾರಿಗಳಿಗೆ ಏನೋ ಒಂದು ಅನುಕೂಲ, ದುಡ್ಡಿನ ಸಹಾಯ ಮಾಡುತ್ತಾರೆ. ಭ್ರಷ್ಟಾಚಾರ ನಡೆಯುತ್ತಿದೆ. ಈ ದೃಷ್ಟಿಯಿಂದ ಮಾಡತಕ್ಕಂಥ ಕೆಲಸದಿಂದ ಜನತೆಗೆ ಅನುಕೂಲವಾಗುತ್ತಾ ಇಲ್ಲ ಎನ್ನುವುದನ್ನು ಸ್ಪಷ್ಟಪಡಿಸ ಬೇಕಾಗಿದೆ. ಇವತ್ತಿನ ದಿವಸ ಇದೊಂದು ಎಲ್ಲರ ಮನೆಯ ಮಾತು ಆಗಿದೆ. ಈ ರಾಜ ಕಂಟ್ರಾಕ್ಟರರ ರಾಜ್ಯ ಎಂದು. ಕಂಟ್ರಾಕ್ಟರುಗಳೇ ಇಂದು ಇಲೆಕ್ಷನ್ ಕೂಡ ನಡೆಸುತ್ತಿದ್ದಾರೆ. ಇದು ತಪ್ಪಬೇಕಾದರೆ ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಗಮನ ಕೊಡಬೇಕು. ಈ ಅಪವಾದಕ್ಕೆ ವಿರುದ್ಧವಾದ ಕೆಲಸ ಅವರು ಮಾಡಬೇಕು. ದಕ್ಷತೆ ಪ್ರಾಮಾಣಿಕತೆ ಇಂದು ಆಡಳಿತದಲ್ಲಿ ಹೆಚ್ಚಿದರೆ ಕೋಟ್ಯಾಂತರ ರೂಪಾಯಿ ಹಣ ಉಳಿಸುವುದಕ್ಕೆ ಅನುಕೂಲವಾದೀತು ಎಂದು ಹೇಳಬಯಸುತ್ತೇನೆ. ಉದಾಹರಣೆ ಹೇಳುವುದಾದರೆ, ಒಂದು ಯೋಜನೆಯ ಅಂದಾಜು ತಯಾರು ಮಾಡಿದರೆ ಅದು ಮುಗಿಯುವುದರೊಳಗಾಗಿ ಆ ಅಂದಾಜು ಎರಡರಷ್ಟು ಮಾಡಿ ಕಂಟ್ರಾಕ್ಟರರುಗಳಿಗೆ ಕೊಡುತ್ತಾರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ದಾಸರಹಳ್ಳಿ ಅಣೆಕಟ್ಟು ಯೋಜನೆಯ ಅಂದಾಜು ಮೊದಲು 7 ಲಕ್ಷ ಎಂದು ಮಾಡಿದ್ದು ಅದು ಕೊನೆಗೆ 14 ಲಕ್ಷ ರೂಪಾಯಿ ಪುನರ್ವಿಮರ್ಶಿತ ಅಂದಾಜು ಆಗಿದೆ. ಅಲ್ಲಿ ಕೆಲಸವೇನೋ ಆಗಿರಬಹುದು. ಈ ರೀತಿ ಎರಡರಷ್ಟು ಖರ್ಚು ಮಾಡತಕ್ಕಂಥ ಪ್ರಮೇಯವೇನೂ ಇರಲಿಲ್ಲ. ಯಾವ ಕೆಲಸವನ್ನು ತೆಗೆದುಕೊಂಡರೂ ಕೂಡ ದುಡ್ಡನ್ನು ಖರ್ಚುಮಾಡತಕ್ಕಂಥ ರೀತಿ ನೋಡಿದರೆ ಸಾಮಾನ್ಯವಾಗಿ ಇದನ್ನು ಅರಿತು ಕೊಳ್ಳಬಹುದು. ಒಂದು ಕೆಲಸ ಮಾಡಲು ಒಂದಕ್ಕೆ ಎರಡರಷ್ಟು ಪುನರ್ವಿಮರ್ಶಿತ ಅಂದಾಜು ಮಾಡಿ ಮಂಜೂರು ಮಾಡತಕ್ಕಂಥಾದ್ದು ಹಣ ಕೊಡತಕ್ಕಂಥ ಪ್ರಮೇಯ ಏನು ಇದೆ ಎಂದು ಕೇಳುತ್ತೇನೆ. ಪ್ರಯೋಜನವಿಲ್ಲದ ಕೆಲಸ ಮಾಡಿದ್ದಾರೆ. ದಾಸರಹಳ್ಳಿ ಅಣೆಕಟ್ಟಿಗೆ ನೀರು ಮೇಲಿಂದ ಬರಬೇಕು, ಆದರೆ ಅದಕ್ಕೆ ಅಡಚಣೆಯಾಗುತ್ತಿದೆ. ಕೆಲಸ ಮುಗಿದ ಮೇಲೆ 14 ಲಕ್ಷ ರೂಪಾಯಿ ಖರ್ಚು ಮಾಡಿದರೂ ಕೂಡ ಕೆರೆಯಲ್ಲಿ ನೀರು ಬರದೇ ಇದ್ದರೆ ಅಚ್ಚುಕಟ್ಟಿಗೆ ನೀರು ಹೇಗೆ ಬರುತ್ತದೆ? ನೀರು ಬರದೇ ಇದ್ದರೆ ಈ ಕೆಲಸದ ಬಗ್ಗೆ ತಪ್ಪು ಸಲಹೆ ಮಾಡಿದ ಎಂಜಿನಿಯರನ್ನು ಶೂಲಕ್ಕೆ ಏರಿಸಬೇಕು ಎಂದು ಹೇಳುತ್ತೇನೆ. ಯಾವ ಕೆಲಸ ಮಾಡಿದರೂ ಅದರಿಂದ ರೈತನಿಗೆ ಅನುಕೂಲವಾಗಬೇಕು. ಕೆಲಸ ತೆಗೆದುಕೊಳ್ಳಲು ದುಡ್ಡು ಇಲ್ಲ ಮುಂದಕ್ಕೆ ಹಾಕೋಣ ಎಂದು ಹೇಳತಕ್ಕ ಪಲ್ಲವಿ ಸರಕಾರದ್ದಾಗಿದೆ. ಇಷ್ಟು ಹಣ ಖರ್ಚು ಮಾಡಿದರಲ್ಲಾ ಇದಕ್ಕೆ ಏನು ಉತ್ತರ ಸರಕಾರ ಕೊಡುತ್ತದೆ ಎಂದು ಕೇಳುತ್ತೇನೆ. ಲಿಂಗದಹಳ್ಳಿ, ಹೋಬಳಿ ಮತ್ತು ಕೆಲವು ಕಡೆ ಎಷ್ಟೋ ಹಣ ಖರ್ಚು ಮಾಡಿ ಕೆಲಸ ಮಾಡಿದ್ದರೂ ಕೂಡ ಯಾವ ಕೆರೆಯಲ್ಲಿಯೂ ನೀರು ಇಲ್ಲ, ಒಂದು ಎಕರೆಗೆ ಕೂಡ ನೀರು ಸರಬರಾಜು ಆಗುತ್ತಿಲ್ಲ. ಕೆಲವು ಕೆರೆಗಳು ಒಡೆದುಹೋಗುತ್ತಾ ಇವೆ. ಕೆರೆಗಳು ಪುನಃ ಅಲ್ಲಿಯೇ ಒಡೆದಿವೆ. ಕೆರೆ ಮಾಡಿದ್ದರೂ ಕೋಡಿ ಕಟ್ಟದೇ ಇದ್ದರೆ ಏನು ಪ್ರಯೋಜನ? ಕೆಲವು ಕಡೆ ಕೋಡಿ ಕಟ್ಟಿದ್ದರೂ ಚಾನೆಲ್ ಮಾಡದೆ ನೀರು ಸರಬರಾಜು ಇಲ್ಲದೆ ಈ ಕೆಲಸದಲ್ಲಿ ಇಲಾಖೆಯವರು ವಿಫಲವಾಗಿದ್ದಾರೆ. ಯಾವ ರೀತಿಯಿಂದಲೂ ಕೆರೆಗಳು

ಸರ್ವಿಸಿಗೆ ಬಂದಿಲ್ಲ. ರೈತರಿಗೆ ಅನುಕೂಲವಾಗಿಲ್ಲ. ರೈತರಿಗೆ ನೀರು ದೊರೆಯುತ್ತಿಲ್ಲ. ಇಷ್ಟೊಂದು ಅಪ್ರಾಮಾಣಿಕತೆಯಿಂದ ಅದಕ್ಷತೆಯಿಂದ ಕೆಲಸ ಮಾಡಿದ್ದಾದರೆ ಇದರಿಂದ ನಿಜವಾಗಿಯೂ ರೈತನಿಗೆ ಅನುಕೂಲವಾಗುತ್ತದೆಯೇ ಎನ್ನುವುದನ್ನು ದೀರ್ಘವಾಗಿ ಯೋಚನೆ ಮಾಡಬೇಕು ಎಂದು ಮಂತ್ರಿಗಳಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸಾಮಾನ್ಯವಾಗಿ ಜನಗಳ ಹಿತಕ್ಕೋಸ್ಕರ ಕೆಲಸ ಮಾಡುತ್ತಾ ಇದ್ದಾರೆಯೇ ಎಂದು ಪ್ರಶ್ನೆ ಹಾಕತಕ್ಕಂಥ ಕಾಲ ಬಂದಿದೆ. ಜನರ ಪ್ರತಿನಿಧಿಗಳು ಈ ಇಲಾಖೆಯಲ್ಲಿ ಸಂಬಂಧಪಟ್ಟವರಲ್ಲಿ ಹೋಗಬೇಕು ಅಂದರೆ ಅಲ್ಲಿ ಬೇಕಾದಷ್ಟು ಪೊಂಡಾಟ ಇದೆ. 16 ಹಳ್ಳಿಗಳಿಗೆ ಅನುಕೂಲವಾಗುವ ದೊಡ್ಡ ಪಟ್ಟಣಗೆರೆ ಬಳಿ ಸೇತುವೆ ಕಟ್ಟಿಸಬೇಕು ಎಂದು ಹೇಳಿದರೆ ಸರಕಾರ ಮನಸ್ಸು ಮಾಡುವುದಿಲ್ಲ. ವೇದಾವತಿ ನದಿಗೆ ಒಂದು ಸೇತುವೆ ಕಟ್ಟಿದರೆ ಬಹಳ ಅನುಕೂಲವಾಗುತ್ತದೆ. ಕಳೆದ ಹತ್ತು ವರ್ಷಗಳಿಂದ ಇದು ಸರಕಾರದ ಮುಂದೆ ಇದೆ. ಈ ಸೇತುವೆಯ ಅಂದಾಜು ಮಾಡಿ ಅದು ಸರಕಾರಕ್ಕೆ ಬಂದು ಮಂಜೂರು ದೊರೆಯದೆ ಆಕ್ಷೇಪಣೆ ಹಾಕಿ ವಾಪಸ್ಸು ಹೋಗಿದೆ. ಮಂಜೂರು ಮಾಡಿ ಕೊಡಿ ಎಂದು ಹೇಳಿದರೆ ದುಡ್ಡಿನ ಅಭಾವ ಇದೆ ಎಂದು ಕಾರಣ ಹೇಳುತ್ತೀರಿ. ಜನರಿಗೆ ಅನುಕೂಲವಾಗುವ ಕೆಲಸ ಮಾಡಿದರೆ ಜನೋಪಯೋಗಿಯಾಗಿ ಲೋಕೋಪಯೋಗಿ ಇಲಾಖೆಯ ಹೆಸರು ಸಾರ್ಥಕವಾಗುತ್ತದೆ. ಜನೋಪಯೋಗಿ ಕೆಲಸ ಮಾಡದೆ ಇದ್ದರೆ ಈ ಲೋಕೋಪಯೋಗಿ ಇಲಾಖೆಯ Enemy No. 1 ಶತ್ರು ಎಂದು ಆಗುತ್ತದೆ ಎನ್ನುವುದನ್ನು ಹೇಳಬಯಸುತ್ತೇನೆ. ದೊಡ್ಡ ದೊಡ್ಡ ಯೋಜನೆಗಳನ್ನು ಮಾಡಿದ್ದೀರಿ. ದೊಡ್ಡ ದೊಡ್ಡ ಕಾಮಗಾರಿಗಳನ್ನು ನೀರಾವರಿ ಯೋಜನೆಗಳನ್ನೂ ಕೆರೆಗಳನ್ನೂ ಕಟ್ಟಿಸುತ್ತಿದ್ದೀರಿ. ದೇಶಕ್ಕೆ ಅನುಕೂಲವಾಗಬೇಕು ಎಂಬ ಉದ್ದೇಶದಿಂದ ಆದರೆ ಅದರಿಂದ ದೇಶಕ್ಕೆ ಅನುಕೂಲವಾಗಿಲ್ಲ. ಕೋಟ್ಯಾಂತರ ರೂಪಾಯಿ ನೀರಾವರಿ ಯೋಜನೆಗೆ ಬಜೆಟ್ಟಿನಲ್ಲಿ ತೋರಿಸುತ್ತೀರಿ. ಆದರೆ proof of the pudding is in the eating ಎಂದು ಹೇಳುವಂತೆಯಾಗಿದೆ. ಆದುದರಿಂದ ಸಣ್ಣಪುಟ್ಟ ನೀರಾವರಿ ಕೆಲಸಗಳನ್ನು ಮಾಡುವುದರಿಂದ ರೈತನಿಗೆ ಅನುಕೂಲ ಮಾಡಿಕೊಡಬಹುದು. ಇಂಥ ಕೆಲಸಗಳನ್ನು ಆದಷ್ಟು ಜಾಗ್ರತೆ ಮಾಡಿಕೊಡಬೇಕು. ಆದರೆ ದೊಡ್ಡ ದೊಡ್ಡಯೋಜನೆಗಳಿಗೆ ಸಾಮಾನ್ಯವಾಗಿ ಇಲಾಖೆಯವರು ಪ್ರೋತ್ಸಾಹ ಮಾಡುತ್ತಾರೆ. ಒಂದು ಕೋಟಿಹಣದಲ್ಲಿ 20 ಲಕ್ಷ ರೂಪಾಯಿ ಯಾವ ರೀತಿ ಖರ್ಚಾಗುತ್ತದೆ ಎನ್ನುವುದು ಗೊತ್ತಾಗುವುದಿಲ್ಲ. ಎಷ್ಟು ದುಡ್ಡು ಪೋಲು ಆಗುತ್ತದೆ, ಎಷ್ಟು ದುಡ್ಡು ದುರುಪಯೋಗವಾಗುತ್ತದೆ ಎನ್ನುವುದು ದೊಡ್ಡ ದೊಡ್ಡ ಯೋಜನೆಗಳಲ್ಲಿ ಗೊತ್ತಾಗುವುದಿಲ್ಲ, ಸಣ್ಣ ಯೋಜನೆಯಲ್ಲಿ ಹತ್ತು ಸಾವಿರ, ಇಪ್ಪತ್ತು ಸಾವಿರ ಅಂದಾಜು ಮಾಡಬಹುದು. ಇದರಲ್ಲಿ ದುರುಪಯೋಗ ಮಾಡಲು ಹೆಚ್ಚು ಅವಕಾಶ ಇರುವುದಿಲ್ಲ. ಆದರೆ ದೊಡ್ಡ ಯೋಜನೆಯ ಅಂದಾಜು ಕಾಗದದಲ್ಲಿ ಏನೇ ಇರಲಿ ದುರುಪಯೋಗವಾಗುವ ಹಣದ ಕಲ್ಪನೆ ಬಾರದೇ ಇರಲಿ ಎಂದು ಈ ಇಲಾಖೆಯವರು ದೊಡ್ಡ ದೊಡ್ಡ ಯೋಜನೆ ಹಾಕುತ್ತಾರೆ. ಒಂದು ಸಮಯದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು, ಕೆಲವು ಭಾಗ ದುರುಪಯೋಗವಾಗುತ್ತದೆ, ಅದಕ್ಕೆ ಯಾರೂ ಏನೂ ಮಾಡುವುದಕ್ಕಾಗುವುದಿಲ್ಲ ಎಂದು. ತಾಳಿ ಮಾಡಿಸುವುದಕ್ಕೆ ಚಿನ್ನ ಕೊಟ್ಟರೆ ಮಾಡುವವನು ಸ್ವಲ್ಪ ಕದಿಯದೆ ತಾಳಿ ಮಾಡುವುದಿಲ್ಲವಂತೆ. ಹಾಗೆಯೇ ಇಲಾಖೆಯವರು ತಿನ್ನಬಹುದು, ಅದನ್ನು ಕಂಡುಹಿಡಿಯುವುದಕ್ಕೆ ಆಗುವುದಿಲ್ಲ. ಎಲ್ಲ ಹಣವನ್ನೂ ತಿಂದು ಏನೂ ಅನುಕೂಲ ಆಗದೆ ಇದ್ದರೆ ಆವಾಗ ಕಣ್ಣುಬಿಡಬೇಕಾಗುತ್ತದೆ, ಯೋಚನೆ ಮಾಡಬೇಕಾಗುತ್ತದೆ. ಇಂಥ ದುರುಪಯೋಗಕ್ಕೆ ಅವಕಾಶ ಕೊಡಬಾರದು. ಅದರಿಂದ ದೇಶದಲ್ಲಿ ಪ್ರಾಮಾಣಿಕತೆಗೆ ಧಕ್ಕೆ ಬರುತ್ತದೆ. ಬಹಳ ಕೆಲಸ ತಾಲ್ಲೂಕುಗಳಲ್ಲಿ ಆಗಬೇಕು, ಜನಗಳಿಗೆ ಅನುಕೂಲ ಆಗಬೇಕು ಎಂದರೆ ಎಲ್ಲವನ್ನೂ ಮರೆತು, ರಾಜಕೀಯ ಹಿನ್ನಲೆಯನ್ನು ಉಪಯೋಗಿಸಿಕೊಳ್ಳದೆ ಅಭಿವೃದ್ಧಿಯಾಗಲಿ ಎನ್ನುವ ದೃಷ್ಟಿಯಿಂದ ಕೆಲಸಮಾಡಿದರೆ ಮಾತ್ರ ಅಭಿವೃದ್ಧಿ ಕೆಲಸಗಳನ್ನು ಮಾಡಬಹುದು. ಹಾಗೆ ಕೆಲಸ ಮಾಡುತ್ತಾರೆಂದು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ತಾರತಮ್ಯ ಮಾಡದೇ ಎಲ್ಲ ಕಡೆಗೂ ಒಂದೇ ರೀತಿಯಲ್ಲಿ ಕಾಮಗಾರಿ ಕೆಲಸಗಳನ್ನು ಹೆಚ್ಚಾಗಿ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ ಸ್ವಾಮಿ.

ಶ್ರೀ ಕೆ. ಸಿಂಗಾರಿ ಗೌಡ (ನಾಗಮಂಗಲ).—ಮಾನ್ಯ ಅಧ್ಯಕ್ಷರೇ, ಈ ದಿವಸ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಂತೆ ಮಂಡಿಸಿರತಕ್ಕ ಬೇಡಿಕೆಗಳಿಗೆ ನನ್ನ ಸಮ್ಮತಿಯನ್ನು ಸೂಚಿಸುತ್ತ ನಾಲ್ಕಾರು ವಿಷಯಗಳನ್ನು ಸರ್ಕಾರದ ಪರ್ಯಾಲೋಚನೆಯ ಬಗ್ಗೆ ಮನವಿ ಮಾಡಿಕೊಳ್ಳಬೇಕೆಂದಿದ್ದೇನೆ.

ಮೊದಲನೆಯದಾಗಿ ಈ ದಿವಸ ಸಣ್ಣ ನೀರಾವರಿ ಕಾಮಗಾರಿಗಳಿಗೆ ಏನೊಂದು ಪ್ರಾಶಸ್ತ್ಯವನ್ನು ಕೊಡಬೇಕಾಗಿದೆ ಅಷ್ಟರಮಟ್ಟಿನ ಕೆಲಸ ನಡೆಯುತ್ತಿಲ್ಲ ಎನ್ನುವುದನ್ನು ಸರ್ಕಾರದಲ್ಲಿ

(ಶ್ರೀ ಕೆ. ಸಿಂಗಾರಿ ಗೌಡ)

ಮನವಿ ಮಾಡಿಕೊಳ್ಳಬೇಕಾಗಿದೆ. ಒಂದು, ಎರಡು, ಮೂರನೇ ಪಂಚವಾರ್ಷಿಕ ಯೋಜನೆಗಳಲ್ಲಿ ಯೋಜಿತ ಹಣಕ್ಕಿಂತ ಹೆಚ್ಚು ಖರ್ಚು ಮಾಡಿರುವುದನ್ನು ನಾವು ಒಪ್ಪುವುದಾದರೂ ಕೂಡ ಈ ದಿವಸದ ಪರಿಸ್ಥಿತಿಗನುಗುಣವಾಗಿ ಸಣ್ಣ ನೀರಾವರಿ ಯೋಜನೆಗಳನ್ನು ಹೆಚ್ಚು ಪ್ರಮಾಣದಲ್ಲಿ ಕೈಕೊಳ್ಳದೆ ಹೋದರೆ ಜನತೆಯಲ್ಲಿ ಜಿಗುಪ್ಸೆ ಬರುತ್ತದೆ ಎನ್ನುವ ವಿಷಯವನ್ನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಹಿಂದುಳಿದಂಥ, ಆಗಾಗ್ಗೆ ಅಭಾವಕ್ಕೆ ಒಳಗಾಗತಕ್ಕ ಪ್ರದೇಶಗಳಲ್ಲಿ ಇದಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟು ಇದನ್ನು productive works ಆಗಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗದೆ ಇದ್ದರೆ productive works ಆಗಿ ತೆಗೆದುಕೊಳ್ಳತಕ್ಕ ಅವಕಾಶವನ್ನು ಸರ್ಕಾರದವರು ಮಾಡಿಕೊಡಬೇಕು ಎಂದು ನಾನು ಅವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ದೊಡ್ಡ ನೀರಾವರಿ ಕಾಮಗಾರಿಗಳು ಮತ್ತು ಮಧ್ಯಮ ನೀರಾವರಿ ಕಾಮಗಾರಿಗಳನ್ನು ತೆಗೆದುಕೊಳ್ಳತಕ್ಕ ವಿಷಯದಲ್ಲಿ ಲೋಕೋಪಯೋಗಿ ಸಚಿವರು ಒಂದು ಹಂತಕ್ಕೆ ತರಬೇಕಾದರೆ 172 ಕೋಟಿ ರೂಪಾಯಿಗಳು ಬೇಕಾಗುತ್ತವೆ ಎಂದು ಈ ಸಭೆಯಲ್ಲಿ ತಿಳಿಸಿದ್ದಾರೆ. ಆ ದೃಷ್ಟಿಯಿಂದ ನೋಡಿದರೆ ಈ ದಿವಸ ಏನು ಹಣವನ್ನು ಆ ಬಾಬಿನಲ್ಲಿ ಖರ್ಚು ಮಾಡಬೇಕೆಂದು ಒದಗಿಸಿದ್ದಾರೆ ಅದರ ಪ್ರಕಾರ ಇನ್ನು ಸುಮಾರು 15—20 ವರ್ಷಗಳಾದರೂ ಕೂಡ ಆ ಕೆಲಸಗಳು ಯಾವುವೂ ಪೂರ್ತಿಯಾಗಿ ಜನಗಳಿಗೆ ಉಪಯೋಗವಾಗುವ ಸ್ಥಿತಿಗೆ ಬರಲಾರದು ಎನ್ನುವ ಶಂಕೆ ನನಗೆ ಆಗಿದೆ. ನೂರಕ್ಕೆ ಹತ್ತು ಭಾಗ ಸಲಕರಣೆಗಳು, ಲೇಬರ್ ಕಾಸ್ಟ್ ಎಂದು ಏನು ಹೇಳುತ್ತೀರಿ ಅದು ದ್ವಿಗುಣವಾಗಿ ಹೋಗುತ್ತಿದೆ. ಇವರಿಂದ ರಿವೈಸ್ಡ್ ಎಸ್ಟಿಮೇಟ್ ಆಗಿ, ಅದೂ ಸಾಕಾಗದೆ ಕೆಲಸಗಳು ಯಾವುದೂ ಕೂಡ ಉತ್ತಮ ಸ್ಥಿತಿಗೆ ತರುವುದಕ್ಕೆ ಸಾಧ್ಯವಾಗಿಲ್ಲ. ಈ ದೃಷ್ಟಿಯಿಂದ ಸರ್ಕಾರದವರು ಕೇಂದ್ರ ಸರ್ಕಾರದ ನೆರವು ಪಡೆದು ಅಥವಾ ಜನತೆಯಿಂದ ಸಾಲವೆತ್ತಿ ಅಥವಾ ಜನತೆಯ ಮೇಲೆ ತೆರಿಗೆಯನ್ನು ಹಾಕಿಯಾದರೂ ಕೂಡ ಇವುಗಳನ್ನು ಪೂರ್ಣ ಪ್ರಮಾಣದಲ್ಲಿ ಕಾರ್ಯಗತ ಮಾಡುವ ವ್ಯವಸ್ಥೆ ಮಾಡದೆ ಹೋದರೆ ಸರ್ಕಾರದವರು ಏನು ಹಣವನ್ನು ಸುರಿದಿದ್ದಾರೆ ಅದಕ್ಕೆ ತಕ್ಕ ಪ್ರತಿಫಲವನ್ನು ಶೀಘ್ರದಲ್ಲಿಯೇ ನಿರೀಕ್ಷೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಮನವಿ ಮಾಡಿಕೊಳ್ಳುತ್ತೇನೆ.

ಸಣ್ಣ ನೀರಾವರಿ ಯೋಜನೆಗಳಿಗೆ ಏಳೆಂಟು ಒಂಬತ್ತು ವರ್ಷಗಳಿಂದ ಹಣ ಖರ್ಚುಮಾಡಿ ಕೆಲಸಗಳನ್ನು ತೆಗೆದುಕೊಂಡಿದ್ದರೂ ಕೂಡ ಕೆಲಸ ಅಪೂರ್ಣವಾದ ಸ್ಥಿತಿಯಲ್ಲಿಯೇ ನಿಂತಿದೆ. ಇದಕ್ಕೆ ಕೆಲವಟ್ಟಿಗೆ ರಿವೈಸ್ಡ್ ಎಸ್ಟಿಮೇಟ್ ಸರ್ಕಾರಕ್ಕೆ ಹೋದರೆ ಅಧಿಕಾರಿಗಳಿಂದ ಹಿಂತಿರುಗಿ ಬರತಕ್ಕ ಪರಿಸ್ಥಿತಿಯಲ್ಲಿ ಕಂಟ್ರಾಕ್ಟುದಾರರು ರಿವೈಸ್ಡ್ ಎಸ್ಟಿಮೇಟ್ ಬಂದಮೇಲೆ ಕಾರ್ಯಗತ ಮಾಡುವ ಪರಿಸ್ಥಿತಿಯಲಲ್ಲ. ಈ ಕಾರಣದಿಂದ ಎಲ್ಲೆಲ್ಲಿ ಸುಮಾರು ಮುಕ್ಕಾಲು ಭಾಗ ಹಣವನ್ನು ಈ ಕೆರೆಗಳ ಮೇಲೆ ವ್ಯಯ ಮಾಡಿದ್ದೀರಿ ಅಂಥ ಕಡೆ ಶೀಘ್ರ ಕಾರ್ಯಗತ ಮಾಡುವ ವ್ಯವಸ್ಥೆ ಮಾಡದೆ ಹೋದರೆ ನಾಚಿಕೆಗೇಡಿನ ಪ್ರಸಂಗವಾಗುತ್ತದೆ ಎಂದು ಮನವಿ ಮಾಡಿಕೊಳ್ಳುತೇನೆ.

ಹಾಗೆಯೇ ಇಲಾಖೆಯಲ್ಲಿ ಸಿಬ್ಬಂದಿ ವರ್ಗ ಕೆಲಸ ಮಾಡುತ್ತಿದೆ. ಆದರೆ ಪ್ರತಿಯೊಬ್ಬ ಇಲಾಖೆಯ ನೌಕರ ವರ್ಗ, ಆಫೀಸರ್ ಇರಬಹುದು, ಸೆಕ್ಷನ್ ಆಫೀಸರ್ ಇರಬಹುದು, ನಿರ್ದಿಷ್ಟವಾದ ಕೆಲವು ಪ್ರದೇಶಗಳನ್ನು ಅವರ ಪಾಲಿಗೆ ಬಿಟ್ಟಿದ್ದಾರೆ, ಅಲ್ಲಿ ಕೂಡ ರಸ್ತೆಯಾಗಲೀ, ಅಣೆಕಟ್ಟೆಗಳಾಗಲೀ, ಕೆರೆಗಳಾಗಲೀ ವರ್ಷಂಪ್ರತಿ ಆರು ತಿಂಗಳಿಗೊಮ್ಮೆ ಪರಿಶೀಲನೆ ನಡೆಸಿ ಏನೇನು ದುರಸ್ತಾಗಿದೆ, ಏನೇನು ಕೆಲಸಕಾರ್ಯಗಳನ್ನು ಮಾಡಬೇಕು ಎನ್ನುವ ರಿಪೋರ್ಟನ್ನು ತನ್ನ ಮೇಲ್ಪಟ್ಟ ಅಧಿಕಾರಿಗಳಿಗೆ ಕೊಡದೆ ಹೋದರೆ ಹೆಚ್ಚು ವ್ಯಯ ಮಾಡಬೇಕಾದ ಪರಿಸ್ಥಿತಿಗೆ ಕಾರಣವಾಗುತ್ತದೆ ಎನ್ನುವ ವಿಷಯವನ್ನು ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಕೆರೆಗಳನ್ನು ಕಟ್ಟಿದ್ದಾರೆ. ಅವುಗಳನ್ನು ಕಟ್ಟುವ ಉದ್ದೇಶವಾದರೂ ಕೂಡ ರೈತ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡು ಹೆಚ್ಚು ಸೌಲಭ್ಯ ಪಡೆಯತಕ್ಕ ಅವಕಾಶವನ್ನು ಕಲ್ಪಿಸಿಕೊಳ್ಳಬೇಕು. ಎಂಬ ಸದುದ್ದೇಶದಿಂದ. ಆದರೆ ಈ ಸದುದ್ದೇಶವೇನಿದೆ ಅದು ಸರ್ಕಾರದ ವತಿಯಲ್ಲಿ ಸಾಧ್ಯವಾಗುತ್ತಿಲ್ಲ, ಸ್ವೇಚ್ಛಾ ಪ್ರವೃತ್ತಿ ಜಾಸ್ತಿಯಾಗುತ್ತಿದೆ. ಅಚ್ಚುಕಟ್ಟಿನಲ್ಲಿರತಕ್ಕ ಜನ ಇಚ್ಛೆ ಬಂದ ಬೆಳೆಯನ್ನು ಎಲ್ಲ ಕಾಲದಲ್ಲಿಯೂ ಬೆಳೆದು ನೀರನ್ನು ಉಪಯೋಗಿಸತಕ್ಕ ಅವ್ಯವಸ್ಥೆಗೆ ತಂದಿದ್ದಾರೆ. ಆ ಕಾರಣದಿಂದ ಕೆರೆಯಲ್ಲಿರುವ ನೀರು ಎಷ್ಟು, ಯಾವ ಬೆಳೆಯನ್ನು ಬೆಳೆದರೆ ಅವನ ಕೈಗೆ ಸೇರುತ್ತದೆ ಎಂದು ವ್ಯವಸ್ಥಿತವಾದ ರೂಪದಲ್ಲಿ ನೀರನ್ನು ಉಪಯೋಗಿಸಿಕೊಂಡು ಹೋಗತಕ್ಕ ವ್ಯವಸ್ಥೆಯನ್ನು ಮಾಡದೆ ಹೋದರೆ ಕೆರೆಗಳಲ್ಲಿರುವ ನೀರಿನ ಉಪ

ಯೋಗ ಅಷ್ಟು ಆಗಲಾರದು. ಈ ದೃಷ್ಟಿಯಿಂದ ತಾಲ್ಲೂಕು ಮಟ್ಟದಲ್ಲಿ ಪರಿಣತರ ಒಂದು ಸಮಿತಿ ಅಥವಾ ಖಾಸಗಿ ಸಂಸ್ಥೆ, ಇಂಜಿನಿಯರ್, ಬಿ. ಡಿ. ಒ. ಎಲ್ಲರೂ ಸೇರಿ ಯಾವ ಕೆರೆಯಲ್ಲಿ ಎಷ್ಟು ನೀರಿದೆ, ಯಾವ ಬೆಳೆ ಇಡಬಹುದು, ಆ ಕಾಲ ಏನಿದೆ ಎನ್ನುವಂಥ ತಿಳುವಳಿಕೆಯನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನವೆಸ್ಟಿಗೇಷನ್ ಸರ್ಕಲ್ ಎನ್ನುವ ವ್ಯವಸ್ಥೆಯನ್ನು ಸುಮಾರು ಏಳೆಂಟು ವರ್ಷಗಳಿಂದ ಮಾಡಿಕೊಂಡು ಬರುತ್ತಿದ್ದಾರೆ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ನಾಲ್ಕಾರು ಕೆರೆಗಳನ್ನು ಅಳತೆ ಮಾಡಿ ಅಂದಾಜುಗಳನ್ನೂ ತಯಾರು ಮಾಡಿದ್ದಾರೆ. ಆದರೆ ಕೆಲಸಕ್ಕೆ ಕೈಹಾಕತಕ್ಕ ಕಾಲದಲ್ಲಿ ಎಲ್ಲವನ್ನೂ ಕೂಡ ಡಿಸೈನ್ ಸರಿಯಾಗಿಲ್ಲ, ಎಸ್ಟಿಮೇಟ್ ಸರಿಯಾಗಿಲ್ಲ, ಎನ್ನುವ ಕಾರಣದಿಂದ ಒಂದೆರಡು ವರ್ಷ ಮುಂದೂಡತಕ್ಕ ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ಕೆಲಸ ಸರಿಯಾಗಿ ನಡೆಯದೆ ಹೋದರೆ ಈ ಗಿರತಕ್ಕ ಸಬ್‌ಡಿವಿಜನ್ನಿಗೇ ಒಬ್ಬ ಓವರ್‌ಸೀರ್, ಒಬ್ಬ ಸೆಕ್ಷನ್ ಆಫೀಸರ್ ಕೊಟ್ಟು ಅಲ್ಲಿರಕ್ಕ ಪ್ರದೇಶಗಳಲ್ಲಿ ಏನು ಇನ್‌ವೆಸ್ಟಿಗೇಷನ್ ನಡೆಸಬೇಕು ಎನ್ನುವುದನ್ನು ಆಯಾ ಸಬ್ ಡಿವಿಜನ್ನಿಗೇ ಹಾಕಿದರೆ ಕೆಲಸ ಸುಗಮವಾಗಿ ನಡೆಯುವುದಲ್ಲದೆ ಖರ್ಚು ಕಡಮೆಯಾಗುತ್ತದೆ ಎನ್ನುವ ವಿಷಯವನ್ನು ಸರ್ಕಾರದಲ್ಲಿ ನಿವೇದನೆ ಮಾಡಿ ಕೊಳ್ಳುತ್ತೇನೆ.

ಇಲಾಖೆಯಲ್ಲಿ ಮೆಕ್ಯಾನಿಕಲ್ ಸೆಕ್ಷನ್ ಇದೆ. ಅಲ್ಲಿರತಕ್ಕ ಕೆಲಸಗಾರರೆಲ್ಲರಿಗೂ ಕೂಡ ಖಾಯಂ ಲೇಬರ್ ವ್ಯವಸ್ಥೆಯನ್ನು ಮಾಡಿಲ್ಲ. ಹೋಗುವವರು ಹೋಗುತ್ತಾರೆ, ಬರುವವರು ಬರುತ್ತಾರೆ. ತರಪೇತು ಹೊಂದಿರುವ ನೌಕರರು ಸಿಕ್ಕುವುದು ಕಷ್ಟವಾಗುತ್ತಿದೆ. 10—15 ವರ್ಷ ಕೆಲಸ ಮಾಡಿದವರಿಗೆಲ್ಲ ಖಾಯಂ ಕೆಲಸವನ್ನು ಒದಗಿಸುವ ವ್ಯವಸ್ಥೆ ಮಾಡದೆ ಹೋದರೆ ಬಹಳ ಕಷ್ಟವಾಗುತ್ತದೆ.

ರೋಡ್ ರೋಲರುಗಳು, ಲಾರಿಗಳು, ಟ್ರ್ಯಾಕ್ಟರುಗಳು, ಇವುಗಳಲ್ಲಿ ಇದ್ದಕ್ಕಿದ್ದ ಹಾಗೆ ರೋಡ್ ರೋಲರುಗಳಿಗೆ ಒಂದು ಗಂಟೆಗೆ 36 ರೂಪಾಯಿ ಕೊಡಬೇಕು ಎಂದು ನಿಗದಿ ಮಾಡಿದ್ದಾರೆ. ಹೀಗಾಗಿ ಕಂಟ್ರಾಕ್ಟರುಗಳು ಹಿಂತೆಗೆದು ಕೆಲಸ ಕುಂಠಿತವಾಗತಕ್ಕ ಸ್ಥಿತಿಗೆ ಬಂದಿದೆ. ಸರ್ಕಾರದವರು ಏನೊಂದು ಸರ್ಕ್ಯುಲರ್ ಹೊರಡಿಸಿದ್ದಾರೆ, ಅದನ್ನು ಪುನರ್ಪರಿಶೀಲನೆ ಮಾಡಬೇಕೆಂದು ನಿವೇದಿಸಿಕೊಳ್ಳುತ್ತೇನೆ.

ಆರ್. ಸಿ. ರಸ್ತೆಗಳನ್ನು ನಿರ್ಮಾಣ ಮಾಡಿದರು. ಅವುಗಳಿಗೆ ತಂದೆ ತಾಯಿ ಯಾರೂ ಇಲ್ಲ. ಕ್ರಾಸ್ ಡ್ರೇನೇಜ್ ವರ್ಕ್ಸ್ ಮಾಡಿಲ್ಲ. ಸರ್ಕಾರದರು ಅವುಗಳನೆಲ್ಲ ತಾಲ್ಲೂಕು ಬೋರ್ಡುಗಳಿಗೆ ವಹಿಸಬೇಕು. ಸಾವಿರಾರು ಮೈಲಿ ರಸ್ತೆಗಳನ್ನು ಸಮರ್ಪಕವಾದ ರೀತಿಯಲ್ಲಿ ಇಟ್ಟುಕೊಳ್ಳುವುದಕ್ಕೆ ಆಗಿಲ್ಲ. ಆ ರಸ್ತೆಗಳನ್ನು ಸರಿಯಾಗಿ ಇಟ್ಟುಕೊಳ್ಳುವುದಕ್ಕೆ ಬೇಕಾದ ಹಣದ ಸಹಾಯವನ್ನೂ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ಮಾಡಬೇಕು ಎಂದು ಹೇಳುತ್ತೇನೆ.

ವಿಶ್ವೇಶ್ವರಯ್ಯ ನಾಲಾ ಪ್ರದೇಶದಲ್ಲಿ ಕಬ್ಬಿನ ಮೇಲೆ ಸೆಸ್ಸನ್ನು ಹಾಕಿ ರೈತಾಪಿ ಜನರಿಗೆ ಆ ದುಡ್ಡನ್ನು ವಿನಿಯೋಗ ಮಾಡತಕ್ಕ ಡಿವಿಜನ್ ಇತ್ತು. ಈಗ ಅದನ್ನು ವಜಾ ಮಾಡಿದ್ದಾರೆ. ಹಾಗೆ ವಜಾ ಮಾಡಿದ ಮೇಲೆ ರಸ್ತೆಗಳ ಸ್ಥಿತಿ ಬಹಳ ಶೋಚನೀಯ ಮಟ್ಟಕ್ಕೆ ಬಂದಿವೆ. ಸೆಸಗಳನ್ನು ಹಾಕತಕ್ಕ ಕಾಲದಲ್ಲಿ ಕಬ್ಬು ಬೆಳೆಯತಕ್ಕ ಪ್ರದೇಶದಲ್ಲಿರುವ ರಸ್ತೆಗಳನ್ನು ಉತ್ತಮಪಡಿಸಿ ಜನರಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ಸೆಸ್ ಹಾಕುತ್ತೇವೆಂದು ಹೇಳಿದರು. ಅದನ್ನು ಜನರಲ್ ಸೆಸ್ ಫಂಡಿಗೆ ಸೇರಿಸಿಕೊಂಡಿದ್ದಾರೆ. ಸಕ್ಕರೆ ಕಂಪನಿ ಒಂದು ಭಾಗ, ಸರ್ಕಾರದವರು ಒಂದುಭಾಗ, ಕೇಂದ್ರ ಸರ್ಕಾರದವರು ಒಂದು ಭಾಗ. ಈ ರೀತಿ ಮೂರು ಜನರೂ ಕೂಡಿ ಅಲ್ಲಿರತಕ್ಕ ರಸ್ತೆಗಳ ಅಭ್ಯುದಯಕ್ಕೆ ಕಾರಣಕರ್ತರಾಗಬೇಕು ಎಂದು ಹೇಳುತ್ತಿದ್ದರು. ಕಾರ್ಖಾನೆಯವರು ದುಡ್ಡು ಕೊಡುತ್ತಿಲ್ಲ, ಸರ್ಕಾರದವರು ಆ ರಸ್ತೆಗಳನ್ನು ಅಲಕ್ಷದಿಂದ ನೋಡುತ್ತಿದ್ದಾರೆ. ಗಾಡಿಗಳು ತಿರುಗಾಡುವುದಕ್ಕೆ ಅನಾನುಕೂಲವಾಗಿದೆ. ಆದಕಾರಣ ಈ ರಸ್ತೆಗಳನ್ನು ಆದಷ್ಟು ಜಾಗ್ರತೆ ದುರಸ್ತು ಮಾಡಿ ಸರಿಯಾದ ಪರಿಸ್ಥಿತಿಗೆ ತರಬೇಕಾದ್ದು ಉತ್ತಮ ಎಂದು ಸಲಹೆ ಕೊಡುತ್ತಿದ್ದೇನೆ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಎರಡು ವಿಷಯಗಳನ್ನು ತಮ್ಮ ಮುಂದಿಡಲು ಇಚ್ಛಿಸುತ್ತೇನೆ.

ದೊಡ್ಡ ಉಪ್ಪಾಳ ಅಣೆಕಟ್ಟು, ಚಂದನಹಳ್ಳಿಯ ಅಣೆಕಟ್ಟುಗಳು ಮಾರ್ಕೋನಹಳ್ಳಿ ರಿಸರ್ವಾಯರ್ ಕಟ್ಟಿಸುವುದಕ್ಕೆ ಮುಂಚೆ ಕಟ್ಟಿದಂಥ ಅಣೆಕಟ್ಟುಗಳು. ಷಿಂಷಾ ನದಿಗೆ ಅಡ್ಡಲಾಗಿ ಕಟ್ಟಿರುವ ಅಣೆಯ ನೀರನ್ನು ತೆಗೆದುಕೊಂಡು ಹೋಗಿ ಮಂಗಳ ಅಣೆಕಟ್ಟು ರೈತರಿಗೆ ಬರತಕ್ಕ ನೀರನ್ನು ತಡೆಗಟ್ಟಿದ್ದಾರೆ. ಇದರಲ್ಲಿ ಸದಾಕಾಲ ನೀರು ಸಿಕ್ಕತಕ್ಕ ಪರಿಸ್ಥಿತಿ ಇಲ್ಲ. ಸೀಪೇಜ್ ವಾಟರ್ ಮಾತ್ರ ಸಿಕ್ಕುತ್ತದೆ. ಯಾವಾಗ ತೂಬುಗಳಲ್ಲಿ ನೀರಿಲ್ಲ ಅಂಥ ಸಮಯದಲ್ಲಿ ಮಾರ್ಕೋನಹಳ್ಳಿ ರಿಸರ್ವಾಯರನಲ್ಲಿ 50 ಅಡಿ ಮೇಲೆ ಕ್ರೆಸ್ಟ್ ಗೇಟ್ಸ್ ಇರುವುದನ್ನು ಸಕಾಲದಲ್ಲಿ ತೆರೆದರೆ ಬೆಳೆ

(ಶ್ರೀ ಕೆ. ಸಿಂಗಾರಿ ಗೌಡ)

ಸಂಪೂರ್ಣ ಕೈಗೆ ಸಿಕ್ಕುತ್ತದೆ. ಸರ್ಕಾರ ಇದರ ವ್ಯವಸ್ಥೆ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಈ ದಿವಸ ನಮ್ಮಲ್ಲಿ ಗೊರೂರು ಅಣೆಕಟ್ಟು ಆಗಲಿದೆ, ನಮ್ಮದು ಅಭಾವ ಪ್ರದೇಶ, ಎರಡನೆಯ ಹಂತದಲ್ಲಿ ಈ ಅಣೆಕಟ್ಟಿನಿಂದ ನಮ್ಮ ಭಾಗಕ್ಕೆ ನೀರನ್ನೊದಗಿಸಲು ಸಾಧ್ಯವಿದೆ ಎಂದು ಪರಿಶೀಲನೆ ಮಾಡಿದಾಗ ಗೊತ್ತಾಗಿದೆ. ಸರ್ಕಾರದವರು ಇದನ್ನು ಗಮನಿಸಿ ಉದಾರ ಮನಸ್ಸು ಮಾಡಿ ಇದನ್ನು productive work ಎಂದು ಪರಿಗಣಿಸದೆ protective work ಎಂದು ಪರಿಗಣಿಸಿ ಜನತೆಗೆ ಅನುಕೂಲಮಾಡಿಕೊಡಬೇಕು ಎಂದು ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

6-00 P.M.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಬಹಳ ಜನರು ಮಾತನಾಡುವವರು ಇರುವುದರಿಂದ ಇಂದು 7 ಗಂಟೆಯವರೆಗೆ ಅವಕಾಶ ಕೊಡಬೇಕೆಂದು ಸಲಹೆಮಾಡುತ್ತೇನೆ.

Mr. DEPUTY SPEAKER.—The Half-an-hour discussion scheduled for today will be taken up on some other day.

As desired by the Hon'ble Members, the House will continue to sit till 7-00 P.M. today.

† ಶ್ರೀ ಬಿ. ಭಾಸ್ಕರಶೆಟ್ಟಿ (ಕಾಪು).—ಸ್ವಾಮಿ, ಈಗ ನಮ್ಮ ಮುಂದಿರುವ 6, 29,50 ಮುಂತಾದ ಡಿಮ್ಯಾಂಡುಗಳಿಗೆ ಸಾಧಾರಣವಾಗಿ ನಮ್ಮ ಈ ವರ್ಷದ ಮುಂಗಡ ಪತ್ರದ ಅರ್ಧಭಾಗ ಅಂದರೆ, 92 ಕೋಟಿ ರೂಪಾಯಿಗಳಿಂತ ಹೆಚ್ಚು ಹಣ ಖರ್ಚಾಗಲಿದೆ. ಈ ಹಣ ಖರ್ಚು ಮಾಡುವಾಗ ಪ್ರತಿಯೊಂದು ಪೈಸ ಕೂಡ ಒಳ್ಳೆಯ ರೀತಿಯಿಂದ ಖರ್ಚಾಗುವಂತೆ ನೋಡಿಕೊಳ್ಳಬೇಕು. ನಮ್ಮ ಲೋಕೋಪಯೋಗಿ ಇಲಾಖೆಯ ಹಿಂದಿನ ಚರಿತ್ರೆಯನ್ನು ನೋಡಿದರೆ ಈ ಮೊಬಲಗು ಒಳ್ಳೆಯ ರೀತಿಯಿಂದ ಖರ್ಚಾಗುವುದಿಲ್ಲ ಎಂದು ಹೇಳಬಹುದು. ಉದಾಹರಣೆಗೆ ಹೇಮಾವತಿ ರಿಸರ್ವಾಯರ್ ಪ್ರಾಜೆಕ್ಟಿಗೆ ಸಂಬಂಧಪಟ್ಟಂತೆ ಡ್ಯಾಂ ಕಟ್ಟುವ ಕೆಲಸವಿದೆ. ಇದು 3,50,57,600 ರೂಪಾಯಿಗಳ ಕೆಲಸ. ಇದನ್ನು ಕಂಟ್ರಾಕ್ಟರುಗಳಿಗೆ ಕೊಡುವಾಗ ಒಂದು ಕ್ಲಾಜನ್ನು ಹಾಕಿದ್ದಾರೆ. ಏನೆಂದರೆ, ಕ್ಲಾಸ್ ಒನ್ ಕಂಟ್ರಾಕ್ಟರಾಗಬೇಕು, ಹಣವಂತರಾಗಬೇಕು, ಹಿಂದಿನ ಅನುಭವವಿರಬೇಕು, ಇಂತಹ ಕೆಲಸ ಮಾಡಿರಬೇಕು ಎಂದು ತಿಳಿಸಿದ್ದಾರೆ. ಆ ಕ್ಲಾಜಿನಲ್ಲಿರುವುದು ಈ ರೀತಿ ಇದೆ:

> "Contractors and firms who are having adequate financial resources and contruction equipment and past experience of the work of this nature and magnitude need tender for the works."

ಹಿಂದಿನ ಅನುಭವವಿರುವವರು ಮಾತ್ರ ಟೆಂಡರು ಹಾಕಬೇಕೆಂದು ತಿಳಿಸಿದ್ದಾರೆ. ಈಗ ನಮ್ಮ ಮಾನ್ಯ ಮಂತ್ರಿಗಳು ಕಡಮೆ ಟೆಂಡರು ಕೊಟ್ಟರು, ಆದುದರಿಂದ ಒಪ್ಪಿದ್ದೇವೆ ಎಂದು ಹೇಳಬಹುದು. ಆದರೆ 'ಎ' ಕ್ಲಾಸ್ ಕಂಟ್ರಾಕ್ಟರುಗಳಿಗೆ ಹಿಂದಿನ ಅನುಭವ ಇಲ್ಲದಿದ್ದುದರಿಂದ ಅವರ ಪೈಕಿ ಯಾರೂ ಈ ಕೆಲಸಕ್ಕೆ ಟೆಂಡರನ್ನು ಹಾಕಲಿಲ್ಲ. ಅನುಭವವಿಲ್ಲದಿರುವ ಒಬ್ಬರು ಟೆಂಡರು ಕೊಟ್ಟರು, ಅವರಿಗೆ ಕೆಲಸ ಕೊಟ್ಟರು. ಇದನ್ನೇಕೆ ಹೇಳುವುದೆಂದರೆ, ಅನುಭವವಿಲ್ಲದವರಿಗೆ ಕೊಟ್ಟರೆ ಸರಿಯಾಗಿ ಕೆಲಸ ಮಾಡದೆ ಮಧ್ಯೆ ಬಿಟ್ಟು ಹೋಗುತ್ತಾರೆ. ಯಾರಿಗೋ ತಮಗೆ ಬೇಕಾದವರಿಗೆ ಸಹಾಯ ಮಾಡಲು ಇದನ್ನು ಕೊಡಲು ಹೀಗೆ ಮಾಡಿರಬಹುದು.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ತಮಗೆ ಗೊತ್ತಿರುವುದನ್ನು ಮಾತ್ರ ಹೇಳಿ.

ಶ್ರೀ ಬಿ. ಭಾಸ್ಕರಶೆಟ್ಟಿ.—ಅಷ್ಟು ಮಾತ್ರ ನಾನು ಹೇಳುತ್ತಿದ್ದೇನೆ. ಎಲ್ಲಾ ಗೊತ್ತಿದೆ. ತಮ್ಮವರೊಬ್ಬರಿಗೆ ಸಹಾಯ ಮಾಡುವುದಕ್ಕಾಗಿ ನೀವು ಟೆಂಡರನ್ನು ಒಪ್ಪಿದ್ದೀರಿ. ಅವರು ಹೆಚ್ಚಾಗಿ ಕೆಲಸ ಮಾಡಿ ಅನುಭವ ಪಡೆದವರಲ್ಲ. ಸ್ಪಿಲ್‌ವೇ ಡ್ಯಾಂ ಕೆಲಸದಲ್ಲಿ ಅವರಿಗೆ ಅನುಭವ ವಿಲ್ಲ, ಆ ಕೆಲಸ ಅವರು ಮಾಡಿಲ್ಲ. ಹಾಗೆ ಅನುಭವವಿಲ್ಲದವರಿಗೆ ಕೊಡಬೇಕಾದರೆ ಟೆಂಡರು ಕರೆಯುವಾಗ ಅನುಭವವಿರಬೇಕು ಎಂಬ ಕ್ಲಾಜನ್ನು ಹಾಕಬಾರದಾಗಿತ್ತು. ಆ ಕಂಡೀಷನ್

ಇರುವುದರಿಂದ 'ಎ' ಕ್ಲಾಸ್ ಕಂಟ್ರಾಕ್ಟರುಗಳು ಯಾರಿದ್ದಾರೆ ಇನ್ನೂ ಕಡಮೆ ಟೆಂಡರಿನಲ್ಲಿ ಕೆಲಸ ಮಾಡುವವರು ಅವರು ಯಾರೂ ಟೆಂಡರನ್ನು ಹಾಕಲಿಲ್ಲ. ಈ ಕೆಲಸಕ್ಕೆ ಪುನಃ ರಿಟೆಂಡರನ್ನು ಕರೆದರೆ ಕಡಮೆ ಟೆಂಡರು ಹಾಕಬಹುದು. ಕಂಡೀಷನ್ ಹಾಕಿರುವುದನ್ನು ತೆಗೆದರೆ ಎ ಕ್ಲಾಸ್ ಕಂಟ್ರಾಕ್ಟರುಗಳು ಟೆಂಡರು ಹಾಕುತ್ತಾರೆ. ಇದಲ್ಲದೆ ಮೊನ್ನೆತಾನೆ ವಾಟರ್ ಸಪ್ಲೈಗೆ ಸುಮಾರು ಒಂದೂವರೆ ಕೋಟಿ ರೂಪಾಯಿ ಒಂದು ಯೋಜನೆ ಇತ್ತು, ಅದನ್ನು ಕೂಡ ಲೋಯೆಸ್ಟ್ ಟೆಂಡರು ಹಾಕಿರುವವರಿಗೆ ಕೊಟ್ಟಿಲ್ಲ. ಅದನ್ನು ಇಂಜನಿಯರಿಂಗ್ ಕನ್‌ಸ್ಟ್ರಕ್ಷನ್ ಕಂಪೆನಿಗೆ ಟೆಂಡರ್ ಇಲ್ಲದೆ ನೆಗೋಸಿಯೇಷನ್ ಮಾಡಿಕೊಡಲಾಗಿದೆ. 15 ಲಕ್ಷದ ಕೆಲಸವನ್ನು ಒಬ್ಬರಿಗೆ, 4 ಲಕ್ಷದ ಕೆಲಸವನ್ನು ಒಬ್ಬರಿಗೆ ಕೊಟ್ಟಿದ್ದಾರೆ. ಹೀಗೆ ಕೊಡುವುದು ಸರಿಯೇ? 5 ಸ್ಟಾರುಗಳ ಹೋಟೇಲಿನ ಕೆಲಸಕ್ಕೆ ಟೆಂಡರು ಕರೆಯುವಾಗ ಕೂಡ 5 ಉಪ್ಪರಿಗೆ ಕಟ್ಟಿ ಅನುಭವ ವಿರುವವರೇ ಬೇಕು ಎಂದು ಷರತ್ತು ಹಾಕಿದ್ದಾರೆ. ಹಾಗೆ ಷರತ್ತು ಹಾಕಿರುವಾಗ 5 ಮಹಡಿ ಕಟ್ಟಿರುವವರೇ ಬೇಕೆಂದು ಹೇಳುವಾಗ, ಆ ಶಬ್ದಗಳನ್ನು ಉಪಯೋಗಿಸಿರುವಾಗ ತಮ್ಮ ಬಾಲ ಬಡುಕರಾದ ಬಾಲಾಜಿ ಕನ್‌ಸ್ಟ್ರಕ್ಷನ್ ಕಂಪೆನಿಗೆ ಕೊಡಲು ಕಾರಣವೇನು? ಒಂದು ವೇಳೆ ಸರಿಯಾಗಿಲ್ಲದಿದ್ದರೆ ರಿಟೆಂಡರ್ ಮಾಡಿ. ಹಾಗೆ ಮಾಡಿದರೆ ಅದಕ್ಕಿಂತ ಕಡಮೆ ಟೆಂಡರುಬರಬಹುದು. ಕಂಡೀಷನ್ ಹಾಕಿ ಟೆಂಡರು ಕರೆದಿರುವುದರಿಂದ ಎ ಕ್ಲಾಸು ಕಂಟ್ರಾಕ್ಟರುಗಳು ಟೆಂಡರು ಹಾಕಿಲ್ಲ.

ಇನ್ನು ನೀರಾವರಿ ಯೋಜನೆಗಳಿಗೆ ಬರುತ್ತೇನೆ. ಇದನ್ನು ನೋಡಿದರೆ ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಮಲತಾಯಿ ಧೋರಣೆ ಇದೆ, ನಮ್ಮ ರಾಜ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತಿ ಕಡಮೆ ನೀರಾವರಿ ಯೋಜನೆಗಳನ್ನು ಕೈಕೊಂಡಿದ್ದಾರೆ. ಇದನ್ನೇಕೆ ಹೇಳುವುದೆಂದರೆ, ನಮ್ಮ ರಾಜ್ಯದಲ್ಲಿ ಬೆಳೆಯುವ ಬತ್ತದಲ್ಲಿ ಐದನೆಯ ಒಂದು ಭಾಗವನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳೆಯುತ್ತಾರೆ, ಮುಖ್ಯವಾಗಿ ನಮ್ಮ ಜಿಲ್ಲೆ ಬತ್ತ ಬೆಳೆಯುವ ಜಿಲ್ಲೆ. ಇದಕ್ಕೆ ಒಂದು ಲೆಕ್ಕಾಚಾರ ಕೊಡುತ್ತೇನೆ. ಸರಕಾರದವರು ಕೊಟ್ಟಿರುವ ಲೆಕ್ಕಾಚಾರದ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2,04,618 ಹೆಕ್ಟೇರ್ ನಲ್ಲಿ ಬತ್ತ ಬೆಳೆಯುತ್ತಾರೆ, ಇದನ್ನು ಲೆಕ್ಕ ಹಾಕಿದರೆ ಇಡೀ ರಾಜ್ಯದ ಸೇಕಡ 20.27ರಷ್ಟಾಗುತ್ತದೆ. ಅಂದರೆ ಒಟ್ಟು ರಾಜ್ಯದಲ್ಲಿ ಬೆಳೆಯುವುದರಲ್ಲಿ ಐದನೆಯ ಒಂದು ಅಂಶಕ್ಕಿಂತ ಹೆಚ್ಚಾಗುತ್ತದೆ. 1,190 ಟನ್ನುಗಳನ್ನು ರಾಜ್ಯದಲ್ಲಿ ಬೆಳೆದರೆ 241 ಟನ್ನುಗಳನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳೆಯುತ್ತಾರೆ. ಹಾಗಿರುವಾಗ ನೀರಾವರಿ ಕೆಲಸ ಕೈಕೊಳ್ಳುವಾಗ ಮಾತ್ರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಡೀ ರಾಜ್ಯದಲ್ಲಿ ಅತಿ ಕಡಮೆ ನೀರಾವರಿ ಕೆಲಸ ಕೈಕೊಂಡು ಆ ಜಿಲ್ಲೆಯ ಬಗ್ಗೆ ಮಲತಾಯಿ ಧೋರಣೆ ತೋರಿಸಿದ್ದಾರೆ. ನಮ್ಮಲ್ಲಿ ಸರಕಾರಿ ನಾಲೆ ಒಂದೂ ಇಲ್ಲ. ಮೈಸೂರು ಸ್ಟೇಟ್ ಮ್ಯಾಪ್ಸ್ ಎಂದು ನಮಗೆ ಕೊಟ್ಟಿರುವ ಪುಸ್ತಕದಲ್ಲಿ ಈ ವಿವರವಿದೆ. ಪ್ರೈವೇಟ್ ಕೆನಾಲ್ಸ್, ಕೆರೆಗಳು ಮುಂತಾದುವನ್ನೆಲ್ಲಾ ನೋಡಿದರೆ ಶಿವಮೊಗ್ಗ, ಮಂಡ್ಯ ಜಿಲ್ಲೆಗಳಲ್ಲಿ ಒಂದು-ಒಂದೂವರೆ ಲಕ್ಷ ಹೆಕ್ಟೇರ್ಸ್ ನೀರಾವರಿ ಸೌಲಭ್ಯ ಒದಗಿಸಿದ್ದರೆ 66 ಸಾವಿರ ಹೆಕ್ಟೇರ್ಸ್‌ನಲ್ಲಿ ಮಾತ್ರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೀರಾವರಿ ಸೌಕರ್ಯ ಮಾಡಿದ್ದಾರೆ. 1957ನೆಯ ಇಸವಿಯಿಂದ ನಮ್ಮ ಜಿಲ್ಲೆ ಮೈಸೂರು ರಾಜ್ಯಕ್ಕೆ ಸೇರಿದ ಮೇಲೆ ನೀರಾವರಿ ಯೋಜನೆ ಕೆಲಸ ನಮ್ಮಲ್ಲಿ ಬಹಳ ಕಡಮೆ ಯಾಗಿದೆ.

Sri S. NIJALINGAPPA.—You are a very unreasonable representative of your district.

ಶ್ರೀ ಬಿ. ಭಾಸ್ಕರಶೆಟ್ಟಿ.—ಹಾಗೆ ಹೇಳಿ ನಮ್ಮ ಬಾಯಿ ಮುಚ್ಚಿಸಿದ್ದೀರಿ. ನಿಜವಾಗಿ ಲೆಕ್ಕಾಚಾರ ನೋಡಿದರೆ ಗೊತ್ತಾಗುತ್ತದೆ. ದೊಡ್ಡ ದೊಡ್ಡ ಸಭೆಗಳಿಗೆ ಬಂದಾಗ ನೀವು ಮುಂದೆ ಹೋಗಿದ್ದೀರಿ ಎಂದು ಹೇಳುತ್ತಾರೆ.

Sri S. NIJALINGAPPA.—I would also like to tell the hon'ble Member that he is not only unreasonable but also ungrateful.

ಶ್ರೀ ಬಿ. ಭಾಸ್ಕರಶೆಟ್ಟಿ.—Ungrateful ಎಂದು ಏಕೆ ಹೇಳುತ್ತೀರಿ ಅನ್ನುವುದನ್ನು ಹೇಳಿ. ನೀವು ಮಾಡಿದ್ದನ್ನು ನಿಮ್ಮ ಪುಸ್ತಕದ ಪ್ರಕಾರ ಹೇಳುತ್ತಾ ಇದ್ದೇನೆ, ನೀವು ಏನು ಲೆಕ್ಕಾಚಾರ ಒದಗಿಸುತ್ತೀರಿ ಆ ಲೆಕ್ಕಾಚಾರದ ಪ್ರಕಾರ ಹೇಳುತ್ತಾ ಇದ್ದೇನೆ. ಕೆಲವೆಲ್ಲಾ ಸಣ್ಣ ನೀರಾವರಿ ಯೋಜನೆಗಳು. ಅವು ನಮ್ಮಲ್ಲಿ ಅಲ್ಪಸ್ವಲ್ಪ ಆಗಿವೆ. ಇದರಲ್ಲಿ ಏನಾಗಿದೆ ಎಂದರೆ, ನನಗೆ ಬಹಳ ನಗೆ ಬರುತ್ತದೆ, ಈ ನೀರಿನಲ್ಲೂ ಕೂಡ ನೀವು ರಾಜಕೀಯ ಮಾಡಿದ್ದೀರಿ, ನೀರು ಕೊಡುತ್ತಾ ಇಲ್ಲ. ಈ ಅಧಿಕ ಆಹಾರ ಉತ್ಪಾದನೆ ಮಾಡುವ ಪುಣ್ಯ ಕೆಲಸದಲ್ಲೂ ತಾವು ರಾಜಕೀಯ ಮಾಡಿದ್ದೀರಿ ಎಂದು ಹೇಳುತ್ತಾ ಇದ್ದೇನೆ. ಯಾರ್ಯಾರು ವಿರೋಧ ಪಕ್ಷದ ಸದಸ್ಯರು ಆರಿಸಿ ಬಂದಿದ್ದಾರೋ ಆ ಕ್ಷೇತ್ರದಲ್ಲಿ ಏನೇನು ಕೆಲಸ ಮಾಡಿಲ್ಲ.

ಶ್ರೀ ಬಿ. ಡಿ. ಇದಿನಬ್ಬ ಮತ್ತು ಶ್ರೀ ವಿಠಲದಾಸ ಶೆಟ್ಟಿ.—ಅದು ಸರಿಯಲ್ಲ, ವಿರೋಧ ಪಕ್ಷದ ಸದಸ್ಯರು ಎಲ್ಲಿದ್ದಾರೆ ಅಲ್ಲೂ ಕೂಡ ಹೆಚ್ಚಿನ ಕೆಲಸ ಆಗಿದೆ.

ಶ್ರೀ ಬಿ. ಭಾಸ್ಕರಶೆಟ್ಟಿ.--ಸರ್ಕಾರದವರು ಒಂದು ಪ್ರಶ್ನೆಗೆ ಉತ್ತರ ಕೊಟ್ಟ ಲೆಕ್ಕಾಚಾರ ಪ್ರಕಾರ ತೋರಿಸುತ್ತೇನೆ ಮಾನ್ಯ ಮಂತ್ರಿಗಳು ಕೇಳಬೇಕು. Vented dam across Kodavur stream in Kodavur 3 ಲಕ್ಷ 55 ಸಾವಿರ ರೂಪಾಯಿ ಆಗಿದೆ, ಅದರಲ್ಲಿ ಅಚ್ಚು ಕಟ್ಟು ಪ್ರದೇಶ ಎಂದರೆ 380 ಎಕರೆ ನೀರಾವರಿಯಾಗುತ್ತದೆ. ಇನ್ನೊಂದು Salt water exclusion dam across Suvarna river in Vuppur Village, 1960-61-62-63ರಲ್ಲಿ ಅದ ಕೆಲಸ 7 ಲಕ್ಷದ 60 ಸಾವಿರ ರೂಪಾಯಿನ ಸ್ಕೀಂ ಅದರಲ್ಲಿ 600 ಎಕರೆ ನೀರಾವರಿಯಾಗುತ್ತದೆ. ಸಾಲ್ಟ ವಾಟರ್ ಎಕ್ಸ್‌ಕ್ಲೂಷನ್ ಡ್ಯಾಂ ಅಕ್ರಾಸ್ ರಿವರ್ ಇನ್ ಮತ್ತೂರ್ ವಿಲೇಜ್ ಇದು ನನ್ನ ಕ್ಷೇತ್ರ ಇಲ್ಲಿ 3 ಲಕ್ಷದ 97 ಸಾವಿರ ರೂಪಾಯಿ ಎಸ್ಟಿಮೇಟ್ ಆಗಿದೆ 761 ಎಕರೆ ನೀರಾವರಿಯಾಗುತ್ತದೆ. ಇನ್ನೊಂದು ಕಡವುಕರಿಯ ವೆಂಟೆಡ್ ಡ್ಯಾಂ 3 ಲಕ್ಷ 10 ಸಾವಿರ ರೂಪಾಯಿ ಎಸ್ಟಿಮೇಟನಲ್ಲಿ 548 ಎಕರೆ ನೀರಾವರಿಯಾಗುತ್ತದೆ, ಇವರಲ್ಲಿ ನಾನು ಹೇಳುವುದೇನೆಂದರೆ, ವಿರೋಧ ಪಕ್ಷದ ಸದಸ್ಯರು ಆರಿಸಿ ಬಂದ ಕ್ಷೇತ್ರದಲ್ಲಿ ಕಡಮೆ ಖರ್ಚಿನಲ್ಲಿ ಹೆಚ್ಚು ಎಕರೆ ನೀರಾವರಿಯಾಗತಕ್ಕ ಕೆಲಸವನ್ನು ಬಿಟ್ಟು ಎಲ್ಲಿ ಕಾಂಗ್ರೆಸ್ ಸದಸ್ಯರು ಅರಿಸಿ ಬಂದಿದ್ದಾರೆ ಆ ಕ್ಷೇತ್ರಗಳಲ್ಲಿ ಹೆಚ್ಚು ಖರ್ಚಿನಲ್ಲಿ ಕಡಮೆ ನೀರಾವರಿಯಾಗತಕ್ಕ ಕೆಲಸಗಳನ್ನು ಮಾಡಿದ್ದಾರೆ. ಇದು ಮಲತಾಯಿ ಧೋರಣೆ ತೋರಿಸುತ್ತದೆ ಎಂದು ಹೇಳುತ್ತೇನೆ. ಆಮೇಲೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಸ್ತೆ ಮತ್ತು ಕೆರೆ ಕಟ್ಟೋಣ ಕೆಲಸಗಳಲ್ಲಿ ತಾರತಮ್ಯ ತೋರಿಸಿದ್ದೀರಿ. ಮಾನ್ಯ ಲೋಕೋಪಯೋಗಿ ಮಂತ್ರಿಗಳು ಕೊಟ್ಟ ಒಂದು ಲೆಕ್ಕಾಚಾರ ಎಂದರೆ ಮೊನ್ನೆ ಈ ಸಭೆಯಲ್ಲಿ ನಡೆದ ಚರ್ಚೆಗೆ ಉತ್ತರವಾಗಿ ಹೇಳಿರುವುದನ್ನು ನೋಡಿದರೆ ಗೊತ್ತಾಗುತ್ತದೆ. ಸಾಧಾರಣ 42 ಮೈಲಿ 7 ಫರ್ಲಾಂಗ್ ರಸ್ತೆಗಳನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೆಗೆದುಕೊಂಡಿದ್ದಾರೆ, ಇದು ಎಲ್ಲ ಜಿಲ್ಲೆಗಳಿಗಿಂತಲೂ ಕಮ್ಮಿ ಇದೆ. ಅದೇ ಮಾನ್ಯ ಮಂತ್ರಿಗಳ ಜಿಲ್ಲೆಯಾದ ಗುಲ್ಬರ್ಗಾದಲ್ಲಿ 130 ಮೈಲ್ 6 ಫರ್ಲಾಂಗ್ ತೆಗೆದುಕೊಂಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ರಸ್ತೆಗಳ ಸೌಕರ್ಯ ಬಹಳ ಕಮ್ಮಿ ಇದೆ. ಈಗಿನ ಲೆಕ್ಕಾಚಾರದ ಪ್ರಕಾರವೇ ಮೈಸೂರು ರಾಜ್ಯದಲ್ಲಿ ನೋಡುವುದಾದರೆ ದಕ್ಷಿಣ ಕನ್ನಡ ಜಿಲ್ಲೆಯಷ್ಟು ರಸ್ತೆ ಯಾವ ಜಿಲ್ಲೆಯಲ್ಲೂ ಇಲ್ಲ, ಸಾಧಾರಣ 2,509 ಮೈಲಿ ರಸ್ತೆ ಇದೆ. ಬಾಕಿ ಕಡೆ ಎಂದರೆ ಬೆಂಗಳೂರಿನಲ್ಲಿ 3,000, ಬೆಳಗಾಂನಲ್ಲಿ 3,336, ಧಾರವಾಡದಲ್ಲಿ 3,708, ಮೈಸೂರಿನಲ್ಲಿ 4,324, ನಾರ್ತ್ ಕೆನರಾ 4,699, ಇದನ್ನೆಲ್ಲಾ ನೋಡಿದರೆ.........

ಶ್ರೀ ವೀರೇಂದ್ರಪಾಟೀಲ್.—ಗುಲ್ಬರ್ಗಾದಲ್ಲಿ ಎಷ್ಟಿದೆ ?

ಶ್ರೀ ಬಿ. ಭಾಸ್ಕರಶೆಟ್ಟಿ.—ಅಲ್ಲಿ ಸ್ವಲ್ಪ ಕಡಮೆ ಇದೆ, 1,934 ಮೈಲಿ ಇದೆ. ತಮ್ಮ ಕಾಲದಲ್ಲಿ ರಸ್ತೆ ಜಾಸ್ತಿಯಾಗಿದೆ. ಅಂತೂ ಇದನ್ನೆಲ್ಲಾ ನೋಡುವುದಾದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೆಗೆದುಕೊಂಡಿರುವ ರಸ್ತೆ ಬಹಳ ಕಡಮೆ ಆಗಿದೆ. ಸ್ವಾಮಿ, ನಾನು ಈಗಾಗಲೇ ಹೇಳಿದ್ದೇನೆ ದಕ್ಷಿಣ ಕನ್ನಡ ಜಿಲ್ಲೆ ಬತ್ತದ ಉತ್ಪಾದನೆ, ಅಕ್ಕಿಯ ಉತ್ಪಾದನೆಯಲ್ಲಿ ಸಾಧಾರಣ ನಮ್ಮ ಮೈಸೂರು ರ್‍ಯಾಜದ ಐದನೆ ಒಂದು ಅಂಶ ಉತ್ಪಾದನೆ ಮಾಡುತ್ತಾ ಇದೆ. ಆದರೆ ಅಲ್ಲಿ ನೀರಾವರಿಗೆ ಪಂಪ್ ಸೆಟ್ಟುಗಳನ್ನು ಒದಗಿಸುವುದರ ಲೆಕ್ಕಾಚಾರ ನೋಡಿದರೆ ಅದು ನಿಜವಾಗಿಯೂ ನಾಚಿಕೆಗೇಡು. ಇತ್ತೀಚೆಗೆ ಒಂದೆರಡು ವರ್ಷದಲ್ಲಿ ಸ್ವಲ್ಪ ಪಂಪ್‌ಸೆಟ್ಟುಗಳನ್ನು ಜಾಸ್ತಿಯಾಗಿ ಕೊಟ್ಟಿರಬಹುದು, ಬೇರೆ ರಾಜ್ಯಗಳ ಲೆಕ್ಕಾಚಾರ ತೆಗೆದುಕೊಂಡರೆ ಇದು ಬಹಳ ನಾಚಿಕೆಗೇಡು. ಬೇಕಾದಷ್ಟು ವಿದ್ಯುಚ್ಛಕ್ತಿಯನ್ನು ನಾವು ಉತ್ಪಾದನೆ ಮಾಡುತ್ತಾ ಇದ್ದೇವೆ. ಬೇರೆ ರಾಜ್ಯಗಳಿಗೆ ಮಾರುತ್ತಾ ಇದ್ದೇವೆ. ಜನವರಿ ಅಂತ್ಯದವರೆಗೂ ನಮ್ಮ ಮೈಸೂರು ರಾಜ್ಯದಲ್ಲಿ ಸರ್ವೀಸ್ ಮಾಡಿರುವ ಇರಿಗೇಷನ್ ಪಂಪ್‌ಸೆಟ್ಸ್ 66,548. ನಮ್ಮ ನೆರೆರಾಜ್ಯವಾದ ಮದರಾಸಿನಲ್ಲಿ ಡಿಸೆಂಬರ್ ಅಂತ್ಯದವರೆಗೂ ಕೊಟ್ಟಿರತಕ್ಕ ಪಂಪ್‌ಸೆಟ್ಟುಗಳು 2 ಲಕ್ಷದ 15 ಸಾವಿರದ 324, ಅದೇ ರೀತಿ ಆಂಧ್ರದಲ್ಲಿ 1 ಲಕ್ಷದ 61 ಸಾವಿರದ 192 ಪಂಪ್‌ಸೆಟ್ಟುಗಳನ್ನು ಅವರು ಹಾಕಿದ್ದಾರೆ. ಅಂದರೆ ನಮಗಿಂತ ಸಾಧಾರಣ 19 ಪಾಲು ಅವರು ಹೆಚ್ಚಿಗೆ ನೀರಾವರಿ ಪಂಪ್‌ಸೆಟ್ಟುಗಳನ್ನು ಹಾಕಿದ್ದಾರೆ ಎಂದಮೇಲೆ ನೀರಾವರಿ ಯೋಜನೆಯಲ್ಲಿ ನಾವು ಎಷ್ಟು ಪ್ರಗತಿಯನ್ನು ಹೊಂದಿದ್ದೇವೆ ಎಂಬ ಲೆಕ್ಕಾಚಾರವನ್ನು ಹಾಕಿಕೊಳ್ಳಬಹುದು. ಅದರಲ್ಲೂ ನಮ್ಮ ಜಿಲ್ಲೆಯಲ್ಲಿ ನೋಡಿದರೆ—ಕೋಲಾರವನ್ನು ಬಿಟ್ಟರೆ—ನಮ್ಮ ಜಿಲ್ಲೆಯಲ್ಲೇ ಸ್ವಲ್ಪ ಅಧಿಕವಾಗಿದೆ. 7280 ನೀರಾವರಿ ಪಂಪ್‌ಸೆಟ್ಟುಗಳು ಕೆಲಸ ಮಾಡುತ್ತಾ ಇವೆ, ಈಗ ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳುತ್ತೇನೆ ಇನ್ನೂ ಹತ್ತು ಸಾವಿರ ಪಂಪ್‌ಸೆಟ್ಟುಗಳನ್ನು ನಮ್ಮ ಜಿಲ್ಲೆಗೆ ಕೊಟ್ಟರೆ ಈಗ ಎಷ್ಟು ಆಹಾರ ಉತ್ಪಾದನೆ ಮಾಡುತ್ತಾ ಇದ್ದೇವೆಯೋ ಅದಕ್ಕಿಂತ ಇಮ್ಮಡಿ ಬತ್ತವನ್ನು ಬೆಳೆಸಿ ನಮ್ಮ

ಜಿಲ್ಲೆಯಲ್ಲಿ ಆಹಾರದ ಅಭಾವವೇ ಇಲ್ಲ ಅನ್ನುವಂತೆ ಮಾಡಿಸಿಕೊಡುತ್ತೇವೆ. ಆದರೆ ಪಂಪ್‌ಸೆಟ್ಟು ಗಳನ್ನು ಕೊಡಿಸಿಕೊಡಬೇಕು ಮತ್ತು ರೈತರಿಗೆ ಆದಷ್ಟು ಬೇಗ ವಿದ್ಯುಚ್ಛಕ್ತಿ ಸಿಕ್ಕುವಂತೆ ಮಾಡ ಬೇಕು. ಕಂಬ ಇಲ್ಲ, ವೈರ್ ಇಲ್ಲ ಅಂತ ಹೇಳಿ ಕಾಲವನ್ನು ತಳ್ಳಿಕೊಂಡು ಬರದೇ ಆದಷ್ಟು ಬೇಗ ಅವರಿಗೆ ಬೇಕಾದ ಎಲ್ಲ ಸೌಲಭ್ಯಗಳನ್ನೂ ಒದಗಿಸಬೇಕೆಂದು ಹೇಳುತ್ತೇನೆ ಮಾತ್ರವಲ್ಲದೆ ಈಗಿರುವ ವಿದ್ಯುತ್ ಚಾಲಿತ ಪಂಪ್‌ಸೆಟ್ಟುಗಳಿಗೆ ಸಾಕಷ್ಟು ವೋಲ್ಟೇಜ್ ಇಲ್ಲವೆ ಕೆಲವು ಪಂಪ್ ಸೆಟ್ಟುಗಳು ನಿಂತುಹೋಗಿವೆ. ಮದ್ರಾಸಿಗೆ ಕೊಡುತ್ತೇವೆ, ಆಂಧ್ರಕ್ಕೆ ಕೊಡುತ್ತೇವೆ, ಕೇರಳಕ್ಕೆ ಕೊಡುತ್ತೇವೆ, ಗೋವಾಕ್ಕೆ ಕೊಡುತ್ತೇವೆ ಅಂತ ಹೇಳಿ ನಮ್ಮ ರಾಜ್ಯದಲ್ಲಿರುವ ವಿದ್ಯುಚ್ಛಕ್ತಿಯನ್ನು ಅವರಿಗೆ ಕೊಟ್ಟು ನಮಗೆ ಇಲ್ಲದಂತೆ ಮಾಡಿದ್ದೀರಿ. ದಯಮಾಡಿ ನಮ್ಮ ಪಂಪ್‌ಸೆಟ್ಟುಗಳಿಗೆ ಬೇಕಾದ ವಿದ್ಯುಚ್ಛಕ್ತಿ ಪೂರೈಕೆಯಾಗಲು ವೋಲ್ಟೇಜ್‌ನ್ನು ಜಾಸ್ತಿಮಾಡಲು ಕಡಿಮೆ ವೋಲ್ಟೇಜ್ ಇದ್ದ ಕಡೆ ದೊಡ್ಡ ಲೈನ್‌ನ್ನು ಎಳೆದು ಜಾಸ್ತಿ ಪವರ್ ಕೊಡುವ ಏರ್ಪಾಡು ಮಾಡಲು ತಿಳಿವಳಿಕೆ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಿ ಈ ಡಿಮ್ಯಾಂಡ್‌ನಲ್ಲಿ ಸರಿಯಾಗಿ ಹಣ ಖರ್ಚಾಗುವ ವಿಷಯ ಏನೂ ತೋರದೆ ಇದ್ದುದ್ದರಿಂದ ಇದನ್ನು ವಿರೋಧಿಸಿ ನನಗೆ ಸಮಯ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ನಾಗಮ್ಮ (ಕಲ್ಮಲ).—ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಶಾಖೆಯ ಮಂತ್ರಿಗಳು ಈ ಸಭೆಯ ಮುಂದೆ ಇಟ್ಟಿರುವ ಬೇಡಿಕೆಗಳನ್ನು ನಾನು ಮನಃಪೂರ್ವಕವಾಗಿ ಸ್ವಾಗತಿಸುತ್ತೇನೆ. ನಾನು ಇಲ್ಲಿ ನಮ್ಮ ರೈತರ ದೃಷ್ಟಿಯಿಂದ ಏನೇನು ಕೆಲಸಕಾರ್ಯಗಳು ಆಗ ಬೇಕಾಗಿವೆಯೋ ಅವನ್ನು ಇಲ್ಲಿ ಹೇಳಬೇಕಾಗಿದೆ. ನಮ್ಮ ಕಡೆ ರಸ್ತೆ ಸೌಕರ್ಯ ಚೆನ್ನಾಗಿ ಆಗಿಲ್ಲ. ಈ ಬಾಬಿಗೆ ಮಾನ್ಯ ಮಂತ್ರಿಗಳು ರಾಯಚೂರು ಜಿಲ್ಲೆಗೆ ದುಡ್ಡನ್ನು ಬಹಳ ಕಡಿಮೆಮಾಡಿ ಕೊಡುತ್ತಿದ್ದಾರೆ. ನಾನು ಎಷ್ಟೋ ಸಲ ಈ ರಾಯಚೂರು ಜಿಲ್ಲೆಗೆ ಬಹಳ ಕಡಿಮೆ ಹಣವನ್ನು ಕೊಡುತ್ತಿದ್ದೀರಿ, ಅದನ್ನು ಹೆಚ್ಚುಮಾಡಬೇಕೆಂದು ಹೇಳುತ್ತಾ ಇದ್ದೇನೆ. ಏಕೆಂದರೆ ಅಲ್ಲಿ ಕೆರೆಗಳು, ರಸ್ತೆಗಳು, ಕಟ್ಟಡಗಳು ಹೆಚ್ಚುಹೆಚ್ಚಾಗಿ ಆಗಬೇಕೆಂದು ಸರ್ಕಾರಕ್ಕೆ ಪದೇಪದೇ ಮನವಿಗಳನ್ನು ಮಾಡಿಕೊಂಡಿದ್ದೇನೆ. ಈಗಲಾದರೂ ರಾಯಚೂರು ಜಿಲ್ಲೆಗೆ ಹೆಚ್ಚು ದುಡ್ಡು ಒದಗಿಸಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ರಾಯಚೂರಿನಿಂದ ಕುಲ್ಗಗೂ, ಅರಸಿನಕೆಗೂ ನಾರಗಟ್ಟ ಮುಂತಾದ ತಾಲ್ಲೂಕುಗಳಿಗೆ ಹೋಗುವುದಕ್ಕೆ ಸರಿಯಾದ ರಸ್ತೆ ಸೌಕರ್ಯಗಳಿಲ್ಲ. ಆದ್ದರಿಂದ ಈ ಸಲ ಈ ಎಲ್ಲಾ ರಸ್ತೆ ಸೌಕರ್ಯಗಳನ್ನು ನಮಗೆ ಒದಗಿಸಿಕೊಡಬೇಕೆಂದು ಮನವಿಮಾಡುತ್ತೇನೆ.

ಇನ್ನೊಂದು ವಿಷಯ, ನೀರಾವರಿ ಎಲ್ಲೆಲ್ಲಿ ಬಂದಿದೆಯೋ ಅಲ್ಲೆಲ್ಲಾ ಆಯಕಟ್ಟು ರಸ್ತೆ ಮಾಡಬೇಕೆಂದು ನಾನು ಪದೇ ಪದೇ ಹೇಳುತ್ತಿದ್ದೇನೆ. ಆ ರೀತಿ ಮಾಡದಿದ್ದರೆ ನಮ್ಮಲ್ಲಿ ಯಾವ ಅಭಿವೃದ್ಧಿ ಕೆಲಸಗಳೂ ನಡೆಯುವುದಿಲ್ಲವೆಂದು ನಾನು ಹೇಳಬಯಸುತ್ತೇನೆ. ಏಕೆಂದರೆ, ನಾನು ಯಾವಾಗಲೂ ಜಗಳ ಮಾಡುವುದಿಲ್ಲ. ಮಾನ್ಯ ಮಂತ್ರಿಗಳಿಗೆ ಮನವಿಮಾಡುತ್ತೇನೆ. ವಿರೋಧಪಕ್ಷದವರು ಅಲ್ಲಿ ಕೆಲಸವಾಗಿಲ್ಲ, ಇಲ್ಲಿ ಕೆಲಸವಾಗಿಲ್ಲ, ಇನ್ನೂ ಬೇಕಾದಷ್ಟು ಮಾಡಬೇಕೆಂದು ಮನವಿ ಮಾಡುತ್ತಾರೆ. ಆದರೆ ಎಲ್ಲವನ್ನೂ ಒಮ್ಮೆಯೇ ಮಾಡಬೇಕೆಂದು ಹೇಳಿದರೆ ಎಲ್ಲಿಂದ ಹೇಗೆ ಮಾಡುತ್ತಾರೆ ! ಅದನ್ನು ತಿಳಿದು ಹೇಳಬೇಕು. ಆಲಮಟ್ಟಿ ಮತ್ತು ನಾರಾಯಣಪುರ ಡ್ಯಾಂಗಳನ್ನು ತ್ವರಿತವಾಗಿ ಮಾಡಬೇಕೆಂದು ಮನವಿಮಾಡುತ್ತೇನೆ. ಏಕೆಂದರೆ ಆಲಮಟ್ಟಿ, ನಾರಾಯಣಪುರ ಕೃಷ್ಣಾ ಡ್ಯಾಂಗಳನ್ನು ಷುರುಮಾಡುತ್ತೇವೆಂದು ಹೇಳಿ ಅವು ಇನ್ನೂ ಆಗಲಿಲ್ಲ. ಅವನ್ನು ಕಟ್ಟಿದರೆ ನೀರು ಬರುತ್ತದೆಂದು ಹೇಳಿ ನಾಲ್ಕೈದು ವರ್ಷಗಳಾಗಿವೆ. ಅಲ್ಲಿನ ಜನರು ಅದರ ಬಗ್ಗೆ ಹೆಚ್ಚು ಆಸೆಯನ್ನು ಇಟ್ಟುಕೊಂಡಿದ್ದಾರೆ. ಅದರ ಸಲುವಾಗಿ ವರ್ಷೇ ವರ್ಷೇ 70ಕೋಟಿ ರೂಪಾಯಿಗಳಷ್ಟು ಖರ್ಚಾಗುತ್ತಿದೆ. ವರ್ಷೇ ವರ್ಷೇ ಇಷ್ಟಿಷ್ಟು ಮುಗಿಸಬೇಕೆಂದು ನಾನು ಪದೇ ಪದೇ ಮಾನ್ಯ ಮಂತ್ರಿಗಳಿಗೆ ಮನವಿಮಾಡುತ್ತೇನೆ. ನಮ್ಮಲ್ಲಿ ಚಂದ್ರಬಂಡ್ ಸರ್ಕಲ್ ಬಹಳ ಹಿಂದುಳಿದ ಪ್ರದೇಶ ಅದು ಅಭಿವೃದ್ಧಿಯಾಗಲೇ ಇಲ್ಲ. ಈಗ ಹೋಗಿ ನೋಡಿದರೂ ಅಲ್ಲಿರತಕ್ಕ ಜನರಿಗೆ ಅನ್ನವಿಲ್ಲ. ಈ ವರ್ಷವೇ ಅಲ್ಲಿಗೆ ಒಂದು ಕೆನಾಲನ್ನು ಮಂಜೂರುಮಾಡಿಸಿ ಅಲ್ಲಿನ ಜನರಿಗೆ ನೀರಾವರಿ ಸೌಕರ್ಯಗಳನ್ನು ಮಾಡಿಸಿ ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಿಗೆ ಪದೇ ಪದೇ ಬೇಡುತ್ತೇನೆ.

ಇನ್ನು ದೇವ್—ನಾರಗಟ್ ಸ್ಥಳದ ರಸ್ತೆಯನ್ನು ಜಾಗ್ರತೆಮಾಡಬೇಕೆಂದು ಹೇಳುತ್ತೇನೆ. ಏಕೆಂದರೆ ಅಲ್ಲಿ ಜಾತ್ರೆಯಾಗುತ್ತದೆ. ಅಲ್ಲೊಂದು ಸಣ್ಣ ಸೇತುವೆಯನ್ನು ಕಟ್ಟಬೇಕು. ಅದರ ಸಲುವಾಗಿ ಈ ಸೇತುವೆಯನ್ನು ಮಾಡಲೇಬೇಕೆಂದು ನಾನು ಮನವಿಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಅವರು ಏನು ಮಾಡದಿದ್ದರೆ, ರಾಜೀನಾಮೆ ಕೊಟ್ಟುಬಿಡಿ.

ಶ್ರೀಮತಿ ನಾಗಮ್ಮ.—ನಾನು ಮಾತನಾಡುವಾಗ ಯಾರೂ ದಯವಿಟ್ಟು ಮಧ್ಯೆ ಮಾತನಾಡಬೇಡಿ. ನಿಮ್ಮ ಮಾನ್ಯ ಶ್ರೀ ಸಿದ್ಧವೀರಪ್ಪನವರಿಗೆ ಆನೆ ಹೆಸರು ಇಡೋಣ. ಮಾನ್ಯ ಶ್ರೀ ವಾಟಾಳ್ ನಾಗರಾಜ್ ಅವರಿಗೆ ಒಂಟೆ ಹೆಸರು ಇಡೋಣ.

ಇನ್ನು ರಾಯಚೂರಿನ ಚಂದ್ರಬಂಡ್ ಸರ್ಕಲ್ ಹತ್ತಿರ ಒಂದು ಹೊಸ ಕೆರೆಯನ್ನು ಮಾಡಬೇಕೆಂದು ನಾನು ವಿನಯದಿಂದ ಮೊದಲಿನಿಂದಲೂ ಬೇಡುತ್ತಿದ್ದೇನೆ. ಅದಕ್ಕೆ ಸಂಬಂಧಪಟ್ಟ ಇಂಜನಿಯರ್ ಅದರ ಬಗ್ಗೆ ಅಂದಾಜನ್ನು ಕಳುಹಿಸುತ್ತೇನೆಂದು ಹೇಳಿದ್ದರೂ ಇದುವರೆಗೆ ಕಳುಹಿಸಲಿಲ್ಲ. ಜನ ಎದುರು ನೋಡುತ್ತಿದ್ದಾರೆ. ಆದ್ದರಿಂದ ತಾವು ಈಗಲಾದರೂ ಅದನ್ನು ಮನಸ್ಸಿಗೆ ಹಾಕಿಕೊಂಡು ರಾಯಚೂರು ಜಿಲ್ಲೆಯೊಳಗೆ ಒಳ್ಳೆಯ ಕೆಲಸಗಳು ಆಗಬೇಕಾಗಿವೆ. ರಸ್ತೆಗಳು ಚೆನ್ನಾಗಿ ಆಗಬೇಕು. ಎಲೆಕ್ಟ್ರಿಸಿಟಿ ಬೇಕಾದಷ್ಟು ನಮ್ಮ ಜಿಲ್ಲೆಗೆ ಬರಬೇಕು. ಅವು ಜಾಗ್ರತೆಯಾಗಿ ಬರುವಂತೆ ವ್ಯವಸ್ಥೆಮಾಡಬೇಕು. ಎಲೆಕ್ಟ್ರಿಸಿಟಿ ಪಂಪ್‌ಸೆಟುಗಳನ್ನು ಮಂಜೂರು ಮಾಡಿದ್ದಾರೆ. ನಮ್ಮ ರಾಯಚೂರಿಗೆ ಇದುವರೆಗೂ ಬರಲಿಲ್ಲ. ಮಂತ್ರಿಗಳು ಅಲ್ಲಿಗೆ ಎಷ್ಟು ಬೇಕಾದರೂ ಕೇಳಿ, ಕೊಡುತ್ತೇನೆ, ನನಗೆ ಅದು ಗೊತ್ತಿಲ್ಲ, ಇಲಾಖೆಯವರಿಗೆ ಗೊತ್ತಿದೆ ಎಂಬುದಾಗಿ ಹೇಳಿದ್ದಾರೆ. ಹೈದರಾಬಾದ್ ಕರ್ಣಾಟಕದಲ್ಲಿ ರಾಯಚೂರು ಜಿಲ್ಲೆಯೊಳಗೆ ನಮ್ಮ ಮಾನ್ಯ ಮಂತ್ರಿಗಳು ಒಬ್ಬರೂ ಇನ್ನೂ ಒಂದು ಹೆಜ್ಜೆ ಹಾಕಿಲ್ಲ. ಅವರೆಲ್ಲರೂ ನಮ್ಮ ಜಿಲ್ಲೆಯನ್ನು ನೋಡಿಕೊಂಡು ಹೋಗಿದ್ದರೆ, ಬಹಳ ಚೆನ್ನಾಗಿತ್ತು. ನಮ್ಮ ಊರಿನ ಜಾತ್ರೆಗೆ ಮಾನ್ಯ ಶ್ರೀ ಕಂಠಿಯವರು ಬಂದಿದ್ದರು. ಅವರ ಹಿಂದೆ ನಾನು ಇದ್ದಿದ್ದರೆ ಎಲ್ಲಾ ತೋರಿಸುತ್ತಿದ್ದೆ. ಲೋಕೋಪಯೋಗಿಶಾಖೆಯ ಮಾನ್ಯ ಮಂತ್ರಿಗಳು ಈ ಸಾರಿ ನಮ್ಮ ಜಿಲ್ಲೆಗೆ ಬರುತ್ತೇನೆಂದು ಮೊದಲೇ ಮಾತು ಕೊಟ್ಟಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳ ಸಹಾಗಿ ಅವರ ಜೊತೆಯಲ್ಲಿ ಬಂದರೆ ಚೆನ್ನಾಗಿರುತ್ತದೆಂದು ನಾನು ಪದೇ ಪದೇ ಹೇಳುತ್ತೇನೆ. ಒಟ್ಟಿನಲ್ಲಿ ಚಂದ್ರಬಂಡ್ ಸರ್ಕಲ್‌ಗೆ ಕೆನಾಲ್ ಕೊಡಬೇಕು. ಕೃಷ್ಣಾ ನದಿಯಿಂದ ನಮಗೆ ಅನುಕೂಲವಾಗುತ್ತದೆಂದು ಹೇಳುತ್ತಾರೆ. ಅದು ಇನ್ನು ಎಷ್ಟು ವರ್ಷಗಳಿಗೆ ಬರುತ್ತದೋ ಗೊತ್ತಾಗಲಿಲ್ಲ. ಹಂಗಾಮಿಯಾಗಿಯಾದರೂ ಕೊಡಬಹುದು. ಏಕೆಂದರೆ ರೈತರು ಬಹಳವಾಗಿ ನರಳುತ್ತಿದ್ದಾರೆ. ಆದ್ದರಿಂದ ನೀರಾವರಿ ಕಾಲುವೆ ಕೊಡಬೇಕೆಂದು ನಾನು ಪದೇ ಪದೇ ಬೇಡುತ್ತೇನೆ. ಹೊಸ ಕೆರೆಗಳನ್ನು ಈ ವರ್ಷ ಕಟ್ಟಬೇಕು. ಏಕೆಂದರೆ ನಮ್ಮ ಜನರಲ್ಲಿ ತುಂಬಾ ಬಡತನವಿದೆ. ಹೈದರಾಬಾದ್ ಕರ್ಣಾಟಕ ಬಹಳ ಹಿಂದುಳಿದಿದೆ. ಆದ್ದರಿಂದ ನನ್ನ ಬೇಡಿಕೆಗಳನ್ನು ಜಾಗ್ರತೆಯಾಗಿ ಸರ್ಕಾರದವರು ಮಾಡಿಕೊಡುತ್ತಾರೆಂದು ನಾನು ಭರವಸೆಯುಳ್ಳವಳಾಗಿದ್ದೇನೆ. ನಿಮ್ಮ ದೃಷ್ಟಿ ನಮ್ಮ ಬಡತನ ದೇಶದಮೇಲೆ ಬೀಳಲಿಲ್ಲ. ಜಾಗ್ರತೆಯಾಗಿ ನಮ್ಮ ಕೆಲಸಗಳನ್ನು ಮಾಡಿಕೊಡಬೇಕು. ನಿಮಗೆ ಒಳ್ಳೆಯದಾಗಲಿ ಎಂಬುದಾಗಿ ನಾನು ಹೇಳುತ್ತೇನೆ. ನನಗೆ ಹೆಚ್ಚು ಮಾತನಾಡುವುದಕ್ಕೆ ತಾವು ಅವಕಾಶವನ್ನು ಕೊಡುವುದಿಲ್ಲ. ಮೇಲಿಂದಮೇಲೆ ತಾವು ಗಂಟೆ ಬಾರಿಸುತ್ತಿದ್ದೀರಿ. ನಾನು ಇನ್ನೂ ಮಾತನಾಡುವುದು ಇತ್ತು. ನನಗೆ 10 ನಿಮಿಷಗಳ ಕಾಲವಾದರೂ ಕೊಡಬೇಕು. ಮಾನ್ಯ ಶ್ರೀ ವಾಟಾಳ್ ನಾಗರಾಜ್ ಅವರು ಮಧ್ಯ ಮಧ್ಯೆ ಮಾತನಾಡಿ ನನ್ನ ಭಾಷಣಕ್ಕೆ ಅಡ್ಡಿಮಾಡುತ್ತಿದ್ದಾರೆ. ಅವರಿಗೆ ನಾನು ಒಂಟೆ ಹೆಸರನ್ನು ಕೊಡಬೇಕು. ಮಾನ್ಯ ಶ್ರೀ ಸಿದ್ಧವೀರಪ್ಪನವರಿಗೆ ಆನೆ ಹೆಸರನ್ನು ಕೊಡಬೇಕು. ಆದರೆ ಅವರು ಈಗ ನಮ್ಮ ಮುಂದೆ ಇಲ್ಲ.

ಕೊನೆಯದಾಗಿ, ಅಧ್ಯಕ್ಷರು ನನಗೆ ಇಷ್ಟುಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ಕೆ. ಬೊಮ್ಮೇಗೌಡ (ಕೃಷ್ಣರಾಜಪೇಟೆ).—ಅಧ್ಯಕ್ಷರೇ, ಈಗ ನಮ್ಮ ಮುಂದೆ ಇರತಕ್ಕ ಈ ಲೋಕೋಪಯೋಗಿ ಇಲಾಖೆ ಬೇಡಿಕೆಯನ್ನು ನಾನು ವಿರೋಧಿಸುತ್ತಾ ಒಂದೆರಡು ಅಭಿಪ್ರಾಯಗಳನ್ನು ಇಲ್ಲಿ ಹೇಳಬೇಕೆಂದು ಇಚ್ಛಿಸುತ್ತೇನೆ.

ಲೋಕೋಪಯೋಗಿ ಇಲಾಖೆಯಲ್ಲಿ ಸಿಬ್ಬಂದಿ ಜಾಸ್ತಿಯಾಯಿತು. ಮೊದಲು ಇದ್ದುದಕ್ಕಿಂತ ಈಗ ಅಧಿಕ ಸಂಖ್ಯೆಯಲ್ಲಿ ಸಿಬ್ಬಂದಿ ಜಾಸ್ತಿಯಾಗಿದೆ. ಈ ದೇಶದ ಎಕ್ಸ್‌ಚೆಕರ್ ನಲ್ಲಿ ಎಷ್ಟು ಹಣ ಇದೆಯೋ ಅದರ ಅರ್ಧದಷ್ಟು ದುಡ್ಡು ಸಂಬಳ ರೂಪದಲ್ಲಿ ಕೊಡುತ್ತಿದ್ದಾರೆ. ಆದರೆ ಅಷ್ಟೇ ಮಟ್ಟದಲ್ಲಿ ಅಭಿವೃದ್ಧಿಯಾಗುತ್ತಿದೆಯೇ ಎಂದು ಹೇಳಿದರೆ, ಅದು ನಮ್ಮ ಕಣ್ಣಿಗೆ ಕಾಣುತ್ತಾ ಇಲ್ಲ. ಈಗ ಒಂದಲ್ಲ, ನಾಲ್ಕಾರು ಜನರು ಚೀಫ್ ಇಂಜನಿಯರುಗಳು ನಮ್ಮ ದೇಶದಲ್ಲಿದ್ದಾರೆ. ಚೀಫ್ ಇಂಜನಿಯರುಗಳು ಇವತ್ತಿನ ದಿವಸ ನಮ್ಮ ದೇಶದಲ್ಲಿರುವುದನ್ನು ನೋಡಿದರೆ ಮತ್ತು ಹಿಂದೆ ಈ ದೇಶದಲ್ಲಿ ಆಗಿರತಕ್ಕ ಅಭಿವೃದ್ಧಿಯನ್ನೂ, ಈಗ ಆಗಿರತಕ್ಕ ಅಭಿವೃದ್ಧಿಯನ್ನೂ ಹೋಲಿಕೆಮಾಡಿ ನೋಡಿದರೆ, ಹಿಂದೆ ಒಬ್ಬಿಬ್ಬರು ಚೀಫ್ ಇಂಜನಿಯರುಗಳು ಇದ್ದಂಥ ಕಾಲದಲ್ಲಿ ನಡೆದಂಥ ಕೆಲಸ ಇವತ್ತು ಅಷ್ಟು ಜನ ಚೀಫ್ ಇಂಜನಿಯರುಗಳು ಇದ್ದಾಗ್ಯೂ ನಮ್ಮ ಕಣ್ಣಿಗೆ ಅಷ್ಟು ಅಭಿವೃದ್ಧಿ ಕಾಣಲಿಲ್ಲ. ಎಕ್ಸ್ ಮೈಸೂರು ಕಡೆ ಏನೂ ಅಭಿವೃದ್ಧಿಯಾಗದೇ ಇದ್ದರೂ ಬಹುಶಃ ಇಂಟೆಗ್ರೇಟ್ ಏರಿಯಾಗಳಲ್ಲಿ ಹೆಚ್ಚು ಅಭಿವೃದ್ಧಿಯಾಗುತ್ತಿದೆಯೆಂದು ನನಗನ್ನಿಸುತ್ತಿದೆ.

ಇವತ್ತು ಎಲ್ಲಕ್ಕಿಂತ ಮುಖ್ಯವಾಗಿ ಕಾವೇರಿ ಮತ್ತು ಹೇಮಾವತಿ ನದಿಗಳು ನಮ್ಮ ದೇಶದಲ್ಲಿ ಹರಿಯುತ್ತಿವೆ. ಕಾವೇರಿ ನದಿಯ ನೀರನ್ನು ಬಳಸತಕ್ಕ ವಿಚಾರದಲ್ಲಿ ನಮಗೂ ಮತ್ತು ಮದ್ರಾಸ್ ಸರ್ಕಾರದವರಿಗೂ 1924ರಲ್ಲಿ ಒಂದು ಅಗ್ರಿಮೆಂಟಾಯಿತು. ಅದರ ಅವಧಿ 1974ಕ್ಕೆ ಮುಗಿಯುತ್ತದೆ. ನಾವು ಈ ನದಿಯ ನೀರನ್ನು ಉಪಯೋಗ ಮಾಡತಕ್ಕ ಹಕ್ಕಿದ್ದರೂ ನಾವು ಆ ನೀರನ್ನು ಬಳಸುವುದಕ್ಕೆ ಯಾವ ಪ್ರಯತ್ನಗಳನ್ನೂ ಕೈಗೊಂಡಿಲ್ಲ. ಅತ್ತ ಮದ್ರಾಸಿನವರು ಆ ನೀರಲ್ಲಿ ಎಷ್ಟೆಷ್ಟು ಉಪಯೋಗ ಮಾಡಿಕೊಳ್ಳಬಹುದೋ ಅಷ್ಟನ್ನೂ ಉಪಯೋಗ ಮಾಡಿಕೊಂಡು ಸಿಕ್ಕಿದರೆ ಮತ್ತಷ್ಟು ನೀರನ್ನು ಉಪಯೋಗಿಸುವುದಕ್ಕೂ ಅವರು ಕಾದು ಕುಳಿತಿದ್ದಾರೆ. ಹೀಗೆ ಆ ಮದ್ರಾಸಿನವರು ಈ ನದಿಯ ನೀರಿನಲ್ಲಿ ಅವರಿಗಿದ್ದ ಭಾಗದ ನೀರನ್ನೆಲ್ಲಾ ಸಂಪೂರ್ಣವಾಗಿ ಉಪಯೋಗಿಸಿದ್ದರೆ, ನಾವು ಇಲ್ಲಿ ನಮ್ಮ ಭಾಗದ ನೀರನ್ನು ಉಪಯೋಗಿಸಿಕೊಳ್ಳದೆ ಹಾಗೇ ಕುಳಿತಿದ್ದೇವೆ. ಇಲ್ಲಿ ನಾವು ಯಾವ ಪ್ರಾಜೆಕ್ಟುಗಳನ್ನೂ ತೆಗೆದುಕೊಂಡಿಲ್ಲ. ಆದರೆ ಇತ್ತೀಚೆಗೇನೋ ಹಾರಂಗಿ—ಹೇಮಾವತಿ ಗೋರೂರು ಕಟ್ಟೆ ಈ ಯೋಜನೆಗಳನ್ನು ತೆಗೆದುಕೊಂಡಿದ್ದಾರೆ. ಆದರೆ ಕೆಲಸಗಳು ಬಹಳ ಮಂದಗತಿಯಿಂದ ಸಾಗುತ್ತಿವೆ. ಆ ಪ್ರಾಜೆಕ್ಟುಗಳಿಗೆ ಒಂದೊಂದಕ್ಕೂ ಸುಮಾರು 21-22 ಕೋಟಿ ರೂಪಾಯಿಗಳ ಬಂಡವಾಳವನ್ನು ಹಾಕಬೇಕಾಗಿರತಕ್ಕ ಕಡೆ ನಮ್ಮ ಸರ್ಕಾರದವರು ವರ್ಷಕ್ಕೆ 25 ಲಕ್ಷ, 30 ಲಕ್ಷ, 40 ಲಕ್ಷ ಹೀಗೆ ಖರ್ಚುಮಾಡುತ್ತಿದ್ದಾರೆ. ಹೀಗಾದರೆ ಈ ಕೆಲಸಗಳು ಮುಗಿಯುವುದಕ್ಕೆ ಇನ್ನೂ ಎಷ್ಟು ವರ್ಷಗಳು ಬೇಕೋ ಗೊತ್ತಾಗುವುದಿಲ್ಲ. ಮದ್ರಾಸ್ ಸರ್ಕಾರದವರು 1974ಕ್ಕೆ ಹೊಸ ಅಗ್ರಿಮೆಂಟನ್ನು ಕೇಳಬಹುದು. ಈ ನದಿಯಲ್ಲಿ ಉಳಿಯತಕ್ಕ ನೀರಿನ ಬಗ್ಗೆ ಅವರೂ ಸಹಾ ಒಂದು ಪಾಲನ್ನು ಕೇಳುವುದಕ್ಕೆ ಬರಬಹುದು. ನಾವು ಇಲ್ಲಿ ಆ ನೀರನ್ನು ಇದುವರೆಗೂ ಯಾವ ಕೆಲಸಕ್ಕೂ ಉಪಯೋಗ ಮಾಡಿಕೊಂಡಿಲ್ಲ ಎಂದು ಹೇಳಿದರೆ ಅದಕ್ಕೆ ಅವರು ಹೊಣೆಗಾರರಾಗುವುದಕ್ಕಾಗುವುದಿಲ್ಲ. ಹೀಗೆ ನಾವು ಇಲ್ಲಿಯವರೆಗೂ ನಮ್ಮ ಹಕ್ಕಿನ ನೀರನ್ನು ಉಪಯೋಗಿಸದೆ ಕೈಬಿಟ್ಟ ಕಾರಣದಿಂದ ನಮ್ಮ ನೀರಿನಲ್ಲಿ ನಾವು ಮತ್ತೆ ಮದ್ರಾಸಿನವರಿಗೆ ಒಂದು ಹಕ್ಕನ್ನು ಉಂಟುಮಾಡಿಕೊಡತಕ್ಕ ಪರಿಸ್ಥಿತಿಯುಂಟಾಗಿದೆ. ನಾನು ಇದನ್ನೆಲ್ಲಾ ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ನಮ್ಮ ಸರ್ಕಾರದವರು ಇಲ್ಲಿ ಯಾವ ಒಂದು ಪ್ರಾಜೆಕ್ಟನ್ನು ತೆಗೆದುಕೊಳ್ಳಬೇಕಾದರೂ ಇವರು ಮೀನಾ ಮೇಷ ಎಣಿಸುವುದು ಜಾಸ್ತಿ. ಯಾವುದನ್ನು ಕೇಳಿದರೂ ಸರ್ಕಾರದವರು ದುಡ್ಡಿಲ್ಲ ಎಂದು ಹೇಳುತ್ತಾರೆ. ಈ ದಿವಸ ದೇಶದಲ್ಲಿ ಕುಡಿತವನ್ನು ಮತ್ತೆ ಜಾರಿಗೆ ತಂದಿದ್ದಾರೆ. ಅದರಿಂದ ನಮ್ಮ ಸರ್ಕಾರಕ್ಕೆ ಸುಮಾರು 11 ಕೋಟಿ ಚಿಲ್ಲರೆ ಹೆಚ್ಚಿನ ವರಮಾನ ಬರುತ್ತಿದೆ. ಸರ್ಕಾರದವರು ತೆಗೆದುಕೊಳ್ಳತಕ್ಕ ಹಲವಾರು ಬಾಬುಗಳಲ್ಲಿ ಯಾವುದಾದರೂ ಕೆಲವು ಕೆಲಸಗಳನ್ನು ಹಿಂದಕ್ಕೆ ಹಾಕಿ, ಆ ಬಾಬುಗಳಿಂದ ಉಳಿಯತಕ್ಕ ದುಡ್ಡನ್ನೂ ಮತ್ತು ಪಾನನಿರೋಧ ನೀತಿಯನ್ನು ಸಡಿಲಿಸಿದ್ದರಿಂದ ಬರತಕ್ಕ ವರಮಾನವನ್ನೂ ಎರಡನ್ನೂ ಸೇರಿಸಿ ಈ ಪ್ರಾಜೆಕ್ಟ್‌ಗಳನ್ನು ಮುಗಿಸಬಹುದು. ಕೆಲಸಗಳನ್ನು ಮಾಡಬೇಕು ಎಂಬ ಮನಸ್ಸಿದ್ದರೆ ಅದನ್ನು ಒಂದು ವಾರ್‌ಸ್ಪೀಡಿನಲ್ಲಿ ಮಾಡಿ ಮುಗಿಸುವುದಕ್ಕೆ ಅವಕಾಶವಿದೆ. ಹೀಗೆ ಕೆಲಸಗಳನ್ನು ಮಾಡಿದರೆ ಆ ಅಗ್ರಿಮೆಂಟಿನಲ್ಲಿರತಕ್ಕ ಪ್ರಕಾರ ನಮ್ಮ ನೀರನ್ನು ನಾವು ಉಪಯೋಗಿಸಿದ್ದೂ ಆಗುತ್ತದೆ ಮತ್ತು ದೇಶದಲ್ಲಿ ತಲೆ ಎತ್ತಿರುವ ಆಹಾರಾಭಾವವನ್ನು ನೀಗಲು ಸಾಧ್ಯವಾಗುತ್ತದೆ. ಒಂದು ಪ್ರಯತ್ನದಲ್ಲಿ ಹೀಗೆ ಎರಡು ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿದೆ. ನಮ್ಮ ರಾಜ್ಯದಲ್ಲಿ ಕಳೆದ 2–3 ವರ್ಷಗಳಿಂದ ಮಳೆ ಇಲ್ಲದೆ ಬೆಳೆಗಳಾಗಿಲ್ಲ. ದೇಶದಲ್ಲಿ ಎಲ್ಲಿ ನೋಡಿದರೂ ಕ್ಷಾಮ. ಆಹಾರದ ಪರಿಸ್ಥಿತಿ ಬಹಳ ಉಲ್ಬಣ ಸ್ಥಿತಿಗೇರುತ್ತಿದೆ. ಇಷ್ಟಾಗಿದ್ದರೂ ಸರ್ಕಾರದವರು ಒಂದು ಉಡಾಫೆ ಮನೋಭಾವದಿಂದ ಕೆಲಸಮಾಡುತ್ತಿರುವುದನ್ನು ನೋಡಿ ನನಗೆ ಬಹಳ ದುಃಖವಾಗುತ್ತಿದೆ. ರಾಜ್ಯದ ಯಾವ ಮೂಲೆಯಲ್ಲಿ ನೋಡಿದರೂ ಜನರು ತಿನ್ನುವುದಕ್ಕೆ ಕಾಳಿಲ್ಲದೆ ಬಹಳ ಕೃಶರಾಗಿದ್ದಾರೆ. ಅವರನ್ನು ನೋಡಿದರೆ ಸಮಾಧಿಯಿಂದ ಎದ್ದು ಬರುತ್ತಿರುವ ಹೆಣಗಳಂತೆ ಕಾಣುತ್ತಿದ್ದಾರೆ. ಅವರ ಮೈಯಲ್ಲಿ ಚರ್ಮ ಮತ್ತು ಮೂಳೆಗಳನ್ನು ಬಿಟ್ಟರೆ ಬೇರೇನೂ ಇರುವುದಿಲ್ಲ. ಹಾಗೆ ಜೀವವನ್ನು ಉಳಿಸಿಕೊಂಡು ಬರುತ್ತಿದ್ದಾರೆ. ದೇಶದಲ್ಲಿರತಕ್ಕ ಮೈನರ್ ಮತ್ತು ಮೇಜರ್ ಇರಿಗೇಷನ್ ಕೆಲಸಗಳನ್ನು ಸರ್ಕಾರದವರು ಬಿರುಸಿನಿಂದ ಮಾಡಿದ್ದರೆ ದೇಶದಲ್ಲಿ ವ್ಯವಸಾಯಾಭಿವೃದ್ಧಿಯಾಗುತ್ತಿತ್ತು ಮತ್ತು ಆಹಾರದ ಕೊರತೆಯೂ ತಪ್ಪುತ್ತಿತ್ತು ದೇಶ ಸಮೃದ್ಧಿಯಾಗುತ್ತಿತ್ತು. ಸರ್ಕಾರದವರಲ್ಲಿರತಕ್ಕ ಮಂದಗತಿಯನ್ನು ನೋಡಿ ನಾನು ಬಹಳ ವಿಷಾದ ಪಡುತ್ತಿದ್ದೇನೆ. ನಮ್ಮ ಸರ್ಕಾರದವರು ಯಾವುದಕ್ಕೂ ದುಡ್ಡಿಲ್ಲ ಎನ್ನುವ ವಾದವನ್ನು ಮುಂದಿಡುತ್ತಿದ್ದಾರೆ. ಅದಕ್ಕೆ ನನ್ನ ಸಲಹೆಯಾದರೂ ಇಷ್ಟೆ—ಸರ್ಕಾರದವರು ಈ ದಿವಸ ದೇಶದ ನಾನಾ ಭಾಗಗಳಲ್ಲಿ ನಡೆಸುತ್ತಿರುವ ರಸ್ತೆ ಕೆಲಸಗಳನ್ನು ಕೆಲವು ವರ್ಷಗಳ ಕಾಲ ಅಂದರೆ ಒಂದೆರಡು ವರ್ಷಗಳು ಹಿಂದಕ್ಕಿಟ್ಟು ಆ ಉಳಿತಾಯದ ಹಣವನ್ನು ಈ ಪ್ರಾಜೆಕ್ಟ್‌ಗಳಿಗೆ ಹಾಕತಕ್ಕ ಬಗ್ಗೆ ಅವರು ಒಂದು ನಿರ್ಣಯವನ್ನು ಈ ಸಭೆಯ ಮುಂದೆ ತರಲಿ, ಅದಕ್ಕೆ ನಾವು ನಮ್ಮ ಒಪ್ಪಿಗೆಯನ್ನು ಕೊಡುತ್ತೇವೆ. ಅಂಥ ಒಂದು ಮಾರ್ಗವನ್ನು

(ಶ್ರೀ ಎಂ. ಕೆ. ಬೊಮ್ಮೇಗೌಡ)

ಸರ್ಕಾರ ಕೈಗೊಂಡರೆ ದೇಶದ ಸಂಪತ್ತನ್ನು ಬೆಳೆಸುವುದಕ್ಕೆ ಒಂದು ಮಾರ್ಗವಾಗುವುದು. ಸರ್ಕಾರದವರು ಈ ದಿವಸ ಆ ಗೊರೂರು ಕಟ್ಟೆಗೆ 40 ಲಕ್ಷ ರೂಪಾಯಿಗಳನ್ನು ವರ್ಷಕ್ಕೆ ಖರ್ಚುಮಾಡುತ್ತಿದ್ದಾರೆ. ಆ ಹಣದಲ್ಲಿ ಕೆಲಸವೇನೂ ಸಾಗುತ್ತಿಲ್ಲ. ಅದೆಲ್ಲಾ ಸಿಬ್ಬಂದಿಯ ವೆಚ್ಚಕ್ಕೆ ಖರ್ಚಾಗುತ್ತಿದೆ. ಈ ದಿವಸ ಸರ್ಕಾರದವರು ಅಲ್ಲಲ್ಲೇ ಹೇಳುತ್ತಿರುವ ಈ ಪ್ರಾಜೆಕ್ಟ್‌ಗಳ ಕೆಲಸವೇನಿದೆ ಅದೆಲ್ಲಾ ಹಣ ಸಂಬಳಸಾರಿಗೆಗಾಗಿ ಲಯವಾಗುತ್ತಿದೆ. ಕೆಲಸ ಮಾತ್ರ ಸಾಗುತ್ತಿಲ್ಲ. ಹೀಗಾದರೆ ನಾವು ನಮ್ಮ ದೇಶದಲ್ಲಿರತಕ್ಕ ಸಂಪನ್ಮೂಲಗಳನ್ನು ಬಳಸುವುದಕ್ಕಾಗುವುದಿಲ್ಲ. ಇನ್ನಾದರೂ ಸರ್ಕಾರದವರು ಎಚ್ಚೆತ್ತು ದೇಶಾಭಿವೃದ್ಧಿಯ ಕಡೆಗೆ ತಮ್ಮ ಗಮನವನ್ನು ಕೊಟ್ಟು ನಮ್ಮ ಈ ಪ್ರಾಜೆಕ್ಟ್‌ಗಳೇನಿವೆ ಇದನ್ನು ತ್ವರಿತವಾಗಿ ಮುಗಿಸಲು ಪ್ರಯತ್ನಮಾಡಬೇಕೆಂದು ಹೇಳುತ್ತೇನೆ. ಸರ್ಕಾರದವರು ದುಡ್ಡಿಲ್ಲ ಎನ್ನುವುದರ ಬಗ್ಗೆ ನನ್ನ ಇನ್ನೊಂದು ಸಲಹೆ ಏನಿದೆ ಎಂದರೆ, ಸರ್ಕಾರದವರು ತಮಗೆಷ್ಟು ಬೇಕೋ ಅಷ್ಟು ಡಿಬೆಂಚರ್ ಲೋನನ್ನೆತ್ತಲಿ. ಇಲ್ಲವೇ ವಿಶ್ವಬ್ಯಾಂಕಿನವರಲ್ಲಿ ಸಾಲ ಕೇಳಿ ತರಲಿ. ಅದರ ಬಡ್ಡಿ ಇತ್ಯಾದಿಗಳನ್ನೆಲ್ಲಾ ರೈತರು ತೀರಿಸಿಕೊಳ್ಳುತ್ತಾರೆ. ಇದನ್ನೆಲ್ಲಾ ಕೈ ಬಿಟ್ಟು ಇವರು ನಿಧಾನ ಮಾಡುತ್ತಿರುವುದು ಸರಿಯಿಲ್ಲ. ಆದರೆ ನಮ್ಮ ಸರ್ಕಾರದವರು ದೇಶವನ್ನು ಕಟ್ಟತಕ್ಕ ಮಾರ್ಗದಲ್ಲಿ ಹೋಗುತ್ತಿಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ.

ಇನ್ನೊಂದು ವಿಚಾರ : ಇಂಥಾ ಕಾರ್ಯಗಳನ್ನು ಮಾಡುವಾಗ ಕೆಲವು ಅಡ್ಡಿಆತಂಕಗಳು ಬರುತ್ತವೆ. ಈ ಪ್ರಾಜೆಕ್ಟ್‌ಗಳನ್ನು ಕಟ್ಟುವುದರಲ್ಲೂ ಬಹಳ ರಾಜಕೀಯಗಳು ತಲೆಹಾಕುತ್ತವೆ. ಕೆಲವು ದೊಡ್ಡ ವ್ಯಕ್ತಿಗಳು ಆಡಳಿತವರ್ಗಕ್ಕೆ ದೊಡ್ಡ ಕಂಟಕರಾಗಿದ್ದಾರೆ. ಅಂಥ ವಿಷಯದಲ್ಲಿ ಸರ್ಕಾರದವರು ನಿರ್ದಾಕ್ಷಿಣ್ಯವಾಗಿ ವರ್ತಿಸಬೇಕು. ಆದರೆ ಅಷ್ಟು ಸಾಮರ್ಥ್ಯವಿಲ್ಲ ಇವರಿಗೆ. ಆದುದರಿಂದ ಅವರ ಕೈಲಿ ಸಿಕ್ಕಿಕೊಂಡು ನರಳುತ್ತಿದ್ದಾರೆ. ಈ ಕೆಲಸಗಳನ್ನು ನಾವೂ ನೀವೂ ತೀರ್ಮಾನ ಮಾಡುವುದು ಬೇಡ. ಟೆಕ್ನಿಕಲ್ ಪ್ರಿನ್ಸಿಪಲ್ ಎಲ್ಲಿ ಅವನ್ನು ಕಟ್ಟುವುದಕ್ಕೆ ಸಾಧ್ಯ ಮತ್ತು ಫೀಜಿಬಲ್ ಎಂದು ತೀರ್ಮಾನ ಮಾಡುತ್ತಾರೋ ಅಲ್ಲಿ ಅವುಗಳನ್ನು ಮಾಡೋಣ. ಈ ದಿವಸ ಕಾಂಗ್ರೆಸ್ಸಿನವರು ಅನೇಕರ ಪ್ರಭಾವಕ್ಕೆ ಒಳಗಾಗಿ ಕೆಲಸಮಾಡಬೇಕಾಗಿರುವುದರಿಂದ ದೇಶದಲ್ಲಿ ತ್ವರಿತವಾಗಿ ಆಗಬೇಕಾದ ಕೆಲಸಗಳೆಲ್ಲಾ ಹಿಂದಕ್ಕೆ ಬೀಳುತ್ತಿವೆ. ದೇಶದ ಪ್ರಗತಿ ಬಹಳ ಕುಂಠಿತವಾಗಿದೆ. ಅಧಿಕಾರ ಯಾರೊಬ್ಬರಿಗೂ ಶಾಶ್ವತವಲ್ಲ. ಯಾರೂ ಸದಾ ದೇಶದ ಒಡೆಯರಾಗಿರುತ್ತೇವೆ ಎಂದು ಹೇಳುವುದಕ್ಕಾಗುವುದಿಲ್ಲ. ನಾವೂ ನೀವೂ ಈ ದಿವಸ ದೇಶದ ಅಭಿವೃದ್ಧಿಗೆ ಅಡಚಣೆಯನ್ನೊಡ್ಡಿ ದೇಶದಲ್ಲಿರುವ ಸಂಪನ್ಮೂಲಗಳನ್ನು ಅಭಿವೃದ್ಧಿ ಮಾಡದೆ ಅಶ್ರದ್ಧೆ ಮಾಡಿರುವುದಕ್ಕಾಗಿ ನಾಳೆ ನಾವೂ ನೀವೂ ಜನರ ಅವಹೇಳನಕ್ಕೆ ಗುರಿಯಾಗಬೇಕಾಗುವುದು. ದೇಶದಲ್ಲಿ ಅನೇಕ ಮುಖಂಡರು ಬರುತ್ತಾರೆ—ಅನೇಕರು ಹೋಗುತ್ತಾರೆ. ಆದರೆ ಮುಂದಿನ ಜನಾಂಗ ನಮ್ಮ ಕೆಲಸಕಾರ್ಯಗಳನ್ನು ಜರಿಯುವುದಕ್ಕೆ ಅವಕಾಶಕೊಡದಂತೆ ನಾವು ಕೆಲಸಗಳನ್ನು ನಡೆಸಬೇಕಾಗಿದೆ.

ಇನ್ನೊಂದು ವಿಚಾರ : ನಮ್ಮ ತಾಲ್ಲೂಕಿನಲ್ಲಿ ಮಧ್ಯ ಭಾಗದಲ್ಲಿ ಕಾವೇರಿ ಮತ್ತು ಹೇಮಾವತಿ ನದಿಗಳೆರಡೂ ಹರಿಯುತ್ತಿವೆ. ಇವೆರಡಕ್ಕೂ ನೇರವಾಗಿ ಒಂದು ಸೇತುವೆಯನ್ನು ಹಾಕಬೇಕಾಗಿದೆ. ಅಲ್ಲಿಯ ರೈತರು ಈ ವಿಚಾರದಲ್ಲಿ ಸ್ಥಳೀಯ ಅಧಿಕಾರಿಗಳಲ್ಲಿ ಎಷ್ಟೋ ಮನವಿಗಳನ್ನು ಮಾಡಿಕೊಂಡಿದ್ದರೂ ಅವರ ಪ್ರಾರ್ಥನೆಗೆ ಪುರಸ್ಕಾರವಿಲ್ಲ. ನಾನು ಇದೇ ವಿಚಾರದಲ್ಲಿ ಇಲ್ಲಿ ಒಂದು ಪ್ರಶ್ನೆಯನ್ನು ಸಹಾ ಹಾಕಿದ್ದೆ. ಅಲ್ಲಿ ಕಟ್ಟಹಳ್ಳಿಯ ಬಳಿ ಒಂದು ಸೇತುವೆಯನ್ನು ಹಾಕಿದರೆ ಅದರಿಂದ ಎರಡು ಹೋಬಳಿಯ ಜನರಿಗೆ ಅನುಕೂಲವಾಗುತ್ತದೆ. ಅದನ್ನು ಮಾಡಿಸಿಕೊಡಿ ಎಂದರೆ ಪರಿಶೀಲನೆ ಮಾಡುತ್ತೇವೆ—ಪರಿಶೀಲನೆ ಮಾಡುತ್ತೇವೆ ಎಂತಲೇ ಹೇಳುತ್ತಿದ್ದಾರೆ, ಆದರೆ ಅದನ್ನು ಕೈಗೊಳ್ಳುವುದಕ್ಕೆ ಇವತ್ತಿನವರೆಗೂ ಇವರು ಮನಸ್ಸು ಮಾಡಿಲ್ಲ. ಅದಕ್ಕೆ ಸರ್ಕಾರದವರು ಇನ್ನೊಮ್ಮೆ ಪರಿಶೀಲನೆ ಮಾಡಿ ಆ ಸೇತುವೆಯನ್ನು ಕಟ್ಟಿಸಿಕೊಡಬೇಕೆಂದು ಹೇಳುತ್ತೇನೆ.

ಮತ್ತೊಂದು ವಿಚಾರ. ರೋಡುಗಳಿಗೆ ಸಂಬಂಧಪಟ್ಟ ಹಾಗೆ ಒಂದೆರಡು ವಿಚಾರಗಳನ್ನು ಹೇಳಬೇಕಾಗಿದೆ. ನನ್ನ ತಾಲ್ಲೂಕಿನ ವಿಷಯವನ್ನೇ ಹೇಳುವುದಾದರೆ, ಕೆಲವು ಕಡೆ ರಸ್ತೆಗಳನ್ನು ಮಾಡುವುದಕ್ಕೆ ದುಡ್ಡನ್ನು ಖರ್ಚು ಮಾಡಿದ್ದಾರೆ. ಆದರೆ ಕೆಲಸವನ್ನು ಸರಿಯಾದ ರೀತಿಯಲ್ಲಿ ಮಾಡಿಲ್ಲ. ಕೆಲವು ರಸ್ತೆಗಳಲ್ಲಿ ನಡೆದುಕೊಂಡು ಹೋಗುವುದಕ್ಕಾಗುವುದಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಬೇಕಾದರೆ ಜನಗಳು ಬಹಳ ಕಷ್ಟಪಟ್ಟುಕೊಂಡು ಹೋಗುತ್ತಿದ್ದಾರೆ. ಆರ್.ಸಿ. ರೋಡುಗಳು ಸಂಚಾರಕ್ಕೆ ಯೋಗ್ಯವಿಲ್ಲದ ರೋಡುಗಳಾಗಿವೆ. ಆ ರೋಡುಗಳ ದುರಸ್ತಿಯ ಬಗ್ಗೆ ಸರ್ಕಾರದವರು ಸಾಕಷ್ಟು ಗಮನವನ್ನು ಕೊಟ್ಟಿಲ್ಲ. ಅವುಗಳಿಗೆ ತಂದೆ ತಾಯಿ ಯಾರೂ ಇಲ್ಲದ ಹಾಗಾಗಿದೆ. ಪುನಃ ಸರ್ಕಾರದವರು ಯಾವು

ದಾದರೂ ಒಂದು ರೂಲ್ಸ್ ಮಾಡಿ ಆ ರೋಡುಗಳನ್ನು ತಾಲ್ಲೂಕು ಬೋರ್ಡಿನವರಿಗೆ ವಹಿಸುವುದಕ್ಕೆ ಏರ್ಪಾಡು ಮಾಡಬೇಕು. ಇಲ್ಲದೆ ಇದ್ದರೆ ಸರ್ಕಾರದವರೆ ಅವುಗಳ ಮೇಂಟೆನೆನ್ಸ್ ನೋಡಿಕೊಳ್ಳಬೇಕು. ಕೃಷ್ಣರಾಜಪೇಟೆಯಿಂದ ಶ್ರವಣಬೆಳಗೊಳಕ್ಕೆ ಹೋಗತಕ್ಕಂಥ ಒಂದು ರಸ್ತೆ ಬಹಳ ಮುಖ್ಯವಾದದ್ದು. ಆ ಏರಿಯಾನಲ್ಲಿ ಗ್ರಾಮಾಂತರ ಪ್ರದೇಶದ ಜನಗಳ ಸಮಸ್ಯೆ ಈ ರಸ್ತೆಯ ಮುಖಾಂತರ ಬಗೆ ಹರಿಯುತ್ತದೆ. ಅಂಥಾ ರಸ್ತೆಗೆ ಇದುವರೆಗೆ ಸರ್ಕಾರದವರು ಕೈಹಾಕದೆ ಬಿಟ್ಟಿರತಕ್ಕದ್ದು ಸರಿಯಲ್ಲ. ಯೋಜನೆಯಲ್ಲಿ ಇದರ ಫಾರ್ಮೇಷನ್ನಿಗಾಗಿ 10·6 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಈಗ ಅದನ್ನು ಅಭಿವೃದ್ಧಿ ಮಾಡುವುದಕ್ಕೆ ಅವಕಾಶ ಮಾಡಬೇಕು. ಮತ್ತು ಈ ರಸ್ತೆಗೆ ಮಧ್ಯದಲ್ಲಿ $3\frac{1}{2}$ ಅಥವಾ 4 ಮೈಲಿ ಉದ್ದವಿರುವ ಒಂದು ಸ್ಟೇಟ್ ಫಂಡ್ ರಸ್ತೆಯ ಮಿಸಿಂಗ್ ಲಿಂಕ್ ಇದೆ. ಅದನ್ನು ಈ ರಸ್ತೆಗೆ ಸೇರಿಸಬೇಕೆಂದು ಎಷ್ಟೋ ಸಾರಿ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೇವೆ. ಆದರೂ ಕೂಡ ಅದು ಸರ್ಕಾರದವರ ಗಮನಕ್ಕೆ ಬಂದಿಲ್ಲ. ಒಬ್ಬರು ಎಂ.ಎಲ್.ಎ. ಆಗಿರತಕ್ಕವರು ಇಂಥಾ ಒಂದು ಕೆಲಸವನ್ನು ಮಾಡಬೇಕು ಎಂದು ಹೇಳಿದರೆ ಅದರ ಬಗ್ಗೆ ಸರ್ಕಾರದವರು ಕ್ರಮ ತೆಗೆದುಕೊಳ್ಳದೆ ಉದಾಸೀನಮಾಡತಕ್ಕದ್ದು ಸರಿಯಲ್ಲ. ಎಷ್ಟೋ ದುಡ್ಡು ಲಯವಾಗಿ ಖರ್ಚಾಗಿ ಹೋಗುತ್ತಿದೆ. ಅಂಥಾ ಸಂದರ್ಭದಲ್ಲಿ ಈ ಒಂದು ಕೆಲಸವನ್ನು ಮಾಡಿಕೊಡುವುದರಲ್ಲಿ ಸರ್ಕಾರಕ್ಕೇನು ತೊಂದರೆಯಾಗುವುದಿಲ್ಲ. ಈ ದೃಷ್ಟಿಯಿಂದ ಕೃಷ್ಣರಾಜಪೇಟೆಯಿಂದ ಮೈಸೂರಿಗೆ ಹೋಗತಕ್ಕಂಥ ಒಂದು ಹೈರೋಡು, ಕನ್ನಂಬಾಡಿ ಕಟ್ಟೆಯ ಮೇಲೆ ಹೋಗತಕ್ಕಂಥ ಮಿಸಿಂಗ್ ಲಿಂಕ್‌ರೋಡು ಈ ರಸ್ತೆಗಳ ಬಗ್ಗೆ ಸರ್ಕಾರದವರು ಗಮನಕೊಟ್ಟು ಇವುಗಳನ್ನು ಮಾಡಿಸಿಕೊಡಬೇಕೆಂದು ಹೇಳಿ ಈ ಬೇಡಿಕೆಯನ್ನು ವಿರೋಧಿಸುತ್ತಾ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಲೋಕೋಪಯೋಗಿ ಖಾತೆಯ ಸಚಿವರು ಈ ಸಭೆಯ ಮುಂದಿಟ್ಟಿರತಕ್ಕ ಬೇಡಿಕೆಯನ್ನು ಸಂಪೂರ್ಣವಾಗಿ ಸ್ವಾಗತಿಸುತ್ತಾ ಬಹಳ ಸಂತೋಷದಿಂದ ಕೆಲವು ಮಾತಗಳನ್ನು ಆಡುವುದಕ್ಕೆ ನಾನು ಅಪೇಕ್ಷೆಪಡುತ್ತೇನೆ. ಸಾಕಷ್ಟು ಅಭಿವೃದ್ಧಿಯ ಕಾರ್ಯ ಈ ಲೋಕೋಪಯೋಗಿ ಇಲಾಖೆಯಿಂದ ಆಗುತ್ತದೆ ಎಂದು ಹೇಳಿದರೆ ಅದನ್ನು ಯಾರೂ ಅಲ್ಲಗಳೆಯುವುದಕ್ಕೆ ಅವಕಾಶವಿಲ್ಲ. 1962ರಲ್ಲಿ ಸುಮಾರು 8,864 ಮೈಲಿ ಟಾರು ರಸ್ತೆ ಇದ್ದದ್ದು 13,890 ಮೈಲಿ ಟಾರು ರಸ್ತೆ ಆಗಿದೆ ಎಂದು ಹೇಳುವುದಕ್ಕೆ ನಾನು ಸಂತೋಷಪಡುತ್ತೇನೆ. ಹಾಗೇನೆ 52,352 ಕಿಲೋಮೀಟರ್ ರಸ್ತೆ ನಮ್ಮ ದೇಶದಲ್ಲಿ 1965ನೇ ಇಸವಿಗೆ ಆಗಿದೆ ಎಂದು ಹೇಳಿದರೆ ಯಾರೂ ಅದನ್ನು ಅಲ್ಲಗಳೆಯತಕ್ಕ ವಿಷಯವಲ್ಲ. 305 ದೊಡ್ಡ ಸೇತುವೆಗಳು ಇದ್ದದ್ದು 397 ಸೇತುಗಳು ಆಗಿವೆ. 92 ದೊಡ್ಡ ಸೇತುವೆಗಳು ಹೆಚ್ಚಾಗಿ ಆಗಿವೆ. ಈ ರೀತಿಯಲ್ಲಿ ರಾಜ್ಯದಲ್ಲಿ ಸಾಕಷ್ಟು ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ಅವಕಾಶವಾಗಿದೆ ಆದರೆ ಅನೇಕ ರೀತಿಯಲ್ಲಿ ನ್ಯೂನತೆಗಳು ಇರುವುದನ್ನು ಸರಿಪಡಿಸಬೇಕೆಂದು ನಾನು ಹೋದಸಾರಿ ಹೇಳಿದ್ದೇನೆ ಅದನ್ನು ಸರ್ಕಾರದವರು ಬಹುಶಃ ಯೋಚನೆ ಮಾಡುತ್ತಿಲ್ಲ ಎಂದು ಕಾಣುತ್ತದೆ, ಲೈಸೆನ್ಸ್ ಪದ್ಧತಿಯ ಕಂಟ್ರಾಕ್ಟ್ ಕೆಲಸವನ್ನು ತೆಗೆದುಹಾಕಬೇಕು ಮೊದಲಿನಂತೆ ಕಂಟ್ರಾಕ್ಟ್ ಕೆಲಸ ಮಾಡಿಕೊಂಡು ಹೋಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೋದ ಸಾರಿ ಇಲ್ಲಿ ಪ್ರಸ್ತಾಪ ಮಾಡಿದ್ದೆ. ಈ ಬಗ್ಗೆ ಸರ್ಕಾರದವರು ಕ್ರಮ ತೆಗೆದುಕೊಂಡಂತೆ ಕಾಣುವುದಿಲ್ಲ. ಕಂಪೆನಿಯವರು ಏಜೆಂಟರನ್ನು ನೇಮಿಸಿದ ಹಾಗೆ ಇವೊತ್ತಿನ ದಿವಸ ಈ ಕಂಟ್ರಾಕ್ಟ್ ಕೆಲಸ ಮಾಡುವುದಕ್ಕೆ ಏಜೆನ್ಸಿಗಳು ತಯಾರಾಗಿವೆ ಒಬ್ಬ ಲೈಸೆನ್ಸ್ ಹೋಲ್ಡರು ಏಜೆಂಟರುಗಳ ಮುಖಾಂತರ ಅನೇಕ ಕಂಟ್ರಾಕ್ಟ್ ಕೆಲಸಗಳನ್ನು ಮಾಡಿಸುತ್ತಿದ್ದಾರೆ. ಕಂಟ್ರಾಕ್ಟ್ ಕೆಲಸಕ್ಕೆ ಟೆಂಡರ್ ಹಾಕುವಾಗ ಜಾಸ್ತಿ ಮೊಬಲಗಿಗೆ ಟೆಂಡರನ್ನು ಹಾಕಿ ಅದರ ಮೇಲೆ ಇಷ್ಟು ಪರ್ಸೆಂಟ್ ಜಾಸ್ತಿ ಹಣವನ್ನು ಲೈಸೆನ್ಸ್ ಹೋಲ್ಡರಿಗೆ ಕೊಡಬೇಕೆಂದು ಲೈಸೆನ್ಸ್ ಹೋಲ್ಡರು ಮತ್ತು ಏಜೆಂಟರು ಮಾತನಾಡಿಕೊಂಡು ಕಂಟ್ರಾಕ್ಟ್ ಕೆಲಸವನ್ನು ಎಸ್ಟಿಮೇಟ್ ರೇಟಿಗೆ ಮಾಡುತ್ತಿದ್ದಾರೆ. ಇದರಿಂದ ಒಂದಕ್ಕೆ ಎರಡರಷ್ಟು ಖರ್ಚಾಗುತ್ತದೆ. ಆದ್ದರಿಂದ ಈ ಒಂದು ಪದ್ಧತಿ ಇದೆ ಇದು ಸರಿಯಲ್ಲ. ಇದನ್ನು ತೆಗೆದುಹಾಕಬೇಕು. ಹಿಂದೆ ಈ ಲೈಸೆನ್ಸ್ ಪದ್ಧತಿಯಿರಲಿಲ್ಲ. ಯಾವ ತೊಂದರೆಯೂ ಆಗಿರಲಿಲ್ಲ. ಇಷ್ಟೊಂದು ರೇಟೂ ಜಾಸ್ತಿಯಾಗಿರಲಿಲ್ಲ. ಸಾಕಷ್ಟು ಕಡಿಮೆ ಇತ್ತು ಮತ್ತು ಕೆಲಸ ಕೂಡ ಚೆನ್ನಾಗಿ ನಡೆಯುತ್ತಿತ್ತು. ಈಗ ಕೆಲಸ ಮಾಡಿಸುವುದಕ್ಕೆ ಜಾಸ್ತಿ ಹಣ ಖರ್ಚಾಗುತ್ತಿದೆ. ಅನಿವಾರ್ಯದಿಂದ ನಾನು ಈ ವಿಷಯವನ್ನು ಹೇಳಬೇಕಾಗಿದೆ. ನಾನು ತಾಲ್ಲೂಕುಬೋರ್ಡ್ ಪ್ರೆಸಿಡೆಂಟಾಗಿ ಅನೇಕ ಕೆಲಸಗಳನ್ನು ಮಾಡಿಸಿದ ಒಂದು ಅನುಭವದಿಂದ ಹೇಳುತ್ತಿದ್ದೇನೆ. ಯಾವ ಒಂದು ಕೆರೆಯ ಕೆಲಸವನ್ನಾಗಲೀ ಕಂಟ್ರಾಕ್ಟ್ ಕೊಟ್ಟು ಕಂಟ್ರಾಕ್ಟರ ಮುಖಾಂತರ ಕೆಲಸವನ್ನು ಮಾಡಿಸಿದರೆ 3 ವರ್ಷಗಳ

(ಶ್ರೀ ಕೆ. ಎನ್. ವೀರಪ್ಪಗೌಡ)

ವರೆಗೆ ಆ ಕೆಲಸಕ್ಕೆ ಕಂಟ್ರಾಕ್ಟರು ಜವಾಬ್ದಾರರಾಗಿರಬೇಕು ಎಂದು ಕಂಟ್ರಾಕ್ಟರ ಹತ್ತಿರ ಅಗ್ರಿಮೆಂಟ್ ಬರೆಸಿಕೊಳ್ಳಬೇಕು ಎಂದು ತೀರ್ಮಾನಿಸಿ ಅದರಂತೆ ಮಾಡಿಸುತ್ತಿದ್ದೇವೆ. ಕಾನೂನು ಹೇಗೆ ಇಲ್ಲ ಏತಕ್ಕೆಂದರೆ ಫೈನಲ್ ಬಿಲ್ ಕೊಟ್ಟಮೇಲೆ ಆ ಕಂಟ್ರಾಕ್ಟರ ಮೇಲೆ ಜವಾಬ್ದಾರಿ ಇರುವುದಿಲ್ಲ. ಫೈನಲ್ ಬಿಲ್ ಆದಮೇಲೆ ಕಂಟ್ರಾಕ್ಟರು ಮಾಡಿಸಿದಂತಹ ಎಷ್ಟೋ ಕೆಲಸಗಳು ಬಿದ್ದುಹೋಗುತ್ತವೆ. ಆದ್ದರಿಂದ ಆ ರೀತಿ ಅಗ್ರಿಮೆಂಟ್ ಮಾಡಿಸಿಕೊಳ್ಳುವುದಾದರೆ, ಫೈನಲ್ ಬಿಲ್ ತೆಗೆದುಕೊಂಡರೂ ಮಾಡಿದ ಕೆಲಸದಲ್ಲಿ ಏನಾದರೂ ಡ್ಯಾಮೇಜ್ ಆದರೆ ಜವಾಬ್ದಾರಿನ ಅವರಮೇಲೆ ಫಿಕ್ಸಾಗುತ್ತದೆ ಎನ್ನುವ ದೃಷ್ಟಿಯಿಂದ ಕಂಟ್ರಾಕ್ಟರು ಕೆಲಸವನ್ನು ಚೆನ್ನಾಗಿ ಮಾಡುತ್ತಾನೆ. ಮತ್ತು ಡ್ಯಾಮೇಜ್ ಆದ ಕೆಲಸಕ್ಕೆ ಅವರಮೇಲೆ ಜವಾಬ್ದಾರಿ ಹಾಕಿ ಅವರಮೇಲೆ ಕ್ರಮ ತೆಗೆದುಕೊಳ್ಳಬಹುದು.

ಇನ್ನೊಂದು ವಿಷಯ ಈಗ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಅತ್ಯುತ್ತಮವಾದ ಆಡಳಿತ ನಡೆಯಬೇಕಾದರೆ ಅಧಿಕಾರ ವಿಕೇಂದ್ರೀಕರಣವಾಗಬೇಕು. ಕೆಲಸಗಳನ್ನು ಮಂಜೂರು ಮಾಡಲು ಅಸಿಸ್ಟೆಂಟ್ ಇಂಜನಿಯರು ಮತ್ತು ಎಗ್ಸಿಕ್ಯುಟೀವ್ ಇಂಜಿನಿಯರುಗಳಿಗೆ ಇದ್ದ ಅಧಿಕಾರವನ್ನು ಮೊಟಕು ಮಾಡಿರುವುದರಿಂದ ಯೋಜನೆಯ ಅಂದಾಜು ಬೆಂಗಳೂರಿಗೆ ಬಂದು ವಾಪಸ್ಸು ಹೋಗಬೇಕಾದರೆ ಒಂದಕ್ಕೆ ಎರಡರಷ್ಟು ಎಸ್ಟಿಮೇಟ್ ಜಾಸ್ತಿಯಾಗುತ್ತೆ. ಮತ್ತು ತೊಂದರೆಯಾಗುತ್ತದೆ. ಇನ್ನು ಮಾನ್ಯ ಮಂತ್ರಿಗಳು ಯೋಚನೆ ಮಾಡಬೇಕು. 10 ಸಾವಿರ ರೂಪಾಯಿಗಳವರೆಗೂ ಇರತಕ್ಕ ಕೆಲಸಗಳನ್ನು ಮಂಜೂರು ಮಾಡುವ ಅಧಿಕಾರವನ್ನು ಅಸಿಸ್ಟೆಂಟ್ ಇಂಜಿನಿಯರಿಗೆ ಕೊಟ್ಟರೆ ಏನೂ ತಪ್ಪಾಗುವುದಿಲ್ಲ ಎಂದು ನನ್ನ ಅಭಿಪ್ರಾಯ. 3 ಸಾವಿರ ರೂಪಾಯಿಗಳ ಕೆಲಸವಾಗಲೀ 5 ಸಾವಿರ ರೂಪಾಯಿಗಳ ಕೆಲಸವಾಗಲೀ 10 ಸಾವಿರ ರೂಪಾಯಿಗಳವರೆಗಿನ ಕೆಲಸವನ್ನು ಮಂಜೂರುಮಾಡುವ ಅಧಿಕಾರವನ್ನು ಅವರಿಗೆ ಕೊಟ್ಟು ಆ ಕೆಲಸದ ಜವಾಬ್ದಾರಿಯನ್ನು ಅವರಿಗೆ ವಹಿಸಿದರೆ ಕೆಲಸಗಳು ಅದಷ್ಟು ಜಾಗ್ರತೆ ಆಗುವುದಕ್ಕೆ ಅನುಕೂಲವಾಗುತ್ತದೆ ಕಾಲ ಕಳೆದಷ್ಟು ಎಸ್ಟಿಮೇಟ್ ರಿವೈಜು ಆಗುತ್ತಾ ಇರುತ್ತೆ.

ಆಮೇಲೆ ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ 4–5 ಕೆಲಸಗಳ ಎಸ್ಟಿಮೇಟ್ ಬಡ್ಜೆಟ್ಟಿನಲ್ಲಿ ಸೇರಿಸಿದ್ದಾರೆ. ಇದರಲ್ಲಿ ನಾಲ್ಕು ಕೆಲಸಗಳು ಈಗಾಗಲೇ ಪೂರೈಸಿವೆ. ಹೊಸದಾಗಿ ಒಂದು ಕೆಲಸವನ್ನು ಮಾತ್ರ ಸೇರಿಸಿದ್ದಾರೆ. ಆದರೆ ಬಡ್ಜೆಟ್ಟಿನಲ್ಲ 4-5 ಕೆಲಸಗಳನ್ನು ಸೇರಿಸಿಕೊಂಡು ಲಕ್ಷಗಟ್ಟಲೇ ಆ ಕೆಲಸಗಳಿಗೆ ಹಣವನ್ನು ಮಂಜೂರು ಮಾಡಿದ್ದಾರೆ ಎನ್ನುವ ರೀತಿಯಲ್ಲಿ ಅದರಲ್ಲಿ ತೋರಿಸಿದ್ದಾರೆ. ಒಂದು ಉದಾಹರಣೆ ಹೇಳುವುದಾದರೆ ಚಿಕ್ಕಮಗಳೂರಿನಿಂದ ಹೊಸತಾರೆಕೊಪ್ಪ 50 ಮೈಲಿ ಇದೆ. ಆ ರಸ್ತೆಯನ್ನು ಟಾರು ಮಾಡಿಸಿದ್ದಾಗಿದೆ. ಮಾನ್ಯ ಮಂತ್ರಿಗಳು ಸಹ ಆ ರಸ್ತೆಯಲ್ಲಿ ಪ್ರವಾಸ ಮಾಡಿದ್ದಾರೆ. ಮತ್ತೆ ಈ ಸಾಲಿನ ಬಡ್ಜೆಟ್‌ನಲ್ಲಿ ಇದೇ ಕೆಲಸಕ್ಕೆ 12 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆಂದು ಹೇಳುತ್ತಿದ್ದಾರೆ. ಇಂತಹ ವಿಷಯಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಮಂತ್ರಿಗಳಿಗೆ ಸರಿಯಾಗಿ ತಿಳಿಸಬೇಕು. ಕೆಲಸ ಆಗಿದೆ ಎಂದು ಬಡ್ಜೆಟ್ಟಿನಲ್ಲಿ ಸೇರಿಸಬಾರದು.

ಇನ್ನು ಅನೇಕ ಸೇತುವೆಗಳು 1960-61ನೇ ಇಸವಿಯಲ್ಲಿ ಸರ್ಕಾರದಿಂದ ಮಂಜೂರಾಗಿದ್ದರೂ ಸಹ ಸ್ಥಳೀಯ ರಾಜಕೀಯ ಕಾರಣಗಳಿಂದ ಆ ಕೆಲಸಗಳು ಮುಗಿಯದೆ ನಿಂತಿವೆ. 1960-61ರಲ್ಲಿ ಮುಡುಬಿ ಸೇತುವೆ ಕಟ್ಟುವ ಬಗ್ಗೆ ಆರೂಕಾಲು ಲಕ್ಷಕ್ಕೆ ಎಸ್ಟಿಮೇಟ್ ಆಗಿ ಮಂಜೂರಾಗಿ ಕೆಲಸ ತೆಗೆದುಕೊಳ್ಳದೆ ಈಗ ಮತ್ತೆ ರೀ-ಎಸ್ಟಿಮೇಟ್ ಹದಿಮೂರುಮುಕ್ಕಾಲು ಲಕ್ಷಕ್ಕೆ ತಯಾರಾಗಿ ಕೇಂದ್ರ ಸರ್ಕಾರದ ಅನುಮತಿಗೆ ಹೋಗಿದೆ. ಯಾರೋ ತರಲೆ ಮಾಡಿದರು ಎಂದು ಕೆಲಸ ನಿಲ್ಲಿಸಿದ್ದನ್ನು ನೋಡಿದರೆ, ನಿಜವಾಗಿಯೂ ರಾಜ್ಯದ ಬೊಕ್ಕಸಕ್ಕೆ ಎಷ್ಟು ಹೆಚ್ಚಿನ ಖರ್ಚು ಬರುತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಕೆಲವು ಟೆಕ್ನಿಕಲ್ ಕೇಸಸ್ ಬಗ್ಗೆ ಸರ್ಕಾರದವರು ನಿರ್ಧಾರ ಕೈಕೊಳ್ಳುವುದಕ್ಕೆ ಸಂಪೂರ್ಣ ಅಧಿಕಾರವಿದೆ. ಹಾಗೆ ಮಾಡಿದರೆ. ಇದರಿಂದ ವೃಥಾ ಹಣ ಹೆಚ್ಚಾಗಿ ಖರ್ಚು ಆಗುತ್ತದೆ. ಇದಕ್ಕೆಲ್ಲಾ ಸರ್ಕಾರದವರು ಅವಕಾಶ ಕೊಡಬಾರದು. ಈಗಾಗಲೇ ಪ್ಲಾನ್ ಅಂಡ್ ಎಸ್ಟಿಮೇಟ್ ತಯಾರಾಗಿ ಮಂಜೂರಾಗಿರತಕ್ಕಂಥ ಸೇತುವೆಗಳನ್ನು ಜಾಗ್ರತೆ ಕಟ್ಟಿ ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಕೆಲವು ಸೇತುವೆ ಕೆಲಸಗಳು 6-7 ವರ್ಷಗಳ ಹಿಂದೆ ಮಂಜೂರಾಗಿದ್ದರೂ ಸಹ ಇದುವರೆಗೆ ಕಾರ್ಯಗತವಾಗಿಲ್ಲ. ಒಂದು ಕಡೆ ಮಂಜೂರಾದಂಥ ಕೆಲಸವನ್ನು ಮೊದಲು ತೆಗೆದುಕೊಳ್ಳದೆ ಮತ್ತೊಂದು ಕಡೆ ತೆಗೆದುಕೊಳ್ಳುತ್ತಿದ್ದಾರೆ. ಈ ರೀತಿ ಮಾಡುವುದನ್ನು ನಿಲ್ಲಿಸಬೇಕು.

ಇನ್ನು ಮಿಯರ್ ಫೌಂಟ್ ಬಗ್ಗೆ ಹೇಳಿದ್ದೇನೆ. ಮಾನ್ಯ ಮಂತ್ರಿಗಳು ಅಲ್ಲಿಗೆ ಪ್ರವಾಸ ಬಂದಾಗ ನಮ್ಮ ಏರಿಯಾಕ್ಕಿಂತ ಈ ಪ್ರದೇಶ ಹಿಂದುಳಿದಿದೆ ಎಂಬುದನ್ನು ಒಪ್ಪಿಕೊಂಡಿದ್ದಾರೆ, ಅಲ್ಲಿ ಆಗಬೇಕಾದಂಥ ಕೆಲಸದ ಬಗ್ಗೆ ಕೇಂದ್ರ ಸರ್ಕಾರದ ಮಂಜೂರಾತಿ ಆಗಿದೆ ಎಂದು ತಿಳಿದಿದ್ದೇನೆ. ಇದರಿಂದ ಕೋಟ್ಯಾಂತರ ರೂಪಾಯಿ ಉತ್ಪತ್ತಿಯು ಬರುತ್ತೆ. ಕೆಲವು ಕಾರಣಾಂತರಗಳಿಂದ ಈ ಕೆಲಸವನ್ನು ಮುಂದೆ ಹಾಕಬೇಕಾಗಿ ಬಂತು, ಇನ್ನು ಒಂದೆರಡು ವರ್ಷಗಳಲ್ಲಿ ಮುಗಿಸುತ್ತೇವೆಂದು ಸಹ ಹೇಳಿದ್ದಾರೆ. ಈ ಬಗ್ಗೆ ಹೆಚ್ಚಿನ ಗಮನವನ್ನು ಕೊಡ ಬೇಕೆಂದು ಹೇಳುತ್ತೇನೆ.

ಇನ್ನು ಶ್ರೀಮತಿ ನಾಗಮ್ಮನವರು ಹೇಳಿದಂತೆ ಪ್ರತಿ ಜಿಲ್ಲೆಗೂ ಒಂದೊಂದು ಕೈಗನ್ನಡಿ ಯನ್ನು ತಯಾರಿಸುವುದು ಒಳ್ಳೆಯದು. ಆಯಾ ಜಿಲ್ಲೆಗಳಲ್ಲಿ ಇದುವರೆಗೆ ಎಷ್ಟು ಕೆಲಸಗಳು ಆಗಿವೆ, ಎಷ್ಟು ಕೆಲಸಗಳನ್ನು ತೆಗೆದುಕೊಳ್ಳಬೇಕಾಗಿದೆ ಮತ್ತು ಪ್ರತಿ ವರ್ಷ ಎಷ್ಟು ಹಣ ಖರ್ಚು ಆಗುತ್ತಿದೆ ಎಂಬ ಬಗ್ಗೆ ವಿವರಗಳನ್ನು ಕೈಗನ್ನಡಿ ಮೂಲಕ ಜನರಿಗೆ ತಿಳಿಸುವುದು ಒಳ್ಳೆಯದೆಂದು ಕಾಣುತ್ತದೆ. ಏಕೆಂದರೆ ಈಗ ಸರ್ಕಾರದವರು ಒಂದೇ ಭಾಗದಲ್ಲಿ ಹಣವನ್ನು ಖರ್ಚು ಮಾಡುತ್ತಿದ್ದಾರೆಂದು ಕಾಣುತ್ತದೆ. ಕೆಲವು ಭಾಗಗಳಲ್ಲಿ ಮಾಡಬೇಕಾಗುತ್ತದೆ. ನಾನೂ ಸಹ ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳಿಗೆ ಹೋಗಿ ನೋಡಿದ್ದೇನೆ. ಆ ಜಿಲ್ಲೆಗಳು ಬಹಳ ಹಿಂದುಳಿದಿಯೆಂಬುದನ್ನು ಸಂಪೂರ್ಣವಾಗಿ ಒಪ್ಪಿಕೊಂಡಿದ್ದೇನೆ. ಇಂತಹ ಭಾಗಗಳಲ್ಲಿ ಬೇಕಾದರೆ ಹೆಚ್ಚು ಹಣ ಖರ್ಚು ಮಾಡಿ ಹೆಚ್ಚು ಕೆಲಸಗಳನ್ನು ಮಾಡಿಸಲಿ. ಹಿಂದುಳಿದ ಜಿಲ್ಲೆಗಳನ್ನು ಎಲ್ಲವನ್ನೂ ಒಂದೇ ರೀತಿ ಅಭಿವೃದ್ಧಿಪಡಿಸಬೇಕು. ಉಳಿದ ಜಿಲ್ಲೆಗಳಲ್ಲಿ ಕೆಲಸ ಮಾಡಿಸುವಾಗ ಎಲ್ಲಾ ಜಿಲ್ಲೆಗಳಿಗೂ ಒಂದೇ ರೀತಿಯ ಅನುಕೂಲ ಆಗುವಂತೆ ಹಣ ಕೊಡಬೇಕೆಂದು ಹೇಳುತ್ತೇನೆ.

ಇನ್ನು ವಿದ್ಯುಚ್ಛಕ್ತಿ ವಿಚಾರದಲ್ಲಿ ಸ್ವಲ್ಪ ಮಾತನಾಡಬೇಕಾಗಿದೆ. ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು, ಒಂದು ಹಾರ್ಸ್ ಪವರ್ ವಿದ್ಯುಚ್ಛಕ್ತಿ ಒದಗಿಸಬೇಕಾದರೆ ಒಂದು ಸಾವಿರ ರೂಪಾಯಿಗಳ ಠೇವಣಿ ಇಡಬೇಕೆಂದು. ಇದು ನಡೆಯುತ್ತದೆಯೇ ಎಂಬುದನ್ನು ಸಂಪೂರ್ಣವಾಗಿ ವಿಮರ್ಶೆಮಾಡಿ ಹೇಳಬೇಕಾಗಿತ್ತು. ಆದಷ್ಟು ರೈತರಿಗೆ ಅನುಕೂಲ ಮಾಡಿಕೊಡಬೇಕಾದುದು ಸರ್ಕಾರದವರ ಕರ್ತವ್ಯ. 5 ಹಾರ್ಸ್ ಪವರ್‌ಗೆ ಕಡಿಮೆ ವಿದ್ಯುಚ್ಛಕ್ತಿ ತೆಗೆದುಕೊಳ್ಳುವುದು ಬಹಳ ಕಡಿಮೆ ಅಂದರೆ 5 ಸಾವಿರ ರೂಪಾಯಿಗಳನ್ನು ಕೊಡಬೇಕಾಗುತ್ತದೆ. 5 ಸಾವಿರ ರೂಪಾಯಿಗಳ ಠೇವಣಿ ಮಾಡುವ ಸಾಮರ್ಥ್ಯ ಎಷ್ಟು ಜನ ರೈತರಿಗಿದೆ? ಏತಕ್ಕೆ ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿ ಯನ್ನು ರೈತರಿಗೆ ಒದಗಿಸಬಾರದು. ಈ ರೀತಿ ಅಡ್ಡಿ ಆತಂಕಗಳನ್ನು ಇಟ್ಟು ನೀರಾವರಿ ಪಂಪ್ ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಹೆಚ್ಚಾಗಿ ಉಪಯೋಗಿಸಿ ಎಂದು ಹೇಳುತ್ತಿರುವುದು ಸರಿಯಲ್ಲ. ಆದ್ದರಿಂದ ಈಗಿರುವ ಪದ್ಧತಿಯನ್ನೇ ಇಡಬೇಕೆಂದು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ. ಮಿನಿಮಂ ಕಟ್ಟುವುದಕ್ಕೆ ರೈತರಲ್ಲಿ ಹಣವಿಲ್ಲದಿರುವಾಗ 5 ಸಾವಿರ ರೂಪಾಯಿಗಳನ್ನು ಕಟ್ಟ ಬೇಕೆಂದರೆ ಬಹಳ ತೊಂದರೆಯಾಗುತ್ತದೆ. ಇದನ್ನು ತೆಗೆದುಹಾಕಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡಿ ಇಷ್ಟೊಂದು ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನಾನು ಹೇಳಿದಂಥ ವಿಚಾರಗಳ ಬಗ್ಗೆ ಸರ್ಕಾರದವರು ತೀವ್ರವಾದಂಥ ಗಮನ ಕೊಡಬೇಕೆಂದು ಮತ್ತೊಮ್ಮೆ ಒತ್ತಾಯಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಶ್ರೀನಿವಾಸಪುರ).—ಮಾನ್ಯ ಅಧ್ಯಕ್ಷರೇ, ಇದುವರೆಗೆ ಸ್ವಾರಸ್ಯಕರವಾದಂಥ ಭಾಷಣಗಳು ಇಲ್ಲಿ ನಡೆದಿವೆ. ದಕ್ಷಿಣ ಕನ್ನಡ ಜಿಲ್ಲೆಯ ಮಾನ್ಯ ಸದಸ್ಯರುಗಳು ತಮ್ಮ ಜಿಲ್ಲೆಗೆ ಹೆಚ್ಚು ಹಣ ಖರ್ಚು ಮಾಡಬೇಕೆಂದು ಕೇಳಿಕೊಂಡರೆ, ಮೈಸೂರು ಜಿಲ್ಲೆಯ ಮಾನ್ಯ ಸದಸ್ಯರುಗಳು ತಮ್ಮ ಜಿಲ್ಲೆಗೆ ಹೆಚ್ಚು ಹಣವನ್ನು ಖರ್ಚು ಮಾಡಬೇಕೆಂದು ಕೇಳಿಕೊಂಡರು. ಒಂದು ವಿಷಯ ಜ್ಞಾಪಕಕ್ಕೆ ಬರುತ್ತದೆ, ಏನೆಂದರೆ 'ಉಪ್ಪಿನ ವ್ಯಾಪಾರಿ ಹೇಚಾಡುವುದನ್ನು ನೋಡಿ ತೆಂಗಿನಕಾಯಿ ವ್ಯಾಪಾರಿ ಬಿಕ್ಕಿ ಬಿಕ್ಕಿ ಅತ್ತ' ಎಂಬಂತೆ. ನಮ್ಮ ಸರ್ಕಾರದವರು ಎಲ್ಲಾ ಜಿಲ್ಲೆಗಳಿಗಿಂತಲೂ ನಮ್ಮ ಕೋಲಾರ ಜಿಲ್ಲೆಗೆ ಪ್ರತಿ ವರ್ಷ ಬಹಳ ಕಡಿಮೆ ಹಣವನ್ನು ಖರ್ಚು ಮಾಡುತ್ತಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯವರಿಗೆ ದೈವದತ್ತವಾದಂಥ ನೀರಾವರಿ ಸೌಕರ್ಯವಿದೆ. ಆ ರೀತಿಯಾದಂಥ ಸೌಕರ್ಯ ನಮ್ಮ ಜಿಲ್ಲೆಯಲ್ಲಿ ಇಲ್ಲ. ಈ ರೀತಿ ಇದ್ದರೂ ಸಹ ಸರ್ಕಾರದವರು ನಮ್ಮ ಜಿಲ್ಲೆಯಲ್ಲಿ ಹೆಚ್ಚಿನ ಹಣವನ್ನು ಖರ್ಚು ಮಾಡಿ ಸಾಕಷ್ಟು ಕೆಲಸಗಳನ್ನು ಮಾಡಿಸುತ್ತಿಲ್ಲ. ಎಷ್ಟು ಪ್ರಮೇಯವಿದೆಯೋ ಅಷ್ಟನ್ನಾದರೂ ಕೆಲಸ ಮಾಡಿಸಿ ಎಂದು ಕೇಳಿಕೊಳ್ಳುತ್ತಿದ್ದೇನೆ. ಸ್ವಾತಂತ್ರ್ಯ ಬಂದು ಎರಡು ದಶಕಗಳು ಆದರೂ ಸಹ ಹಿಂದಿನ ಕಾಲದಲ್ಲಿ ಕಟ್ಟಿದಂಥ ಕೆರೆಕಟ್ಟೆಗಳ ದುರಸ್ತಿ ಕೆಲಸ ಸಕಾಲದಲ್ಲಿ ಆಗುತ್ತಿಲ್ಲ. ಈ ಬಗ್ಗೆ ರೈತರು ಸರ್ಕಾರಕ್ಕೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಅರ್ಜಿ ಹಾಕಿಕೊಂಡರೂ ಸಹ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಇದನ್ನು

(ಶ್ರೀ ಬಿ. ಎಲ್. ನಾರಾಯಣಸ್ವಾಮಿ)

ಮಾನ್ಯ ಸಚಿವರು ಗಮನಿಸಬೇಕು. ಇನ್‌ವೆಸ್ಟಿಗೇಷನ್ ಡಿವಿಜನ್ ಅವರು ಎಲ್ಲೆಲ್ಲಿ ಕೆಲಸವಾಗಬೇಕೆಂದು ಇನ್‌ವೆಸ್ಟಿಗೇಟ್ ಮಾಡಿ ಒಂದು ರಿಪೋರ್ಟ್ ಕೊಡುತ್ತಾರೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಸರಿಯಾದ ಕ್ರಮ ತೆಗೆದುಕೊಳ್ಳದೆ ಕೆಲವು ರಿಪೋರ್ಟ್‌ಗಳು 10 ವರ್ಷದಿಂದ ಪೆಂಡಿಂಗ್ ಇವೆ. ಆಗಾಗ್ಗೆ ಆಫೀಸರ್‌ಗಳ ವರ್ಗಾವರ್ಗಿಯಾಗುವುದು ಸಹ ಈ ರೀತಿ ಕೆಲಸವಾಗದಿರುವುದಕ್ಕೆ ಕಾರಣವೆಂದು ತಿಳಿದುಬಂದಿದೆ. ಇದರ ಜೊತೆಗೆ ಸರ್ಕಾರದವರು ಸಹ ಯಾರೋ ಕಂಟ್ರಾಕ್ಟರ್‌ಗೆ ಅನುಕೂಲ ಮಾಡಿಕೊಡಬೇಕೆಂದು ಅವರು ಕೇಳಿದಂಥ ಕಡೆಯಲ್ಲಿ ಕೆಲಸ ಮಾಡಿಸಿ ಉಳಿದ ಕಡೆಗಳಲ್ಲಿ 10 ವರ್ಷವಾದರೂ ಸಹ ಸಂಬಂಧಪಟ್ಟ ಕೆಲಸಗಳ ಬಗ್ಗೆ ಅಂದಾಜು ತಯಾರಾಗಿದ್ದರೂ ಸಹ ಕೆಲಸ ಮಾಡಿಸುತ್ತಿಲ್ಲ. ಇದರಿಂದ ಅರ್ಥವಾಗುತ್ತದೆ, ನಮ್ಮ ಸರ್ಕಾರದವರ ಹತ್ತಿರ ಒಂದು ಸಮಗ್ರವಾದಂಥ ಯೋಜನೆ ಇಲ್ಲವೆಂದು. ಎಲ್ಲಿ ಅತ್ಯಾವಶ್ಯಕವಾಗಿ ಕೆಲಸ ಮಾಡಿಸಬೇಕೋ ಅದನ್ನು ಸರ್ಕಾರದವರು ಗಮನಿಸಿ ಮಾಡಿಸತಕ್ಕಂಥ ಒಂದು ಕ್ರಮವನ್ನು ಇಟ್ಟುಕೊಂಡಿಲ್ಲ. ಅದಕ್ಕೋಸ್ಕರ ಸರ್ಕಾರದವರಲ್ಲಿ ನನ್ನ ಒಂದು ಸಲಹೆಯೆಂದರೆ, ದಯವಿಟ್ಟು ಈಗಲಾದರೂ ಕೂಡ ಜಿಲ್ಲೆಗೆ ಒಂದರಂತೆ ಆಮೂಲಾಗ್ರವಾದಂಥ ಒಂದು ಯೋಜನೆಯನ್ನು ತಯಾರುಮಾಡಿಸಬೇಕು. ಒಂದೇ ವರ್ಷದಲ್ಲಿ ಎಲ್ಲಾ ಕೆಲಸಗಳನ್ನು ಮುಗಿಸುವುದಕ್ಕಾಗದಿದ್ದರೂ 10 ವರ್ಷಗಳಲ್ಲಾದರೂ ಪೂರೈಸುತ್ತೇವೆಂಬ ಒಂದು ಆತ್ಮನಂಬಿಕೆ ಬರುವಂತೆ ಮಾಡಬೇಕು.

ಇನ್ನು ಕೋಲಾರ ಜಿಲ್ಲೆಯಲ್ಲಿ ಮೈನರ್ ಟ್ಯಾಂಕ್‌ಗಳು ಬಹಳ ಇವೆ. ಮೇಜರ್ ಟ್ಯಾಂಕ್‌ಗಳು ನಮ್ಮ ಭಾಗದಲ್ಲಿ ಇಲ್ಲ. ಅವುಗಳನ್ನು ಪಡೆಯುವ ಭಾಗ್ಯವೂ ಕೂಡ ನಮಗಿಲ್ಲ. ಎಷ್ಟೋ ಕೆರೆಗಳನ್ನು ಸರ್ಕಾರದವರು ರಿಪೇರಿ ಮಾಡಿಸುತ್ತಿದ್ದಾರೆ. ರಿಪೇರಿಯಾದರೂ ಸಹ ಮಳೆ ಬಂದು ಕೆರೆಕಟ್ಟೆಗಳಲ್ಲಿ ನೀರು ನಿಂತರೆ ಮಾತ್ರ ರೈತರಿಗೆ ಅನುಕೂಲವಾಗುತ್ತದೆ. ಸರ್ಕಾರದವರೇನೂ ಮಳೆ ಸುರಿಸುವುದಕ್ಕಾಗುವುದಿಲ್ಲ. ಕೆರೆಯ ಕೆಳಗಡೆ ಇರತಕ್ಕಂಥ ಭೂಮಿಯಲ್ಲಿ ಬೆಳೆ ಬೆಳೆಯಬೇಕಾದರೆ ಎರಡು ಸಲ ಕೆರೆ ತುಂಬಬೇಕಾಗುತ್ತದೆ. ಯಾವುದಾದರೂ ಒಂದು ಮಳೆ ಬಂದು ಮತ್ತೊಂದು ಮಳೆ ಬಾರದಿದ್ದರೆ ಬೆಳೆಗಳು ಒಣಗಿ ಹೋಗುತ್ತವೆ. ಈ ವಿಚಾರವನ್ನು ಸಹ ಸರ್ಕಾರದವರು ಗಮನಿಸಬೇಕಾಗಿದೆ. ಈ ವಿಚಾರವನ್ನು ನಾನು ಹೊಸದಾಗಿ ಹೇಳುತ್ತಿಲ್ಲ, ಅನೇಕ ಸಲ ಹೇಳಿದ್ದೇನೆ. ಈ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು. ಮಾನ್ಯ ಮಂತ್ರಿಗಳು ಈ ಸಾರಿಯೂ ಸಹ ದಯಾಪೂರಿತವಾದಂಥ ಜವಾಬು ಕೊಡುತ್ತಾರೆ. ಆದರೆ ಯಾವ ಕ್ರಮಗಳನ್ನೂ ತೆಗೆದುಕೊಳ್ಳುವುದಿಲ್ಲ. ಕೋಲಾರ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಸಣ್ಣ ಸಣ್ಣ ಕೆರೆಗಳು ಹೆಚ್ಚು ಇವೆ. ಮಳೆ ಬಾರದಿದ್ದಾಗ ನೀರು ಕೆರೆಯಲ್ಲಿ ಇರುವುದಿಲ್ಲ. ಆದ್ದರಿಂದ ಅಚ್ಚುಕಟ್ಟು ಪ್ರದೇಶಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕಿಸಿದರೆ ಬೆಳೆ ಏನಾದರೂ ಒಣಗಿಹೋಗುವ ಸಂದರ್ಭ ಬಂದಾಗ ನೀರನ್ನು ಒದಗಿಸುವುದಕ್ಕೆ ಅನುಕೂಲವಾಗುತ್ತದೆ. ಬೋರ್‌ವೆಲ್ಸ್ ಹಾಕಿಸಿಕೊಡಬೇಕೆಂದು ಸರ್ಕಾರದವರಲ್ಲಿ ಪದೇ ಪದೇ ಬೇಡಿಕೊಳ್ಳುತ್ತಿದ್ದೇನೆ. ಈಗಲೂ ಸಹ ಒತ್ತಾಯಪೂರ್ವಕವಾಗಿ ಮಾನ್ಯ ಸಚಿವರಲ್ಲಿ ಬಹಳ ಸೌಜನ್ಯತೆಯಿಂದ ಬೇಡಿಕೊಳ್ಳುತ್ತಿದ್ದೇನೆ, ಈ ಒಂದು ಕಾರ್ಯವನ್ನು ಆದಷ್ಟು ಜಾಗ್ರತೆ ಎಲ್ಲಾ ಅಚ್ಚುಕಟ್ಟು ಪ್ರದೇಶಗಳಲ್ಲೂ ಮಾಡಿಸಿಕೊಡಬೇಕೆಂದು. ಸರ್ಕಾರದವರು ಒಂದೇ ಸಾರಿ ಎಲ್ಲಾ ಕಡೆಗಳಲ್ಲಿ ಮಾಡಿಸುವುದಕ್ಕೆ ಹಣದ ತೊಂದರೆಯಾದರೆ ಕೆಲವು ಕಡೆಯಾದರೂ ಮಾಡಿಸಲಿ. ಅದರಿಂದ ಆಗತಕ್ಕಂಥ ಫಲವನ್ನು ನೋಡಿ. ನಂತರ ಹೆಚ್ಚು ಹೆಚ್ಚು ಬೋರ್‌ವೆಲ್‌ಗಳನ್ನು ಹಾಕಿಸಿಕೊಡಿ. ಇದರಿಂದ ರೈತರಿಗೆ ಬಹಳ ಅನುಕೂಲ ಮಾಡಿಕೊಟ್ಟಂತಾಗುತ್ತದೆಯಲ್ಲದೆ ಅವರಿಗೆ ಬಹಳ ಸಂತೋಷವೂ ಆಗುತ್ತದೆ. ಆದ್ದರಿಂದ ಈ ಕೆಲಸವನ್ನು ಹಂತ ಹಂತವಾಗಿಯಾದರೂ ಮಾಡಿಸಬೇಕೆಂದು ಸರ್ಕಾರದವರಲ್ಲಿ ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಇನ್ನು ಪಾಲಾರ್ ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಹಿಂದಿನ ಇಂಟರ್ ಸ್ಟೇಟ್ ಅಗ್ರಿಮೆಂಟ್ ಅಡ್ಡಿಯಾಗಿದೆ. ಈ ಯೋಜನೆಯ ಬಗ್ಗೆ ತಯಾರಾದಂಥ ಎಸ್ಟಿಮೇಟ್ ಕೊಳೆಯುತ್ತಿದೆ. 1924ರಲ್ಲಿ ಆದಂಥ ಈ ಅಗ್ರಿಮೆಂಟ್‌ನ್ನು ಮಾನ್ಯ ಮಂತ್ರಿಗಳು ಪುನರ್ ಆಲೋಚಿಸಿ ಸರಿಮಾಡಿಸಬೇಕೆಂದು ಬೇಡಿಕೊಳ್ಳುತ್ತೇನೆ. ಕೋಲಾರ ಜಿಲ್ಲೆಯು ರಾಯಲಸೀಮೆಯ ಜಿಲ್ಲೆಗಳ ರೀತಿಯಲ್ಲಿ ಕ್ಷಾಮಕ್ಕೆ ಹೆಸರಾದ ಜಿಲ್ಲೆ. ಆದರೆ ಕಡಪದಲ್ಲಿ ಏನಾಗಿದೆ ಅಂದರೆ, ಅಲ್ಲಿ ತುಂಗಾಭದ್ರಾ ನಾಲೆ ಬಂದಿದೆ. ಅಲ್ಲಿನ ಜನರು ಬಹಳ ಕ್ಷೇಮವಾಗಿರುವುದನ್ನು ನೋಡಿದರೆ ನಮಗೆ ಅಸೂಯೆ ಉಂಟಾಗುತ್ತದೆ. ನಮಗೆ ಅಂಥ ಸೌಕರ್ಯ ಒದಗಿಸಿಕೊಡುವ ಮನಸ್ಸಿಲ್ಲವೇ, ಅಥವಾ

ಮನಸ್ಸು ಇದ್ದರೂ ಸಾಧ್ಯವಿಲ್ಲವೋ ಎನ್ನತಕ್ಕಂತಹ ಪ್ರಶ್ನೆ ಇದೆ. ಇವತ್ತು ಕಾವೇರಿ ನೀರನ್ನು ಬೆಂಗಳೂರಿಗೆ ಒದಗಿಸುವುದಕ್ಕೆ ಸಾಧ್ಯವಿದೆ. ನಮಗೂ ತುಂಗಭದ್ರಾ ಸಮೀಪವಾಗಿದೆ. ಹಿಂದೆ ಶ್ರೀಮಾನ್ ಪ್ರಕಾಶಂರವರು ಮದ್ರಾಸ್ ರಾಜ್ಯದಲ್ಲಿ ಮಂತ್ರಿಯಾಗಿರುವಾಗ, ತುಂಗಭದ್ರಾ ನೀರನ್ನು ನೇರವಾಗಿ ಕೋಲಾರ ಜಿಲ್ಲೆಗೆ ತರಲು ಅವಕಾಶಇದೆ ಎಂದು ಹೇಳಿದ್ದರು. ಅವರಿಗೆ ಇದ್ದ ಕರುಣೆ ನಿಮಗೆ ಏಕೆ ಇಲ್ಲ? ಸರ್ಕಾರದವರು ಇದಕ್ಕೆ ಪ್ರಯತ್ನ ವಾದರೂ ಮಾಡಲಿ. ಇನ್ನು schedule of rates ವಿಚಾರ. ಟ್ಯಾಂಕ್ಸ್ ಕೆಲಸಕ್ಕೆ ಲಿಫ್ಟಿಂಗ್, ವಾಟರಿಂಗ್ ಮುಂತಾದುವುಗಳನ್ನು ಎಲ್ಲಾ ಸೇರಿಸಿ ಮಾಡಿರುತ್ತಾರೆ. ಆದರೆ ವಾಸ್ತವಿಕವಾಗಿ ಏನು ಮಾಡುತ್ತಾರೆ? ಮಣ್ಣು ಕಟ್ಟಿ ಹಾಕಿರುತ್ತಾರೆ, ಮಳೆ ಬಂದರೆ ತಾನಾಗಿಯೇ ಕರಗಿಹೋಗುತ್ತದೆ. ರೇಟ್ ಎಷ್ಟೋ ಜಾಸ್ತಿ ಮಾಡಿರುತ್ತಾರೆ. ಮುಂದಿನ ವರ್ಷಕ್ಕೆ ಹೊಸದಾಗಿ ಶೆಡ್ಯೂಲ್ ತಯಾರು ಮಾಡುತ್ತಾರೆ. ಇದನ್ನೆಲ್ಲಾ ತಜ್ಞರಿಂದ ಕೂಲಂಕುಷ ವಾಗಿ ಪರಿಶೀಲನೆ ಮಾಡಬೇಕು.

ಇನ್ನು ರಸ್ತೆಗಳ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಸ್ವಾತಂತ್ರ್ಯಬಂದು 21 ವರ್ಷವಾದರೂ ಕೂಡ ಇವತ್ತು ಹಳ್ಳಿಯವನು ಮನೆಯಿಂದ ರಸ್ತೆಗೆ ಬರಬೇಕಾದರೆ, ಬಹಳ ಕಷ್ಟವಾಗುತ್ತದೆ. ಪ್ರತಿ ವರ್ಷ ರಸ್ತೆಯನ್ನು ರಿಪೇರಿ ಮಾಡುತ್ತಾರೆ, ಆಗಿರುವ ರಸ್ತೆಯನ್ನೇ ಮಾಡುತ್ತಿದ್ದಾರೆ. ಹಳ್ಳಿಯವನು ತಲೆಯಮೇಲೆ ಸಾಮಾನು ಹೊತ್ತುಕೊಂಡು ಹೋಗುವು ದಕ್ಕಾಗುವುದಿಲ್ಲ. ಅವನ ಕಷ್ಟವನ್ನು ಯಾರು ಗಮನಿಸಬೇಕು? ಇಲಾಖೆಯಲ್ಲಿರತಕ್ಕ ಅಧಿಕಾರಿ ಗಳು ಇದನ್ನೆಲ್ಲಾ ನೋಡುತ್ತಿಲ್ಲ. ಇದನ್ನು ಮಾನ್ಯ ಸಚಿವರಿಗೆ ಬರೆದು ಕೂಡ ಕಳಿಸಿದೆ. ಏನು ಅವರ ಪಾಲಿಗೆ ಸರ್ಕಾರ ಇಲ್ಲವೇ ಎಂಬುದನ್ನು ಸರ್ಕಾರದವರು ಯೋಚಿಸಬೇಕು.

ಇನ್ನು ಎಲೆಕ್ಟ್ರಿಸಿಟಿ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಆಗಲೇ ಮಾನ್ಯ ಸಚಿವರು ಹೇಳಿದರು, ಜನರಿಗೆ ಉತ್ತೇಜನ ಕೊಡಬೇಕೆಂದು. ಇವತ್ತು ಸಾಲ ಕೊಡುತ್ತಾರೆ, ಪಂಪ್ ಕೊಡುತ್ತಾರೆ. ಅದೇರೀತಿಯಲ್ಲಿ ಪಂಪ್‌ಹೌಸಿಗೂ ಸಾಲ ಕೊಡಬೇಕು. ಇವತ್ತು ಬಡವನು ಒಂದು ಸಾವಿರ ರೂಪಾಯಿ ಇಲೆಕ್ಟ್ರಿಸಿಟಿಗೋಸ್ಕರ ಡಿಪಾಸಿಟ್ ಮಾಡಬೇಕೆಂದರೆ ಅದು ಅವನಿಗೆ ಸಾಧ್ಯವೇ? ಎಂಬುದನ್ನು ದಯವಿಟ್ಟು ಯೋಚನೆ ಮಾಡಬೇಕು. ಇವತ್ತು ರೈತರನ್ನು ಹುರಿದುಂಬಿಸುವುದಕ್ಕೆ ಅವನಿಗೆ ಹೆಚ್ಚು ಹೆಚ್ಚು ಸರ್ಕಾರ ಸಹಾಯವನ್ನು ಕೊಡಬೇಕು. ರೈತರೇ ಅರ್ಜಿ ಹಾಕಿ ಮುಂದೆ ಬಂದಾಗ ಅದನ್ನು ಸಕಾಲದಲ್ಲಿ ಅವನಿಗೆ ಒದಗಿಸಬೇಕು. ಇಲಾಖೆಯವರ ತಪ್ಪು ಎಂದು ನಾನು ಹೇಳುವುದಿಲ್ಲ. ಆದರೆ ಸಕಾಲದಲ್ಲಿ ಮೆಟೀರಿಯಲ್ಸ್ ಇರುವುದಿಲ್ಲ. ಕೆಲವು ಕಡೆ ಬೇಕಾದಷ್ಟು ವಿದ್ಯುಚ್ಛಕ್ತಿ ಇದೆ, ಆದರೆ ಕೆಲಸ ಮಾಡುವ ಸಿಬ್ಬಂದಿ ಇಲ್ಲ. ಇವತ್ತು ಪಾಸ್ ಮಾಡಿಕೊಂಡಿರತಕ್ಕ ತರುಣರು ಹಲವಾರು ಜನ ಇದ್ದಾರೆ. ಅವರನ್ನೆಲ್ಲಾ ಈ ಉದ್ಯೋಗಗಳಿಗೆ ನೇಮಿಸಿ, ಇರಿಗೇಶನ್ ಪಂಪ್‌ಸೆಟ್ಟು ಹೆಚ್ಚು ಹೆಚ್ಚಾಗಿ ಎಲ್ಲಾ ಕಡೆ ಒದಗಿಸಿಕೊಡಬೇಕೆಂದು ಸರ್ಕಾರ ದವರಲ್ಲಿ ಅರಿಕೆ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. DEPUTY SPEAKER.—The House will now rise and meet tomorrow, the 20th March 1968 at 1-00 P.M.

The House adjourned at Seven Minutes past Seven of the clock to meet again at one of the Clock on Wednesday the 20th March 1968.

WD 10638—GPB—600—2-7 68